ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 8 ಗುರುವಾರ 2023


ಸಂಪುಟ: 44 | ಸಂಚಿಕೆ: 53 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಡಿನೋಟಿಫಿಕೇಷನ್ ಕೇಸ್ ರದ್ದುಪಡಿಸಿದ ಹೈಕೋರ್ಟ್



ಬೆಂಗಳೂರು: ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಡಿನೋಟಿಫಿಕೇಷನ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ. ಆ ಮೂಲಕ ಬಿ.ಎಸ್. ಯಡಿಯೂರಪ್ಪ ಅವರಿಗೆ ಬಿಗ್ ರಿಲೀಫ್ ನೀಡಿದೆ. 2015ರಲ್ಲಿ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಲಾಗಿತ್ತು. ಈ ಹಿಂದೆ ಸಿಎಜಿ ವರದಿ ಆಧರಿಸಿದ 15 ಕೇಸ್ ಹೈಕೋರ್ಟ್ ● 9ನೇ ಪುಟಕ್ಕೆ

ಕಾಂತರಾಜ್ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ವಯ

ರಾಜ್ಯದಲ್ಲಿ ಸಾಮಾಜಿಕ ನ್ಯಾಯ ಸ್ಥಾಪನೆ

● ಸಿಎಂ ಸಿದ್ದರಾಮಯ್ಯ ಘೋಷಣೆ ● ಹಿಂದಿನ ತಮ್ಮ ಸರ್ಕಾರವೇ ಈ ಆಯೋಗ ರಚಿಸಿತ್ತು: ಅದು ನೀಡಿದಂತಹ ವೈಜ್ಞಾನಿಕ ವರದಿಯನ್ನು ನಾವು ಈಗ ಜಾರಿ ಮಾಡ್ತೇವೆ

ಬೆಂಗಳೂರು, ಜೂ.7(ಕೆಎಂಶಿ)– ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಸ್ವೀಕರಿಸಿ ಅದನ್ನು ಅನುಷ್ಠಾನಗೊಳಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಣೆ ಮಾಡಿದ್ದಾರೆ.

ಶೈಕ್ಷಣಿಕ ಸಮೀಕ್ಷಾ ವರದಿಯನ್ವಯ ದತ್ತಾಂಶದ ಆಧಾರದಲ್ಲಿ ವಿವಿಧ ಸಮುದಾಯಗಳಿಗೆ ಅನುಕೂಲ ಮಾಡಿಕೊಡುವುದಾಗಿ ಅವರು ತಿಳಿಸಿದ್ದಾರೆ.

ಅವರು ಬುಧವಾರ ಗೃಹ ಕಚೇರಿ ಕೃಷ್ಣಾದಲ್ಲಿ ಕರ್ನಾಟಕ ಶೋಷಿತ ವರ್ಗಗಳ ಮಹಾ ಒಕ್ಕೂಟದ ನಿಯೋಗವನ್ನು ಭೇಟಿಯಾದ ಬಳಿಕ ಮಾತನಾಡಿದ ಅವರು, ಹಿಂದಿನ ಬಾರಿ ನನ್ನ ಸರ್ಕಾರದ ಅವಧಿಯಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಹಮ್ಮಿಕೊಳ್ಳಲಾದ ಜಾತಿವಾರು ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಕಾಯಕಲ್ಪ ನೀಡುವ ಭರವಸೆ ನೀಡಿದ್ದಾರೆ. ಉದ್ಯೋಗ, ಶಿಕ್ಷಣ, ಸರ್ಕಾರದ ವಿವಿಧ ಯೋಜನೆಗಳು ಸಂಬಂಧಪಟ್ಟ ಫಲಾನುಭವಿಗಳಿಗೆ ತಲುಪಲು ವೈಜ್ಞಾನಿಕ ಹಾಗೂ ನಿಖರ ಮಾಹಿತಿ ಅಗತ್ಯವಿದೆ. ಅಂತಹ ಮಾಹಿತಿ ಸಿದ್ಧಪಡಿಸಲೆಂದೇ ಕಾಂತರಾಜ್ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಸಮಿತಿ ನೇಮಕ ಮಾಡಿದ್ದು, ಅವರು ವರದಿ ಸಿದ್ಧಪಡಿಸಿದ್ದಾರೆ. ಈ ವರದಿ ಸ್ವೀಕರಿಸಿ ಅನುಷ್ಠಾನಗೊಳಿಸುವಷ್ಟರಲ್ಲಿ ನಮ್ಮ ಸರ್ಕಾರ ಬದಲಾಯಿತು. ನಂತರ ಬಂದ ಮೈತ್ರಿ ಸರ್ಕಾರದಲ್ಲೂ ಜಾರಿಗೊಳಿಸಲಾಗಲಿಲ್ಲ. ಆನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ, ಆ ವರದಿಯನ್ನು ಮೂಲೆಗೆಸೆದಿತ್ತು.

ಜಾತಿವಾರು ಸಮೀಕ್ಷೆಯಿಂದ ಜನರಿಗೆ ಒದಗಿಸಬೇಕಾದ ಸೌಲಭ್ಯಗಳು ಮೊದಲಾದ ಅಂಶಗಳ



ಕುರಿತು ದತ್ತಾಂಶ ಲಭ್ಯವಾಗುವುದು. ಮೀಸಲಾತಿ ಮತ್ತಿತರ ಸೌಲಭ್ಯ ಒದಗಿಸಲು ಒಂದು ವೈಜ್ಞಾನಿಕ ವರದಿ ಸರ್ಕಾರಕ್ಕೆ ಅಗತ್ಯವಿದೆ. ಇಂತಹ ವರದಿಯನ್ನು ಹಿಂದುಳಿದ ವರ್ಗಗಳ ಆಯೋಗ ನೀಡಿದೆ.

ಇದನ್ನೇ ಮುಂದಿಟ್ಟುಕೊಂಡು ಬಿಜೆಪಿ ಸರ್ಕಾರವು ಮೀಸಲಾತಿಯಲ್ಲಿ ಸೃಷ್ಟಿಸಿದ ಗೊಂದಲ ನಿವಾರಣೆ ಮಾಡಲಾಗುವುದು. ಇಲ್ಲವಾದರೆ ಯಾರಿಗೂ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಾಗುವುದಿಲ್ಲ ಎಂದು ಮುಖ್ಯಮಂತ್ರಿ ತಿಳಿಸಿದರು.

ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 162 ಕೋಟಿ ರೂ. ವೆಚ್ಚದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಮೂಲಕ ಜಾತಿವಾರು, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯನ್ನು ಸಿದ್ಧಪಡಿಸಿದ್ದರು. ಅವರು ಸಿದ್ಧಪಡಿಸಿದ್ದ ವರದಿಯನ್ನೇ ಸ್ವೀಕರಿಸಿ ಅನುಷ್ಠಾನಗೊಳಿಸಲು ಸಾಧ್ಯವಾಗಲಿಲ್ಲ. ವರದಿ ಸಿದ್ಧಗೊಂಡ ಸಂದರ್ಭದಲ್ಲೇ ರಾಜ್ಯ ವಿಧಾನಸಭೆಗೆ ಚುನಾವಣೆ ಎದುರಾದ ಹಿನ್ನೆಲೆಯಲ್ಲಿ ಆಗಲೇ ವಿವಾದ ಸೃಷ್ಟಿಸಿದ್ದ ವರದಿಯನ್ನು ಮುಟ್ಟಲು ಹಿಂದೇಟು ಹಾಕಿದರು. ಸಮೀಕ್ಷೆಗೆ ಬಿಜೆಪಿ, ಜೆಡಿಎಸ್ ಸೇರಿದಂತೆ ಸಾರ್ವಜನಿಕವಾಗಿ ಕೆಲ ವರ್ಗದಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು ಬದಲಾದ ರಾಜಕೀಯ ಸನ್ನಿವೇಶದಲ್ಲಿ ಜೆಡಿಎಸ್–ಕಾಂಗ್ರೆಸ್ ನೇತೃತ್ವದ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬಂದ ಸಂದರ್ಭದಲ್ಲಿ ಅಂದಿನ ಸರ್ಕಾರದ ಸಚಿವರಾಗಿದ್ದ ಪುಟ್ಟರಂಗಶೆಟ್ಟಿ ಸಮೀಕ್ಷೆ ಅನುಷ್ಠಾನಗೊಳಿಸುವ ಪ್ರಸ್ತಾಪ ಮುಂದಿಟ್ಟಿದ್ದರು. ಇದಕ್ಕೆ ತೀವ್ರ ವಿರೋಧ ವ್ಯಕ್ತಗೊಂಡ ಹಿನ್ನೆಲೆಯಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ವಿವಾದ ತಲೆ ಎತ್ತದಂತೆ ನೋಡಿಕೊಂಡರು. ಆ ನಂತರ ಬಂದ ಬಿಜೆಪಿ ಸರ್ಕಾರ ಈ ಸಮೀಕ್ಷೆಯ ಗೊಡವೆಯೇ ಬೇಡವೆಂದು ಸುಮ್ಮನಾಗಿತ್ತು. ಇದೀಗ ಮತ್ತೆ ಅಧಿಕಾರಕ್ಕೆ ಬಂದಿರುವ ಸಿದ್ದರಾಮಯ್ಯ ವರದಿ ಸ್ವೀಕರಿಸಿ ಅನುಷ್ಠಾನಗೊಳಿಸುವ ಪ್ರಸ್ತಾಪವಿಟ್ಟಿದ್ದಾರೆ.

ರಾಜ್ಯದಲ್ಲಿ 2.14 ಕೋಟಿ ಗ್ರಾಹಕರಿಗೆ ಉಚಿತ ವಿದ್ಯುತ್ ಯೋಜನೆ ಫಲ

● ಇಂಧನ ಸಚಿವ ಕೆ.ಜೆ. ಜಾರ್ಜ್ ವಿವರಣೆ ● ಉಚಿತ ವಿದ್ಯುತ್ ನೀಡಿದರೂ ಸಮರ್ಪಕ ರೀತಿ ವಿತರಣೆ ● ಸ್ವಂತ, ಬಾಡಿಗೆ ಮನೆವುಳ್ಳವರು, ಸರ್ಕಾರಿ ನೌಕರರು, ಐಟಿ ಸೇರಿದಂತೆ ಎಲ್ಲಾ ರೀತಿಯ ತೆರಿಗೆದಾರರಿಗೂ ಉಚಿತ ವಿದ್ಯುತ್

ಬೆಂಗಳೂರು, ಜೂ.7(ಕೆಎಂಶಿ)– ಇನ್ನೂರು ಯುನಿಟ್‌ಗಿಂತ ಕಡಿಮೆ ವಿದ್ಯುತ್ ಬಳಕೆ ಮಾಡುವ ಎಲ್ಲಾ ಗ್ರಾಹಕರಿಗೆ ಉಚಿತ ಸೌಲಭ್ಯ ದೊರೆಯಲಿದೆ ಎಂದು ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಜನೆ ಲಾಭ ಪಡೆಯಲಿಚ್ಛಿಸುವವರು ಜೂ.15ರಿಂದ ನೋಂದಣಿ ಮಾಡಿಕೊಳ್ಳಬೇಕು ಎಂದರು.

ಆ.1ರಿಂದ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಒಂದಲ್ಲ ಒಂದು ಗೊಂದಲ ನಿರ್ಮಾಣವಾಗುತ್ತಿವೆ. ನಾವು ಎಷ್ಟೇ ತೆರೆ ಎಳೆದರೂ ದಿನನಿತ್ಯ ಈ ಸಂಬಂಧ ಒಂದು ಸಮಸ್ಯೆ ಎದುರಾಗುತ್ತಿದೆ. ಆದರೂ ನಮ್ಮ ನಿರ್ಧಾರದಿಂದ ನಾವು ಹಿಂದೆ ಸರಿದಿಲ್ಲ. ಇನ್ನೂ ಕೆಲವು





ಸಮಸ್ಯೆಗಳಿವೆ. ಅವುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಮಾಲೋಚಿಸಿ ಬಗೆಹರಿಸುತ್ತೇನೆ. ನಾವು ಈ ಯೋಜನೆ ಅನುಷ್ಠಾನ ಗೊಳಿಸುವುದರಿಂದ 2.14 ಕೋಟಿ ಗ್ರಾಹಕರಿಗೆ ಲಾಭವಾಗಲಿದೆ. ಸರಾಸರಿ ಪ್ರತಿ ಕುಟುಂಬಕ್ಕೆ 53 ಯುನಿಟ್ ಬಳಕೆ ಲೆಕ್ಕಾಚಾರವಿದೆ. ಇದಕ್ಕಾಗಿ 14852 ಮಿಲಿಯನ್ ಯುನಿಟ್ ಬಳಕೆಯಾಗಲಿದೆ. ಇದರಿಂದ ವಾರ್ಷಿಕ ವೆಚ್ಚ 13 ಸಾವಿರ ಕೋಟಿ ರೂ. ಹೊರೆಯಾಗಬಹುದು ಎಂಬ ನಿರೀಕ್ಷೆ ಇದೆ.

ಒಟ್ಟಾರೆ ರಾಜ್ಯದಲ್ಲಿ 2.16 ಕೋಟಿ ಕುಟುಂಬಗಳು ವಿದ್ಯುತ್ ಸಂಪರ್ಕ ಹೊಂದಿದ್ದು, ಅದರಲ್ಲಿ 200ಕ್ಕೂ ಹೆಚ್ಚು ಯುನಿಟ್ ಬಳಕೆ ಮಾಡುವವರ ಗ್ರಾಹಕರ ಸಂಖ್ಯೆ 2 ಲಕ್ಷ ಕುಟುಂಬಗಳು ಮಾತ್ರ. ಉಳಿದವರೆಲ್ಲರೂ ನಮ್ಮ ಯೋಜನೆಯಡಿ ಬರುವವರೇ ಆಗಿದ್ದಾರೆ. ಉಚಿತ ವಿದ್ಯುತ್ ನೀಡುತ್ತೇವೆ ಎಂದ ಮಾತ್ರಕ್ಕೆ ಸಮರ್ಪಕ ವಿದ್ಯುತ್ ನೀಡುವುದಿಲ್ಲ ಎಂಬ ಭಾವನೆ ಬೇಡ. ನಮ್ಮಲ್ಲೇ ಅಗತ್ಯ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಒಂದು ವೇಳೆ ಅಗತ್ಯ ಬಿದ್ದರೆ ಕಡಿಮೆ ದರದಲ್ಲಿ ವಿದ್ಯುತ್ ಖರೀದಿಸಲಾಗುವುದು ಎಂದು ಹೇಳಿದರು.

ಸ್ವಂತ ಮನೆ, ಬಾಡಿಗೆ ಮನೆ, ಸರ್ಕಾರಿ ನೌಕರರು, ಆದಾಯ ತೆರಿಗೆದಾರರು ಸೇರಿದಂತೆ ಯಾರೇ ಆದರೂ 200 ಯೂನಿಟ್ ಒಳಗೆ ವಿದ್ಯುತ್ ಬಳಕೆ ಮಾಡುತ್ತಿದ್ದರೆ ಅವರಿಗೆ ಶುಲ್ಕ ವಿನಾಯಿತಿ ದೊರೆಯಲಿದೆ.

ನೋಂದಣಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಪ್ರತ್ಯೇಕವಾದ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರತಿದಿನ 5ರಿಂದ ● 9ನೇ ಪುಟಕ್ಕೆ

ಜಿಎಸ್‌ಟಿ, ತೆರಿಗೆ ಪಾವತಿದಾರರಿಗೆ 'ನೋ ಗ್ಯಾರಂಟಿ'

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುನ್ಸೂಚನೆ

ಬೆಂಗಳೂರು, ಜೂ.7(ಕೆಎಂಶಿ)–



ಜಿಎಸ್‌ಟಿ ಮತ್ತು ತೆರಿಗೆ ಪಾವತಿಸುವವರಿಗೆ ಗ್ಯಾರಂಟಿ ಯೋಜನೆಗಳಲ್ಲಿ ಕಡಿತವಾಗುವ ಮುನ್ಸೂಚನೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೀಡಿದ್ದಾರೆ.

ರಾಜ್ಯ ವಿಧಾನಸಭಾ ಚುನಾವಣೆಗೂ ಮುನ್ನ ಐದು ಗ್ಯಾರಂಟಿಗಳನ್ನು ಘೋಷಣೆ ಮಾಡಿ ಅಧಿಕಾರಕ್ಕೆ ಬಂದ ನಂತರ ಪ್ರತಿ ಯೋಜನೆಗೂ ಷರತ್ತು ವಿಧಿಸಿರುವ ಸರ್ಕಾರ ಇದೀಗ ಹೊಸ ಕ್ಯಾತೆ ತೆಗೆದಿದೆ. ತೆರಿಗೆ ಪಾವತಿಸುವವರಿಗೆ ಗ್ಯಾರಂಟಿ ಯೋಜನೆಯಲ್ಲಿ ಕೆಲವು ಸೌಲಭ್ಯಗಳು ದೊರೆಯುವುದಿಲ್ಲ ಎಂಬುದನ್ನು ಉಪ ಮುಖ್ಯಮಂತ್ರಿಗಳು ಪರೋಕ್ಷವಾಗಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಬಡವರಿಗೆ ಗ್ಯಾರಂಟಿ ನೀಡಲು ನಿರ್ಧರಿಸಿದ್ದೇವೆ. ತೆರಿಗೆ ಹಾಗೂ ಜಿಎಸ್‌ಟಿ ಪಾವತಿದಾರರು ಈ ಯೋಜನೆ ಬೇಕು ಎಂದು ಕೇಳುತ್ತಿಲ್ಲ. ಅನೇಕರು ಈ ಯೋಜನೆ ಬೇಡ ಎಂದು ನಮಗೆ ಪತ್ರ ಬರೆದಿದ್ದಾರೆ. ತೆರಿಗೆ ಪಾವತಿದಾರರು ನಮಗೆ ಮತ ಹಾಕಿದ್ದಾರೆ. ಆದರೆ, ಅವರು ಸಹ ನಮ್ಮನ್ನು ಈ ಯೋಜನೆಗಳನ್ನು ಕೊಡಿ ಎಂದು ಕೇಳುತ್ತಿಲ್ಲ. ಅವರು ಬಡವರ ಪರವಾಗಿದ್ದಾರೆ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜನರ ಮನಸ್ಸಿನಲ್ಲಿ ಕೆಲವು ಗೊಂದಲಗಳಿವೆ. ಆ ಗೊಂದಲವನ್ನು ಸರಿಪಡಿಸುತ್ತೇವೆ. ಎಲ್ಲಾ ಅರ್ಹರಿಗೂ ನಮ್ಮ ಭರವಸೆಗಳು ದೊರೆಯುತ್ತವೆ. ಬಿಜೆಪಿ, ಜನತಾದಳದವರಿಗೆ ಈ ಯೋಜನೆ ಜಾರಿ ಸಹಿಸಿಕೊಳ್ಳಲಾಗುತ್ತಿಲ್ಲ. ಅವರ ಅಸೂಯೆಗೆ ಮದ್ದಿಲ್ಲ. ಅದರಲ್ಲೂ ಬಿಜೆಪಿಯವರು ತಮ್ಮ ಆಡಳಿತದಲ್ಲಿ ನೀಡಿದ ಭರವಸೆ ಈಡೇರಿಸಲಾಗದೆ, ಇದೀಗ ಸಾರ್ವಜನಿಕವಾಗಿ ಜನರಲ್ಲಿ ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಿದ್ದಾರೆ. ಸರ್ಕಾರದಿಂದ ಯಾರಿಗೆ ಒಂದು ರೂಪಾಯಿ ಹಣ ಕೊಟ್ಟರೂ ಅದಕ್ಕೆ ಲೆಕ್ಕ, ಹೊಣೆಗಾರಿಕೆ ಇರಬೇಕು. ಫಲಾನುಭವಿ ಆಗುವವರು ● 9ನೇ ಪುಟಕ್ಕೆ

ಕೊಡಗಿಗೆ ಆಗಮಿಸಿದ ಎನ್‌ಡಿಆರ್‌ಎಫ್ ತಂಡ

● ಮೊದಲ ಹಂತದಲ್ಲಿ 23 ಯೋಧರ ತಂಡ ಆಗಮನ
● ಮಳೆಗಾಲದ ಅನಾಹುತಗಳ ತಡೆಗೆ ಸಿದ್ಧತೆ



ಮಡಿಕೇರಿ, ಜೂ.7– ಇನ್ನೇನು ಕೆಲವೇ ದಿನಗಳಲ್ಲಿ ಮಳೆಗಾಲ ಆರಂಭವಾಗಲಿರುವುದರಿಂದ ಕೊಡಗಿನಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಎನ್‌ಡಿಆರ್‌ಎಫ್ ತಂಡ ಬುಧವಾರ ಮಡಿಕೇರಿಗೆ ಆಗಮಿಸಿದೆ. ಆಂಧ್ರ ಪ್ರದೇಶದ ವಿಜಯವಾಡದಿಂದ 10ನೇ ಬೆಟಾಲಿಯನ್ ಎನ್‌ಡಿಆರ್‌ಎಫ್ ತಂಡ ಬುಧವಾರ ಸಂಜೆ ಮಡಿಕೇರಿಗೆ ಆಗಮಿಸಿದ್ದು, ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ಅನನ್ಯಕುಮಾರ್ ಈ ತಂಡವನ್ನು ಬರಮಾಡಿಕೊಂಡರು. ಎನ್‌ಡಿಆರ್‌ಎಫ್ ಇನ್ಸ್‌ಪೆಕ್ಟರ್ ಶಾಂತಿಲಾಲ್ ಜಾಟಿಯಾ ನೇತೃತ್ವದಲ್ಲಿ ಒಟ್ಟು 23 ಸದಸ್ಯರಿದ್ದಾರೆ. ಆರ್‌ಟಿಓ ಕಚೇರಿ ಬಳಿ ಇರುವ ಪೊಲೀಸ್ ಭವನದಲ್ಲಿ ವಾಸ್ತವ್ಯ ಹೂಡಿದ್ದಾರೆ.

ಅಗತ್ಯವಿದ್ದಲ್ಲಿ ಹೆಚ್ಚುವರಿಯಾಗಿ ತಂಡವನ್ನು ಕರೆಸಿಕೊಳ್ಳಲಾಗುತ್ತದೆ. ಕಳೆದ ಬಾರಿ 38 ಮಂದಿಯ ತಂಡವನ್ನು ಜಿಲ್ಲೆಗೆ ನಿಯೋಜನೆ ● 9ನೇ ಪುಟಕ್ಕೆ

ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಉಪನ್ಯಾಸಕರು, ಶಿಕ್ಷಕರ ಹುದ್ದೆ ಭರ್ತಿ

ಬೆಂಗಳೂರು, ಜೂ.7(ಕೆಎಂಶಿ)– ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಉಪನ್ಯಾಸಕರು ಹಾಗೂ ಶಿಕ್ಷಕರ ನೇಮಕಾತಿಯಲ್ಲಿ ಎರಡು ವರ್ಷಗಳ ವಯೋಮಿತಿ ಸಡಿಲಿಕೆಗೆ ರಾಜ್ಯ ಸರ್ಕಾರ ಅವಕಾಶ ಮಾಡಿಕೊಟ್ಟಿದೆ.

ಕೊರೊನಾ ಕಾರಣದಿಂದ 2020–21 ಹಾಗೂ 2021–22ನೇ ಸಾಲಿನಲ್ಲಿ ಆರ್ಥಿಕ ಮಿತವ್ಯಯ ಅನುಷ್ಠಾನಗೊಳಿಸಿದ ಪರಿಣಾಮ ನೇಮಕಾತಿಗಳನ್ನು ತಡೆಹಿಡಿಯಲಾಗಿತ್ತು. ಹೀಗಾಗಿ ನೇಮಕಾತಿಯಲ್ಲಿ 2 ವರ್ಷಗಳ ವಯೋಮಿತಿ ಸಡಿಲಿಸುವಂತೆ ಶಾಸಕರು, ಗಣ್ಯವ್ಯಕ್ತಿಗಳು, ಸಂಘ–ಸಂಸ್ಥೆಗಳು ಸರ್ಕಾರದ ಮೇಲೆ ಒತ್ತಡ ತಂದಿದ್ದವು.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ 778 ವಿವಿಧ ವಿಷಯಗಳ ಉಪನ್ಯಾಸಕರುಗಳ ಹುದ್ದೆಗಳಿಗೆ ಹಾಗೂ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ, ಖಾಸಗಿ ಅನುದಾನಿತ ಪ್ರಾಥಮಿಕ ಪ್ರೌಢ ಶಿಕ್ಷಕರ ಹುದ್ದೆಗಳ ಮೊದಲ ನೇಮಕಾತಿಗೆ ಮಾತ್ರ ಅನ್ವಯವಾಗುವಂತೆ 2022ರ ಜೂನ್ 23 ರಿಂದ ಒಂದು ವರ್ಷದ ಅವಧಿಗೆ ಮಾತ್ರ ಸೀಮಿತವಾಗಿ ಗರಿಷ್ಠ ವಯೋಮಿತಿಯಲ್ಲಿ 2 ವರ್ಷಗಳ ಸಡಿಲಿಕೆ ನೀಡಿ ಸರ್ಕಾರ ಆದೇಶಿಸಿದೆ.



ಈ ಹಿಂದೆ ಮೈಸೂರು ಪೊಲೀಸ್ ಆಯುಕ್ತರಾಗಿದ್ದು, ಈಗ ಬೆಂಗಳೂರು ಪೊಲೀಸ್ ಆಯುಕ್ತರಾಗಿರುವ, ಹಿರಿಯ ಐಪಿಎಸ್ ಅಧಿಕಾರಿ ದಯಾನಂದ್ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ನೌಕರರಾದ ಎಂ.ಎಲ್.ರಾಮಲಿಂಗಯ್ಯನವರು ಇತ್ತೀಚೆಗೆ ತಮ್ಮ ಸ್ನೇಹಿತರೊಡಗೂಡಿ ಆತ್ಮೀಯವಾಗಿ ಅಭಿನಂದಿಸಿದರು.

ಮುಂದಿನ ವಾರ ನೀಟ್–ಯುಜಿ ಫಲಿತಾಂಶ

ನವದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಮುಂದಿನ ವಾರ ನೀಟ್–ಯುಜಿ ಫಲಿತಾಂಶ ಪ್ರಕಟಿಸುವ ಸಾಧ್ಯತೆ ಇದೆ ಎಂದು ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯುಜಿಸಿ) ಅಧ್ಯಕ್ಷ ಪ್ರೊ.ಎಂ. ಜಗದೇಶ್‌ಕುಮಾರ್ ಬುಧವಾರ ಹೇಳಿದ್ದಾರೆ. NEET-UG ಪರೀಕ್ಷೆಯ ಫಲಿತಾಂಶವನ್ನು ಮುಂದಿನ ವಾರ ಪ್ರಕಟಿಸಲಾಗುವುದು ಎಂದು ಶಿಕ್ಷಣ ಕುರಿತ ಸಂಸದೀಯ ಸಮಿತಿಗೆ ಯುಜಿಸಿ ಭರವಸೆ ನೀಡಿದೆ ಎಂದು ತಿಳಿದು ಬಂದಿದೆ. ಎನ್‌ಟಿಎ ಮುಂದಿನ ವಾರದ ವೇಳೆಗೆ ಫಲಿತಾಂಶ ಪ್ರಕಟಿಸಲು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರಿಸಿದ ಕುಮಾರ್, ಮುಂದಿನ ವಾರ ಫಲಿತಾಂಶ ಪ್ರಕಟವಾಗಲಿದೆ ● 9ನೇ ಪುಟಕ್ಕೆ

ರಾಮಕೃಷ್ಣನಗರ ಹಸಿರೀಕರಣ; ರಾಘವನ್‌ರಿಗೆ ಇಂದು ಪರಿಸರ ಪೋಷಕ ಪ್ರಶಸ್ತಿ ಪ್ರದಾನ



ರಾಘವನ್

ಮೈಸೂರು, ಜೂ.7–ಮೈಸೂರು ಸುಯೋಗ್ ಆಸ್ಪತ್ರೆ ಮತ್ತು ಸುಯೋಗ್ ಕಾಲೇಜ್ ಆಫ್ ನರ್ಸಿಂಗ್ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರಾಮಕೃಷ್ಣನಗರ ಹಸಿರೀಕರಣ ಯೋಜನೆ, ಪರಿಸರ ಪ್ರೇಮಿ ರಘುಲಾಲ್ ಕಂಪನಿಯ ರಾಘವನ್ ಅವರಿಗೆ ಪರಿಸರ ಪೋಷಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಾಳೆ (ಗುರುವಾರ) ಬೆಳಗ್ಗೆ 11 ಗಂಟೆಗೆ ರಾಮಕೃಷ್ಣನಗರದಲ್ಲಿನ ಆಸ್ಪತ್ರೆ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಹಸಿರೀಕರಣ ಯೋಜನೆಗೆ ಮೇಯರ್ ಶಿವಕುಮಾರ್ ಚಾಲನೆ ನೀಡಲಿದ್ದು, ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ ವಹಿಸಲಿದ್ದಾರೆ. ಹಿರಿಯ ಪರಿಸರ ಅಧಿಕಾರಿ ಪ್ರಕಾಶ್ ಪರಿಸರ ಮಾಲಿನ್ಯ ನಿಯಂತ್ರಣ ಕುರಿತು ಉಪನ್ಯಾಸ ನೀಡಲಿದ್ದಾರೆ. ಪಾಲಿಕೆ ಸದಸ್ಯ ಶರತ್ ಕುಮಾರ್ ಮುಖ್ಯ ಅತಿಥಿಗಳಾಗಿರುವರು. ಇದೇ ವೇಳೆ ಆಸ್ಪತ್ರೆ ಟ್ರಸ್ಟಿ ಶ್ರೀಮತಿ ಸುಧಾ ಯೋಗಣ್ಣ ಉಪಸ್ಥಿತರಿರುವರು.

ವಿಜೃಂಭಣೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಜಯಂತಿ



ಮೈಸೂರು, ಜೂ.7– ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠದ ಶಾಖೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇಗುಲದಲ್ಲಿ ಸೌರಮಾನ ಶ್ರೀ ಲಕ್ಷ್ಮೀನರಸಿಂಹ ಜಯಂತಿಯು ಇತ್ತೀಚೆಗೆ ವಿಜೃಂಭಣೆಯಿಂದ ನಡೆಯಿತು.

ಸಾವಿರಾರು ಭಕ್ತರು ತಮ್ಮ ಭಕ್ತಿ ಸಮರ್ಪಿಸಿದರು. ದೇವಾಲಯವನ್ನು ಜಯಂತಿ ಅಂಗವಾಗಿ ತಳಿರು ತೋರಣಗಳಿಂದ ಸಿಂಗರಿಸಿ, ರಂಗೋಲಿ ಬಿಡಿಸಿ, ಬಣ್ಣ ಬಣ್ಣದ ದೀಪಗಳಿಂದ ಅಲಂಕರಿಸಿ ದೇವರ ಉತ್ಸವ ಮೂರ್ತಿಯನ್ನಿರಿಸಿ, ದೇವಸ್ಥಾನದ ಮುಂಭಾಗದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಮಂಗಳವಾದ್ಯ, ಇತರ ವೇದ ಗೋಷ್ಠಿಗಳೊಂದಿಗೆ ವಿವಿಧ ಹೂವಿನಿಂದ ಅಲಂಕೃತಗೊಂಡ ತಿರುವೀದಿ ಸ್ವಾಮಿ ಉತ್ಸವ ಮೂರ್ತಿಯನ್ನು ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ದಾರಿಯುದ್ದಕ್ಕೂ ತೆಂಗಿನಕಾಯಿ ಇಡುಗಾಯಿ ಹೊಡೆದು ಭಕ್ತರು ಹರಕೆ ತೀರಿಸಿದರು. ದೇವಸ್ಥಾನಕ್ಕೆ ಬಂದ ನಂತರ ಸ್ವಾಮಿಗೆ ನೈವೇದ್ಯ ಸಲ್ಲಿಸಿ, ಮಹಾಮಂಗಳಾರತಿ ಮಾಡಿ, ತೀರ್ಥ, ಪ್ರಸಾದ ವಿನಿಯೋಗ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹಾಗೂ ಕೆ.ಆರ್. ಕ್ಷೇತ್ರದ ಶಾಸಕ ಶ್ರೀವತ್ಸ ಭಾಗವಹಿಸಿದ್ದರು. ವೀರುರಾಘವನ್, ಕರಗಂ ರಾಮಪ್ರಿಯ, ರಾಮು (ಮೇಲುಕೋಟೆ), ತಾತಾಚಾರ್, ವಾಸುಕಿ, ಕೆ.ಆರ್. ಯೋಗನರಸಿಂಹನ್ (ಮುರುಳಿ), ವಿಶ್ವನಾಥ್, ಸಾಯಿರಾಂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವರ ಬೆಂಗಳೂರಿನ ನಿವಾಸದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಭೇಟಿ ಮಾಡಿ, ಆತ್ಮೀಯವಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಜೆಡಿಎಸ್‌ನ ಹಿಂದುಳಿದ ವರ್ಗದ ಮೈಸೂರು ಜಿಲ್ಲಾಧ್ಯಕ್ಷ ಶ್ರೀನಿವಾಸ್, ಜೆಡಿಎಸ್ ಯುವ ಮುಖಂಡ ದಿನೇಶ್‌ಗೌಡ ಉಪಸ್ಥಿತರಿದ್ದರು.



ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ಅವರನ್ನು ಕುಂಬಾರಕೊಪ್ಪಲಿನ ಮುಖಂಡರಾದ ಚೇತನ್, ವಿಷಕಂಠೇಗೌಡ, ಅನಿಲ್, ಬಂಗಾರಪ್ಪ ಇನ್ನಿತರರು ಭಾರೀ ಗಾತ್ರದ ಗುಲಾಬಿ ಹಾರ ಹಾಕಿ, ಆತ್ಮೀಯವಾಗಿ ಅಭಿನಂದಿಸಿದರು.



ಪಡುವಾರಹಳ್ಳಿ ಸ್ನೇಹ ಬಳಗದಿಂದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಪುಣ್ಯಸ್ಮರಣೆ ಹಮ್ಮಿಕೊಳ್ಳಲಾಗಿತ್ತು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ಡಿ.ಕುಮಾರ್, ಕೇಬಲ್ ಕಿಟ್ಟಿ, ಸಿ.ಸಂತೋಷ, ಅವಿನಾಶ್, ಪ್ರಕಾಶ್ ಇತರರು ಈ ವೇಳೆ ಉಪಸ್ಥಿತರಿದ್ದರು.


ನಿಧನ

ತಡಿಯಂಗಡ ಗಣಪತಿ



ಮೈಸೂರು, ಜೂ. 7– ಮೈಸೂರಿನ ವಿಜಯನಗರದ ಮೊದಲ ಹಂತ, ಜನರಲ್ ತಿಮ್ಮಯ್ಯ ರಸ್ತೆ, ಮನೆ ನಂ.836 ನಿವಾಸಿ ಹಾಗೂ ನಿವೃತ್ತ ಎಸ್‌ಬಿಐ ನೌಕರ ತಡಿಯಂಗಡ ಗಣಪತಿ (ಗಣೇಶ) ಬುಧವಾರ ಬೆಳಗ್ಗೆ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ಬುಧವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಹಿತಿಗೆ ಮೊ.99002–16150 ಸಂಪರ್ಕಿಸಬಹುದು.

ಗುರುಮೂರ್ತಿ ಎಸ್. ಭಾರದ್ವಾಜ್



ಮೈಸೂರು ನಗರದ ಬೋಗಾದಿಯ ಬಾಲಗಂಗಾಧರ್ ಲೇಔಟ್‌ನ ನಿವಾಸಿ ಹಾಗೂ ಸಮಾಜ ಸೇವಕರಾದ ಗುರುಮೂರ್ತಿ ಎಸ್.ಭಾರದ್ವಾಜ್(74) ನಿಧನರಾದರು. ಮೃತರು ಪತ್ನಿ ಬಿ.ಜಿ.ಭಾಗ್ಯಲಕ್ಷ್ಮೀ, ಇಬ್ಬರು ಗಂಡು ಮಕ್ಕಳು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ವಿಜಯನಗರದ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ವತಿಯಿಂದ ಸಹಕಾರಿಗಳೂ ಆದ ಸಚಿವರು, ಶಾಸಕರಿಗೆ ಸನ್ಮಾನ



ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ವತಿಯಿಂದ ಹಿರಿಯ ಸಹಕಾರಿಗಳೂ ಆದ ನೂತನ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್, ಕೃಷಿ ಉತ್ಪನ್ನ ಮಾರುಕಟ್ಟೆ ಟೆಕ್ಸ್‌ಟೈಲ್ ಹಾಗೂ ಸಕ್ಕರೆ ಸಚಿವ ಶಿವಾನಂದ ಪಾಟೀಲ್, ಸಹಕಾರ ಸಚಿವ ಕೆ.ಎನ್. ರಾಜಣ್ಣ ಮತ್ತು ಹುಣಸೂರು ನೂತನ ಶಾಸಕ ಜಿ.ಡಿ. ಹರೀಶ್ ಗೌಡ ಅವರನ್ನು ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ಅಧ್ಯಕ್ಷರೂ ಆದ ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಅವರು ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಸಹಕಾರ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಉಮಾಶಂಕರ್, ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ರಾಜೇಂದ್ರ ಅವರನ್ನೂ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಹಾ ಮಂಡಳದ ಉಪಾಧ್ಯಕ್ಷರು, ನಿರ್ದೇಶಕರುಗಳು, ಸಹಕಾರಿಗಳು ಹಾಗೂ ಮಹಾಮಂಡಳದ ಅಧಿಕಾರಿಗಳು ಉಪಸ್ಥಿತರಿದ್ದರು.

ಜೂ.11, ಕಿಡ್ಡಾಥಾನ್ ಮಕ್ಕಳ ಓಟ ಸ್ಪರ್ಧೆ



ಮೈಸೂರು, ಜೂ.7 (ಪಿಎಂ)– ಮೈಸೂರು ಎಲೈಟ್ ರೌಂಡ್ ಟೇಬಲ್ 256 ಮತ್ತು ಮೈಸೂರು ಎಲೈಟ್ ಲೇಡಿಸ್ ಸರ್ಕಲ್ 141ರ ಜಂಟಿ ಆಶ್ರಯದಲ್ಲಿ ಜೂ.11ರಂದು 5ನೇ ಆವೃತ್ತಿಯ ಮಕ್ಕಳ ಓಟದ ಸ್ಪರ್ಧೆ 'ಕಿಡ್ಡಾಥಾನ್' ಅನ್ನು ಆಯೋಜಿಸಲಾಗಿದೆ ಎಂದು ಮೈಸೂರು ಎಲೈಟ್ ರೌಂಡ್ ಟೇಬಲ್ 256ರ ಅಧ್ಯಕ್ಷ ಪವನ್ ಬರ್ಗಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 6ಕ್ಕೆ ಓವೆಲ್ ಮೈದಾನದಲ್ಲಿ ಕಿಡ್ಡಾಥಾನ್ ನಡೆಯಲಿದೆ. 2ರಿಂದ 5 ವರ್ಷ (400 ಮೀ.), 6ರಿಂದ 8 ವರ್ಷ (1 ಕಿ.ಮೀ.), 9ರಿಂದ 12 ವರ್ಷ (3 ಕಿ.ಮೀ.), 13ರಿಂದ 16 ವರ್ಷ (5 ಕಿ.ಮೀ.) ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, ಈ ಎಲ್ಲಾ ವಿಭಾಗಗಳಲ್ಲಿ ಬಾಲಕ ಮತ್ತು ಬಾಲಕಿಯರ ಪ್ರತ್ಯೇಕ ವಿಭಾಗಗಳೂ ಇರಲಿವೆ ಎಂದರು.

ಎಲ್ಲಾ ವಿಭಾಗಗಳಲ್ಲಿಯೂ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ಸ್ಮರಣಿಕೆಗಳನ್ನು ನೀಡಲಾಗುವುದು. ಅಲ್ಲದೆ, ಭಾಗವಹಿಸುವ ಎಲ್ಲಾ ಮಕ್ಕಳಿಗೂ ಪದಕ ಹಾಗೂ ಪ್ರಮಾಣ ಪತ್ರ ನೀಡಲಾಗುವುದು. ಇದನ್ನು ದತ್ತಿ ನಿಧಿ ಸಂಗ್ರಹಕ್ಕಾಗಿ ನಡೆಸಲಾಗುತ್ತಿದ್ದು, ಇದರಿಂದ ಸಂಗ್ರಹವಾಗುವ ನಿಧಿಯನ್ನು ಮೈಸೂರಿನ ಆಲನಹಳ್ಳಿಯ ಸರ್ಕಾರಿ ಶಾಲೆಯ ಎರಡು ಕೊಠಡಿಗಳ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುವುದು. ಈಗಾಗಲೇ ನಮ್ಮ ಎರಡೂ ಸಂಸ್ಥೆಗಳಿಂದ ನಿರ್ಮಾಣ ಕಾಮಗಾರಿ ಆರಂಭಿಸಿದ್ದು, ಕಾಮಗಾರಿ ಅಂತಿಮ ಹಂತದಲ್ಲಿದೆ. ಕಟ್ಟಡ ನಿರ್ಮಾಣದ ಜೊತೆಗೆ ಅಗತ್ಯ ಮೂಲಸೌಕರ್ಯಗಳನ್ನು ನಾವೇ ಕಲ್ಪಿಸಲಿದ್ದೇವೆ ಎಂದು ವಿವರಿಸಿದರು.

ಕಿಡ್ಡಾಥಾನ್‌ನಲ್ಲಿ ಭಾಗವಹಿಸಲು ನೋಂದಣಿಗಾಗಿ ಮೊ.ಸಂ. 95919 25573, 91080 11853 ಸಂಪರ್ಕಿಸಬಹುದು. ಜೂ.10 ರೊಳಗೆ ನೋಂದಣಿ ಮಾಡಿಕೊಳ್ಳಬೇಕಿದ್ದು, 500 ರೂ. ನೋಂದಣಿ ಶುಲ್ಕ ನಿಗದಿ ಮಾಡಲಾಗಿದೆ. ಈಗಾಗಲೇ 40 ಮಕ್ಕಳು ನೋಂದಣಿ ಮಾಡಿಕೊಂಡಿದ್ದಾರೆ ಎಂದರು. ಮೈಸೂರು ಎಲೈಟ್ ಲೇಡಿಸ್ ಸರ್ಕಲ್ 141ರ ಅಧ್ಯಕ್ಷೆ ಶ್ರುತಿ ಪವನ್ ಶ್ರಾಫ್, ಮೈಸೂರು ಎಲೈಟ್ 41ಇಆರ್‌ಎಸ್ ಕ್ಲಬ್ 277ರ ಅಧ್ಯಕ್ಷ ಎಂ.ಆರ್.ಅರುಣ್ ಸುದ್ದಿಗೋಷ್ಠಿಯಲ್ಲಿದ್ದರು.



ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರ ವತಿಯಿಂದ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ಈ ವೇಳೆ ಸಾಮಾಜಿಕ ಕಾರ್ಯಕರ್ತ ವಸಂತಕುಮಾರ್ ಮೈಸೂರು ಮಠ, ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಉಪಾಧ್ಯಕ್ಷ ಕೆ.ಕೆಂಪಲಿಂಗರಾಜು, ಕಾರ್ಯನಿರ್ವಾಹಕ ಅಧಿಕಾರಿ ಜಿ.ಚಂದ್ರಶೇಖರ್, ಮುಖ್ಯಶಿಕ್ಷಕ ಜಿ.ಎನ್.ವಿಶ್ವನಾಥ್, ಸಹಶಿಕ್ಷಕರಾದ ಎಂ.ಎಸ್.ಶ್ವೇತಶ್ರೀ ಇನ್ನಿತರರಿದ್ದರು.

ಕಾನೂನು ಪದವೀಧರರಿಂದ ಶಿಷ್ಯವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ. 7–2023–24ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಕಾನೂನು ಪದವೀಧರರಿಗೆ ನ್ಯಾಯವಾದಿ ವೃತ್ತಿಯ ಪ್ರಾಯೋಗಿಕ ತರಬೇತಿ ಕಾರ್ಯಕ್ರಮದಡಿ ಶಿಷ್ಯವೇತನಕ್ಕಾಗಿ ಅರ್ಹ ಪರಿಶಿಷ್ಟ ಜಾತಿಯ ಕಾನೂನು ಪದವೀಧರ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇಲಾಖೆಯ www.sw.kar.nic.inನಲ್ಲಿ ಜೂ.15ರಿಂದ ಜುಲೈ 15ರವರೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ನೋಂದಾಯಿಸಲು ಅವಕಾಶವಿದ್ದು, ಆನ್‌ಲೈನ್‌ನಲ್ಲಿ ಅರ್ಜಿ ನೋಂದಾಯಿಸಿದ ನಂತರ ದಾಖಲಾತಿಗಳನ್ನು ಪತ್ರಾಂಕಿತ ಅಧಿಕಾರಿಗಳ ದೃಢೀಕರಣಗಳೊಂದಿಗೆ ಆಯಾಯ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿಗೆ ಜುಲೈ 15ರೊಳಗೆ ಸಲ್ಲಿಸುವಂತೆ ಮೈಸೂರು ಜಿಲ್ಲೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮದನ್ ಪಟೇಲ್‌ಗೆ ಎಂಎಲ್‌ಸಿ ಸ್ಥಾನಕ್ಕೆ ಮನವಿ



ಮೈಸೂರು,ಜೂ.7(ಪಿಎಂ)– ಚಲನಚಿತ್ರನಟ, ನಿರ್ಮಾಪಕ ಮತ್ತು ಸಂಗೀತ ನಿರ್ದೇಶಕ ಮದನ್ ಪಟೇಲ್ ಅವರನ್ನು ಚಲನಚಿತ್ರ ಕ್ಷೇತ್ರದಿಂದ ವಿಧಾನಪರಿಷತ್ ಸದಸ್ಯ ಸ್ಥಾನ ಕಲ್ಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಲ್ಲಿ ಮೈಸೂರು ಕಲಾವಿದರ ಒಕ್ಕೂಟ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮೈಸೂರು ಜಿಲ್ಲಾ ಕಲಾವಿದರ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತು ಒಕ್ಕೂಟದ ಸದಸ್ಯ ಎಂ.ಪುಟ್ಟಸ್ವಾಮಿ, ಚಲನಚಿತ್ರ ಕ್ಷೇತ್ರದಲ್ಲಿ ವಿವಿಧ ಸ್ತರಗಳಲ್ಲಿ ತೊಡಗಿಸಿಕೊಂಡಿರುವ ಮದನ್ ಪಟೇಲ್, ಲೇಖಕರು, ಸಾಮಾಜಿಕ ಕಾರ್ಯಕರ್ತರಾಗಿಯೂ ಕೆಲಸ ಮಾಡುತ್ತಿದ್ದಾರೆ. 1980ರಲ್ಲಿ ಕಾಂಗ್ರೆಸ್ ಸೇರಿದ ಅವರು, ಕೆಪಿಸಿಸಿ ಕಾರ್ಯದರ್ಶಿ ಸೇರಿದಂತೆ ಪಕ್ಷ ಕೊಟ್ಟ ವಿವಿಧ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ ಎಂದರು.

ಪ್ರತಿಯೊಂದು ಚುನಾವಣೆ ಮಾತ್ರವಲ್ಲದೆ, ಈ ಚುನಾವಣೆಯಲ್ಲೂ ಕಾಂಗ್ರೆಸ್ ಪರ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಆ ಮೂಲಕ ಪಕ್ಷದ ಗೆಲುವಿಗೆ ಶ್ರಮಿಸಿದ್ದಾರೆ. ಹಾಗಾಗಿ ಅವರಿಗೆ ಅವಕಾಶ ಕಲ್ಪಿಸಬೇಕೆಂದು ಕೋರಿದರು. ಕಲಾವಿದರಾದ ಚಿಕ್ಕಪ್ಪಾಜಿ, ನಿನ್ಸೆಂಟ್, ಆರ್.ಶಿವಕುಮಾರ್, ಸಿ.ಡಿ.ಶಿವಕುಮಾರ್, ವಕೀಲ ಪ್ರಭು ಸುದ್ದಿಗೋಷ್ಠಿಯಲ್ಲಿದ್ದರು.

ಜೂ.10, ಯುರೋ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ



ಮೈಸೂರು,ಜೂ.7(ಪಿಎಂ)– ಕರ್ನಾಟಕ ಯುರಾಲಜಿ ಅಸೋಸಿಯೇಷನ್ ವತಿಯಿಂದ ಜೂ.10ರಂದು ಮೈಸೂರಿನಲ್ಲಿ ಯುರೋ ಪ್ರೀಮಿಯರ್ ಲೀಗ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಅಸೋಸಿಯೇಷನ್ ಕಾರ್ಯದರ್ಶಿ ಡಾ.ಜೆ.ಪಿ.ನರೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8ರಿಂದ ರಾತ್ರಿ 9ರವರೆಗೆ ಮಹಾರಾಜ ಕಾಲೇಜು ಮೈದಾನ ಮತ್ತು ರೈಲ್ವೆ ಕ್ರಿಕೆಟ್ ಸ್ಟೇಡಿಯಂನಲ್ಲಿ ಏಕಕಾಲದಲ್ಲಿ ಪಂದ್ಯಗಳು ನಡೆಯಲಿವೆ. ರಾಜ್ಯಾದ್ಯಂತ ಇರುವ 75 ಮಂದಿ ಯುರಾಲಜಿಸ್ಟ್‌ಗಳು 5 ತಂಡಗಳಲ್ಲಿ ಈ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಪಂದ್ಯಗಳು 10 ಓವರ್‌ಗಳಲ್ಲಿ ನಡೆಯಲಿದ್ದು, ಒಂದೊಂದು ತಂಡ 3 ಪಂದ್ಯಗಳನ್ನು ಆಡಲಿವೆ. ರಾಯಲ್ ಚಾಲೆಂಜರ್ಸ್ ಮೈಸೂರು, ಬೆಂಗಳೂರು ಕ್ಯಾಪ್ಟನ್ಸ್, ಸೆಂಟ್ರಲ್ ಸೂಪರ್ ಕಿಂಗ್ಸ್, ನಾರ್ತ್ ಕರ್ನಾಟಕ ಜೇಂಟ್ಸ್ ಮತ್ತು ವೆಸ್ಟರ್ನ್ ವಾರಿಯರ್ಸ್ ಎಂಬ ಐದು ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿವೆ. ಅಸೋಸಿಯೇಷನ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಪುರುಷ ಸದಸ್ಯರಿಗೆ ಈ ಪಂದ್ಯಾವಳಿ ಆಯೋಜಿಸಿದ್ದು, ಮುಂದಿನ ದಿನಗಳಲ್ಲಿ ಮಹಿಳಾ ಸದಸ್ಯರಿಗೂ ಅವಕಾಶ ಕಲ್ಪಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


ಐಪಿಎಲ್‌ನ ಇಂಪ್ಯಾಕ್ಟ್ ಪ್ಲೇಯರ್ ನಿಯಮದಡಿ ಪಂದ್ಯಾವಳಿ ನಡೆಯಲಿದೆ. ಅಂದು ಸಂಜೆ 7.30ಕ್ಕೆ ರೈಲ್ವೆ ಕ್ರಿಕೆಟ್ ಸ್ಟೇಡಿಯಂನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಅತಿಥಿಯಾಗಿ ಅಂತಾರಾಷ್ಟ್ರೀಯ ಕ್ರಿಕೆಟ್ ಪಟು ಜಾವಗಲ್ ಶ್ರೀನಾಥ್ ಪಾಲ್ಗೊಳ್ಳಲಿದ್ದಾರೆ. ವಿಜೇತ ಮತ್ತು ರನ್ನರ್ ಅಪ್ ತಂಡಗಳಿಗೆ ಅವರು ಟ್ರೋಫಿಗಳನ್ನು ಪ್ರದಾನ ಮಾಡಲಿದ್ದಾರೆ ಎಂದು ತಿಳಿಸಿದರು.

ಅಸೋಸಿಯೇಷನ್‌ನ ಪದಾಧಿಕಾರಿಗಳಾದ ಡಾ.ಸಚಿನ್ ಧಾರವಾಡ್ಕರ್, ಡಾ.ಕುವರ್ ರಾಜೇ ಅರಸ್, ಡಾ.ಕೈಲಾಸ್, ಡಾ.ಅಭಿಜಿತ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜೂ.28, ವಧು–ವರರ ಮಾಸಿಕ ಸಮಾವೇಶ

ಮೈಸೂರು,ಜೂ.7(ಪಿಎಂ)–ಬೆಂಗಳೂರಿನ ಲಿಂಗಾಯತ ಕಲ್ಯಾಣ ಟ್ರಸ್ಟ್ ವತಿಯಿಂದ ಜೂ.28ರಂದು ವೀರಶೈವ ಲಿಂಗಾಯತ ವಧು–ವರರ 239ನೇ ಮಾಸಿಕ ಮುಖಾಮುಖಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಬೆಂಗಳೂರು ಗಾಂಧಿನಗರದಲ್ಲಿರುವ ಟ್ರಸ್ಟ್‌ನ ಆವರಣದಲ್ಲಿ ಮಧ್ಯಾಹ್ನ 2ಕ್ಕೆ ಸಮಾವೇಶ ನಡೆಯಲಿದೆ. ಮಾಹಿತಿಗಾಗಿ ದೂ.ಸಂ. 080–22269237 ಸಂಪರ್ಕಿಸಬಹುದು. www.linayathakalyanatrust.org ವೆಬ್‌ಸೈಟ್‌ಗೆ ಭೇಟಿ ಮಾಹಿತಿ ಪಡೆಯಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.6.2023 ಗುರುವಾರ, ಮಳೆ ನಕ್ಷತ್ರ: ಮೃಗಶಿರ, 08.06.2023 ರಿಂದ 21.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** "ಹೈಪೋಥೈರಾಯ್ಡಿಸಮ್" ಚಿಕಿತ್ಸಾ ಶಿಬಿರ, ಆಲನಹಳ್ಳಿ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30ರಿಂದ 4.30.

■ **ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಅಂತರಶಾಸ್ತ್ರೀಯ ಸಂಶೋಧನಾ ವಿಭಾಗ, ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜು, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ, ಜೆಎಸ್‌ಎಸ್ ಶುಶ್ರೂಷ ಕಾಲೇಜು:** ನರರೋಗಗಳ ಸಂಬಂಧಿತ ಸಂಯೋಜಿತ ವೈದ್ಯ ಪದ್ಧತಿಗಳ ಚಿಕಿತ್ಸೆ ಕುರಿತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಕೇಂದ್ರದ ನಿರ್ದೇಶಕ ಡಾ.ಈಶ್ವರ್ ವಿ.ಬಸವರೆಡ್ಡಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಮುಖ್ಯ ಅತಿಥಿಗಳು: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಸಮಕುಲಾಧಿಪತಿ ಡಾ.ಬಿ.ಸುರೇಶ್, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಪ್ರಾಸ್ತಾವಿಕ ಭಾಷಣ: ಎಂ.ಎಸ್.ರಾಮಯ್ಯ ಆಯುರ್ವೇದ ಕೇಂದ್ರದ ನಿರ್ದೇಶಕ ಡಾ. ಜಿ.ಜಿ.ಗಂಗಾಧರನ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 9.30ಕ್ಕೆ.

■ **ಓಡಿಪಿ ಸಂಸ್ಥೆ:** ವಿಶ್ವ ಪರಿಸರ ದಿನಾಚರಣೆ, ಅಧ್ಯಕ್ಷತೆ: ಧರ್ಮಾಧ್ಯಕ್ಷ ಡಾ. ಬರ್ನಾಡ್ ಮೊರಸ್, ಉದ್ಘಾಟನೆ: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಕೆ.ಎಂ.ಗಾಯತ್ರಿ, ಮುಖ್ಯ ಅತಿಥಿಗಳು : ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜ್, ಓಡಿಪಿ ಉಪಾಧ್ಯಕ್ಷ ಆಲ್ಫ್ರೆಡ್ ಜಾನ್ ಮೆಂಡೊನ್ಸಾ, ಅತಿಥಿಗಳು : ಅಲೆಕ್ಸ್ ಪ್ರಶಾಂತ್ ಸಿಕ್ವೇರಾ, ಪಾಲಿಕೆ ಸದಸ್ಯ ಅಕ್ಮಲ್ ಪಾಷ, ಆರೋಗ್ಯಸ್ವಾಮಿ, ಶ್ರೀಮತಿ ಆರೋಗ್ಯ ಮೇರಿ, ಸ್ಥಳ: ಓಡಿಪಿ ಸಂಸ್ಥೆ ಆವರಣ, ಬೆಳಗ್ಗೆ 10.30ಕ್ಕೆ.

■ **ಸುಯೋಗ್ ಆಸ್ಪತ್ರೆ, ಸುಯೋಗ್ ಕಾಲೇಜ್ ಆಫ್ ನರ್ಸಿಂಗ್ :** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರಾಮಕೃಷ್ಣ ನಗರ ಹಸೀಕರಣ ಯೋಜನೆಯ ರಘುಲಾಲ್ ರಾಘವನ್ ಅವರಿಗೆ 'ಪರಿಸರ ಪೋಷಕ' ಪ್ರಶಸ್ತಿ ಪ್ರದಾನ, ಹಸಿರೀಕರಣ: ಮೇಯರ್ ಶಿವಕುಮಾರ್, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 11 ಗಂಟೆಗೆ

■ **ಜೆಎಸ್‌ಎಸ್ ಮಹಿಳಾ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ :** ಗೀತಯಾನ–2023, ಮುಖ್ಯ ಅತಿಥಿಗಳು: ಕ್ಲೌಡ್ ಸರ್ವೀಸಸ್ ನಿರ್ದೇಶಕ ಡಾ. ರಾಜ್ ಸಿ. ಮೋಹನ್, ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಅಧ್ಯಕ್ಷತೆ: ಜೆಎಸ್‌ಎಸ್ ಅಧ್ಯಕ್ಷ ಡಾ.ಎಂ.ಜಗನ್ನಾಥ್ ಶೆಣೈ, ಉಪಸ್ಥಿತರು: ಕಾರ್ಯದರ್ಶಿ ವನಜಾ ಬಿ.ಪಂಡಿತ್, ಸ್ಥಳ: ಎಂ. ಗೋವಿಂದರಾವ್ ಮೆಮೋರಿಯಲ್ ಹಾಲ್, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ:** ಕಾಂಗ್ರೆಸ್ ಮುಖಂಡ ಕೆ.ಎಸ್.ಶಿವರಾಮು ಅವರ ಜನುಮ ದಿನದ ಅಂಗವಾಗಿ ಸಾಮರಸ್ಯಕ್ಕಾಗಿ ದ್ರಾವಿಡರು, ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಸೌಹಾರ್ದ ಕೂಟ ಮತ್ತು ಸಹಪಂಕ್ತಿ ಭೋಜನ, ಉದ್ಘಾಟನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ. ಅರವಿಂದ ಮಾಲಗತ್ತಿ, ಜಮಾಹತೆ ಇಸ್ಲಾಂ ಹಿಂದ್ ಅಧ್ಯಕ್ಷ ಮಹಮ್ಮದ್ ಅಸ್ಲಾಂ. ಸ್ಥಳ: ರುದ್ರಭೂಮಿ (ಸುಡುವ), ಚಾಮುಂಡಿಬೆಟ್ಟದ ಪಾದದ ರಸ್ತೆ, ಮಧ್ಯಾಹ್ನ 1 ಗಂಟೆಗೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ :** ಶ್ರೀ ರಾಘವೇಂದ್ರ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ, ಪಂಡಿತ್ ವಿದ್ಯಾವಾಚಸ್ಪತಿ ಶ್ರೀ ಪ್ರಭಂಜನಾಚಾರ್ಯ ವ್ಯಾಸನಕೆರೆ, ಬೆಂಗಳೂರು ಅವರಿಂದ ಶ್ರೀ ಮನ್ಮಹಾಭಾರತ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ಬ್ರಹ್ಮ ವಿದ್ಯಾ ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನ, ಅಮೇರಿಕಾ, ಡಿವಿಜಿ ಬಳಗ ಪ್ರತಿಷ್ಠಾನ, ಕಾಂಚನ ಶ್ರೀ ಲಕ್ಷ್ಮೀನಾರಾಯಣ ಮ್ಯೂಸಿಕ್ ಅಕಾಡೆಮಿ ಟ್ರಸ್ಟ್, ಅರಸು ಜನಾಂಗ, ಪರಂಪರೆ, ಕಲಾಸಂದೇಶ ಪ್ರತಿಷ್ಠಾನ, ಶ್ರೀಮತಂಗ ಸಾಂಸ್ಕೃತಿಕ ಸಾಮಾಜಿಕ ಅಕಾಡೆಮಿ ಟ್ರಸ್ಟ್, ಶ್ರೀ ವಿದ್ಯಾ ಪ್ರತಿಷ್ಠಾನ:** ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ, ಪ್ರಶಸ್ತಿ ಪ್ರದಾನ, ಗ್ರಂಥ ಲೋಕಾರ್ಪಣೆ ಮತ್ತು ಸಂಗೀತೋತ್ಸವ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಸಭಾಧ್ಯಕ್ಷ: ಅಂತಾರಾಷ್ಟ್ರೀಯ ವೀಣಾ ವಿದ್ವಾಂಸ ಡಾ.ರಾ.ವಿಶ್ವೇಶ್ವರನ್, ಸಾಹಿತ್ಯ ಸೂರಿ ಪ್ರಶಸ್ತಿ: ಹಿರಿಯ ಸಂಶೋಧಕ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ, ಶಾಸ್ತ್ರಸೂರಿ ಪ್ರಶಸ್ತಿ: ಭಾರತೀಯ ಶಾಸ್ತ್ರಜ್ಞ ಡಾ.ಜಿಯಾನ್ ಜುಸೆಪ್ ಫಿಲಿಪಿ, ರಾ. ಸತ್ಯನಾರಾಯಣ ಸಂಸ್ಕರಣ ಪ್ರಶಸ್ತಿ: ವಿದ್ವಾನ್ ಹೆಚ್.ಕೆ. ನರಸಿಂಹಮೂರ್ತಿ (ಕರ್ನಾಟಕ ಸಂಗೀತ), ವಿದ್ವಾನ್ ಮಧುಕರಂ ಪ್ರಶಾಂತ್ ಅಯ್ಯಂಗಾರ್ (ವೀಣಾ ವಾದಕ, ವಾಗ್ಗೇಯಕಾರ), ವಿದ್ವಾನ್ ಶೃಂಗೇರಿ ಹೆಚ್.ಎಸ್.ನಾಗರಾಜ್ (ಕರ್ನಾಟಕ ಸಂಗೀತ), ವಿಶೇಷ ಆಹ್ವಾನಿತರು: ಡಾ.ನಾಗಮಣಿ ಶ್ರೀನಾಥ್, ವಿದುಷಿ ವಸಂತ ಮಾಧವಿ, ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ, ಡಾ.ಶ್ರೀಕಾಂತಂ ನಾಗೇಂದ್ರಶಾಸ್ತ್ರಿ, ಕನಕರಾಜು, ಅನಿಲ್ ಕುಮಾರ್ ಕಟ್ಟಿ, ಲಿಂಗರಾಜ್ ಅರಸ್, ರೋಹಿಣಿ ಸುಬ್ಬರತ್ನಂ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ ಬಾನುಲಿ ಸರಣಿ, ಪ್ರಸ್ತುತಿ–ಡಾ.ಎ.ಎಸ್. ಚಂದ್ರಶೇಖರ್, 6.35 ಹಾಗೂ ಸಂಜೆ 6.10ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿಸರಣಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ– ಡಾ.ಟಿ.ವಿ.ಸತ್ಯನಾರಾಯಣ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 8.40 ಚಿತ್ರಗೀತೆಗಳು, 10.00 ಶಾಸ್ತ್ರೀಯ ಸಂಗೀತ, ಟಿ.ರುಕ್ಮಿಣಿ–ವೈಯೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ–ಮಹದೇವಸ್ವಾಮಿ ಮತ್ತು ತಂಡ, 4.30 ರಸಮಂಜರಿ–ವೇದ ವೈಶಾಲ್ಯ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಮುಂಗಾರು ಹಂಗಾಮಿಗೆ ಭತ್ತದ ಕೃಷಿಯಲ್ಲಿ ಆಧುನಿಕ ಬೇಸಾಯ ತಾಂತ್ರಿಕತೆಗಳು ಈ ಬಗ್ಗೆ ICAR JSS ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ಶಾಸ್ತ್ರದ ವಿಜ್ಞಾನಿಗಳಾದ ಡಾ. ಶಾಮರಾಜ್ ಅವರೊಂದಿಗೆ ಸಂದರ್ಶನ, 8.00 ಯುವವಾಣಿ–ಯುವಪ್ರತಿಭೆ, ರಾಷ್ಟ್ರಮಟ್ಟದ ಪ್ರಶಸ್ತಿ ಪುರಸ್ಕೃತ ಯುವ ಲೇಖಕ ಮೈಸೂರಿನ ಜೆ.ಎಸ್.ಎಸ್. ಕಾನೂನು ಕಾಲೇಜಿನ ವಿದ್ಯಾರ್ಥಿ ತೇಜಸ್ ಎಚ್.ಬಾಡಾಲ ಅವರೊಂದಿಗಿನ ಮಾತುಕತೆ, 9.30 ಕನ್ನಡ ಭಾರತಿ, 10.00 ನಾಟಕ–ಬಿಂದು, ರಚನೆ–ಎಸ್.ಎನ್.ಶಿವಸ್ವಾಮಿ, ನಿರ್ದೇಶನ–ಯಮುನಾ ಮೂರ್ತಿ, 10.30 ಸವಿನೆನಪು

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಶತಮಾನೋತ್ಸವ ಹಿನ್ನೆಲೆ

ಪಾರಂಪರಿಕ ಸರ್ಕಾರಿ ಆಸ್ಪತ್ರೆ ಕಟ್ಟಡಗಳ ಪುನರುಜ್ಜೀವನ ಕಾರ್ಯ

89.5 ಕೋಟಿ ರೂ. ವೆಚ್ಚದಲ್ಲಿ ಕೆ.ಆರ್., ಚೆಲುವಾಂಬ ಮತ್ತು ಪಿಕೆಟಿಬಿ ಸ್ಯಾನಿಟೋರಿಯಂ ಆಸ್ಪತ್ರೆಗಳ ಕಾಮಗಾರಿ ಪ್ರಗತಿಯಲ್ಲಿ




ಮೈಸೂರಿನ ಕೆ.ಆರ್.ಆಸ್ಪತ್ರೆಯ ಹೊರನೋಟ. ಬಲಚಿತ್ರದಲ್ಲಿ ಸರ್ಜಿಕಲ್ ವಿಭಾಗದಲ್ಲಿ ಪುನರುಜ್ಜೀವನ ಕಾಮಗಾರಿ ಪ್ರಗತಿಯಲ್ಲಿರುವುದನ್ನು ಕಾಣಬಹುದು.

● ಎಸ್.ಟಿ.ರವಿಕುಮಾರ್

ಮೈಸೂರು, ಜೂ.7–ಶತಮಾನದ ಹೊಸ್ತಿಲಲ್ಲಿರುವ ಪ್ರಸಿದ್ಧ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ ಅಂಡ್ ಆರ್‌ಐ)ಯಡಿ ಬರುವ ಆಸ್ಪತ್ರೆಗಳು, ವಿದ್ಯಾರ್ಥಿ ನಿಲಯಗಳ ಪಾರಂಪರಿಕ ಕಟ್ಟಡಗಳ ಪುನರುಜ್ಜೀವನ ಕಾಮಗಾರಿ ತ್ವರಿತಗತಿಯಲ್ಲಿ ಸಾಗಿದೆ.

2024ನೇ ಸಾಲಿನಲ್ಲಿ ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಎಂಎಂಸಿ ಅಂಡ್ ಆರ್‌ಐ ಸಂಸ್ಥೆಯ ಆಡಳಿತಕ್ಕೊಳಪಟ್ಟಿರುವ ದೊಡ್ಡಾಸ್ಪತ್ರೆ ಎಂದೇ ಖ್ಯಾತಿಯಾಗಿರುವ ಕೃಷ್ಣರಾಜೇಂದ್ರ ಆಸ್ಪತ್ರೆ (ಕೆ.ಆರ್. ಆಸ್ಪತ್ರೆ), ಚೆಲುವಾಂಬ ಹಾಗೂ ಕೆಆರ್‌ಎಸ್ ರಸ್ತೆಯಲ್ಲಿರುವ ಪ್ರಿನ್ಸೆಸ್ ಕೃಷ್ಣರಾಜಮ್ಮ ಎದೆ ಮತ್ತು ಕ್ಷಯ ರೋಗಗಳ ಆಸ್ಪತ್ರೆ (PKTB Hospital) ಪಾರಂಪರಿಕ ಕಟ್ಟಡಗಳು ಹಾಗೂ ವೈದ್ಯಕೀಯ ಕಾಲೇಜು ವಿದ್ಯಾರ್ಥಿನಿಲಯಗಳ ಶಿಥಿಲಾವಸ್ಥೆಯಲ್ಲಿದ್ದ ಕಟ್ಟಡಗಳನ್ನು ದುರಸ್ತಿ ಮೂಲಕ ಪುನರುಜ್ಜೀವನಗೊಳಿಸುವ ಕಾಮಗಾರಿ ಆರಂಭಿಸಲಾಗಿದೆ.

ಸರ್ಕಾರ ಮಂಜೂರು ಮಾಡಿರುವ 89.5 ಕೋಟಿ ರೂ. ಅನುದಾನದಲ್ಲಿ ಮೂರೂ ಸರ್ಕಾರಿ ಆಸ್ಪತ್ರೆಗಳ ಪಾರಂಪರಿಕ ಕಟ್ಟಡಗಳ ರಿಪೇರಿ ಕೆಲಸವನ್ನು ಏಕಕಾಲದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, 2023ರ ಡಿಸೆಂಬರ್ ತಿಂಗಳಲ್ಲಿ ಪುನರುಜ್ಜೀವನ ಕಾಮಗಾರಿಗಳು ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಎಸ್.ದಾಕ್ಷಾಯಿಣಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಬಡ ವರ್ಗದ ಜನರಿಗೆ ಉಚಿತ ಆರೋಗ್ಯ ಚಿಕಿತ್ಸೆ ನೀಡಬೇಕೆಂಬ ಮಹದಾಸೆಯಿಂದ ಮೈಸೂರು ಮಹಾರಾಜರು ಕೆ.ಆರ್., ಚೆಲುವಾಂಬ ಹಾಗೂ ಪಿಕೆಟಿಬಿ ಆಸ್ಪತ್ರೆಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಆದರೆ, ಆಯಾ ಕಾಲಕ್ಕೆ ಸಮರ್ಪಕ ನಿರ್ವಹಣೆ ಇಲ್ಲದೇ ಈ ಪಾರಂಪರಿಕ ಕಟ್ಟಡಗಳು ಶಿಥಿಲಗೊಂಡಿದ್ದವು.

ದಿನಕ್ಕೆ ಮೈಸೂರು ನಗರ, ಜಿಲ್ಲೆಯಷ್ಟೇ ಅಲ್ಲದೇ ನೆರೆಯ ಚಾಮರಾಜನಗರ, ಕೊಡಗು, ಮಂಡ್ಯ, ಹಾಸನ ಜಿಲ್ಲೆಗಳಿಂದಲೂ ರೋಗಿಗಳು ಚಿಕಿತ್ಸೆಗೆಂದು ಮೈಸೂರಿನ ಕೆ.ಆರ್., ಪಿಕೆಟಿಬಿ ಆಸ್ಪತ್ರೆಗಳಿಗೆ ಬರುತ್ತಾರೆ. ಅಲ್ಲದೆ ಹೆರಿಗೆ, ಸ್ತ್ರೀ ರೋಗಕ್ಕೆ ಸಂಬಂಧಿಸಿದಂತೆ ಚೆಲುವಾಂಬ ಆಸ್ಪತ್ರೆ ಅವಲಂಬಿಸಿದರೆ, ಮಕ್ಕಳ ಚಿಕಿತ್ಸೆಗೆ ಮಕ್ಕಳ ಆಸ್ಪತ್ರೆ (ಪೀಡಿಯಾಟ್ರಿಕ್ ವಾರ್ಡ್) ಆಸರೆಯಾಗಿದೆ.

ಸಂಸದ ಪ್ರತಾಪ ಸಿಂಹ, ಚಾಮರಾಜ ಕ್ಷೇತ್ರದ ಶಾಸಕರಾಗಿದ್ದ ಎಲ್.ನಾಗೇಂದ್ರ, ಶತಮಾನೋತ್ಸವದ ಹೊಸ್ತಿಲಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಧೀನದ ಕೆ.ಆರ್., ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳ ಕಟ್ಟಡಗಳ ದುರಸ್ತಿ ಮೂಲಕ ಪುನರುಜ್ಜೀವನಗೊಳಿಸುವ ಆಸಕ್ತಿ ವಹಿಸಿದ್ದರು.

ಅದರನ್ವಯ ಎಂಎಂಸಿ ಅಂಡ್ ಆರ್‌ಐ ಡೀನ್ ಅಂಡ್ ಡೈರೆಕ್ಟರ್‌ಗಳಾಗಿದ್ದ, ಡಾ. ಹೆಚ್.ಎನ್.ದಿನೇಶ್, ಡಾ. ಸಿ.ಪಿ.ನಂಜರಾಜ್, ಪ್ರತಿ ಕಟ್ಟಡಗಳಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ಎಲ್ಲಾ ವಿಭಾಗಗಳ ಮುಖ್ಯಸ್ಥರಿಂದ ಮಾಹಿತಿ ತರಿಸಿಕೊಂಡು ಚರ್ಚಿಸಿದ ಬಳಿಕ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕರ ಮೂಲಕ ಸರ್ಕಾರಕ್ಕೆ ಡಿಪಿಆರ್ ಸಹಿತ ಪ್ರಸ್ತಾವನೆ ಸಲ್ಲಿಸಿದ್ದರು.

ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಈ ಮೂರು ಸರ್ಕಾರಿ ಆಸ್ಪತ್ರೆಗಳ ಪಾರಂಪರಿಕ ಕಟ್ಟಡಗಳ ಮೈಸೂರು ಮೆಡಿಕಲ್ ಕಾಲೇಜು ಶತಮಾನೋತ್ಸವದ ನೆನಪಿಗಾಗಿ ಸಂರಕ್ಷಿಸಲು ಪ್ರಸ್ತಾವನೆಗೆ ಅನುಮೋದನೆ ನೀಡಿ ಬಜೆಟ್‌ನಲ್ಲಿ 89.5 ಕೋಟಿ ರೂ. ಅನುದಾನವನ್ನು ಮಂಜೂರು ಮಾಡಿತ್ತು.

ನಂತರ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಬೆಂಗಳೂರಲ್ಲೇ ಈ ಮೂರೂ ಆಸ್ಪತ್ರೆಗಳು ಹಾಗೂ ಎರಡು ಹಾಸ್ಟೆಲ್ ಬಿಲ್ಡಿಂಗ್‌ಗಳ 14 ಕಾಮಗಾರಿಗಳಿಗೆ ಜಾಗತಿಕ ಟೆಂಡರ್ ಕರೆದು ಯಶಸ್ವಿ ಬಿಡ್ಡುದಾರರಿಗೆ ಕಾರ್ಯಾದೇಶ ನೀಡಿದ ಹಿನ್ನೆಲೆಯಲ್ಲಿ ಕಾಮಗಾರಿ ಆರಂಭವಾಗಿದ್ದು, ಕಾಲೇಜಿನ ಡೀನ್ ಅಂಡ್ ಡೈರೆಕ್ಟರ್ ಆಗಿರುವ ಡಾ. ಕೆ.ಎಸ್.ದಾಕ್ಷಾಯಿಣಿ ಅವರು ಯೂನಿಟ್‌ಗಳನ್ನು ಬೇರೆ ಕಟ್ಟಡಗಳಿಗೆ ಸ್ಥಳಾಂತರಿಸಿ ದುರಸ್ತಿಗೆ ಅನುವು ಮಾಡಿಕೊಟ್ಟಿದ್ದಾರೆ.

ಕರ್ನಾಟಕದ ಮೊದಲ ಹಾಗೂ ಭಾರತದ 7ನೇ ಪ್ರತಿಷ್ಠಿತ ವೈದ್ಯಕೀಯ ಕಾಲೇಜಾಗಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು 1924ರಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಕ್ಯಾಂಪಸ್‌ನಲ್ಲಿ ಆರಂಭವಾಗಿದ್ದು, ಎರಡು ವರ್ಷಗಳ ನಂತರ ಈ ಸಂಸ್ಥೆ ಮೈಸೂರಿಗೆ ಸ್ಥಳಾಂತರವಾಗಿತ್ತು.

ಆಗಸ್ಟ್ ತಿಂಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಆರಂಭವಾದವು ಎಂದು ದಾಖಲಾತಿಗಳಲ್ಲಿ ನಮೂದಾಗಿರುವುದರಿಂದ ಎಂಎಂಸಿ ಅಂಡ್ ಆರ್‌ಐನ ಅಮೃತ ಮಹೋತ್ಸವವನ್ನು ಆಗಸ್ಟ್ ತಿಂಗಳಲ್ಲೇ ಆಚರಿಸಲಾಗಿತ್ತು. ಇದೀಗ 2024ರ ಆಗಸ್ಟ್ ತಿಂಗಳಲ್ಲೇ ಶತಮಾನೋತ್ಸವ ಸಮಾರಂಭ ಏರ್ಪಡಿಸಲು ಸಂಸ್ಥೆ ಸಿದ್ಧತೆ ನಡೆಸಿದೆ.

ಕೆ.ಆರ್.ಆಸ್ಪತ್ರೆಯ ರಕ್ತನಿಧಿ (Blood Bank) ಕೇಂದ್ರದ ಕಟ್ಟಡ ಶೇ.50ರಷ್ಟು, ಸೀತಾರಂಗ ವಾರ್ಡ್ ಶೇ.60, ಓಬಿಜಿ ಓಪಿಡಿ ಬ್ಲಾಕ್ ಶೇ.40, ಸರ್ಜಿಕಲ್ ವಾರ್ಡ್ (ಕಲ್ಲು ಕಟ್ಟಡ) ಶೇ.40ರಷ್ಟು ಕಾಮಗಾರಿ ಪೂರ್ಣಗೊಂಡಿವೆ. ಆಡಳಿತ ವಿಭಾಗ, ಜನರಲ್ ಓಪಿಡಿ ಬ್ಲಾಕ್, ಕಣ್ಣಿನ ಚಿಕಿತ್ಸಾ ವಿಭಾಗ, ಓಪಿಡಿ ಬ್ಲಾಕ್, ತುರ್ತು ಚಿಕಿತ್ಸಾ ವಿಭಾಗ ಸೇರಿದಂತೆ ಕೆ.ಆರ್. ಆಸ್ಪತ್ರೆಯ ಇನ್ನಿತರ ಕಟ್ಟಡಗಳ ದುರಸ್ತಿ ಕೆಲಸವು ಇಷ್ಟರಲ್ಲೇ ಆರಂಭವಾಗಲಿದೆ ಎಂದು ಡಾ.ದಾಕ್ಷಾಯಿಣಿ ತಿಳಿಸಿದ್ದಾರೆ.

ಉಳಿದಂತೆ ಚೆಲುವಾಂಬ ಹಾಗೂ ಪಿಕೆಟಿಬಿ ಆಸ್ಪತ್ರೆ, ಹಾಸ್ಟೆಲ್ ಕಟ್ಟಡಗಳ ಉನ್ನತೀಕರಣ ಕಾರ್ಯ ಇಷ್ಟರಲ್ಲೇ ಆರಂಭವಾಗಲಿದೆ. ಕೆ.ಆರ್. ಆಸ್ಪತ್ರೆಯ ಕಲ್ಲು ಕಟ್ಟಡದ ಛಾವಣಿ ಸೋರುತ್ತಿರುವುದನ್ನು ತಡೆಗಟ್ಟಿ ಕಟ್ಟಡವನ್ನು ಸುಭದ್ರಗೊಳಿಸಲು ಎನ್‌ಐಇ ತಜ್ಞ ಆರ್ಕಿಟೆಕ್ಟ್ ಇಂಜಿನಿಯರ್‌ಗಳ ತಂಡವು ಪರಿಶೀಲಿಸಿ ಇಂದು ವರದಿ ನೀಡಿದೆ. ಅದರಂತೆ ಕಾಮಗಾರಿ ನಡೆಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದ್ದೇವೆ ಎಂದು ತಿಳಿಸಿದ್ದಾರೆ.

ಹೊಸ ಆಪರೇಷನ್ ಥಿಯೇಟರ್‌ಗಳು: ಟೆರೇಸ್‌ನಿಂದ ನೀರು ಸೋರಿ ಗೋಡೆಗಳಲ್ಲಿ ಫಂಗಸ್ ನಿರ್ಮಾಣವಾಗಿ ಶಿಥಿಲಾವಸ್ಥೆಯಲ್ಲಿದ್ದ ಆಸ್ಪತ್ರೆಯ ಸರ್ಜಿಕಲ್ ಬ್ಲಾಕ್‌ನಲ್ಲಿರುವ ಶಸ್ತ್ರಚಿಕಿತ್ಸಾ ಕೊಠಡಿ (ಆಪರೇಷನ್ ಥಿಯೇಟರ್)ಗಳನ್ನು ರಿಪೇರಿ ಮಾಡಿ ಸಜ್ಜುಗೊಳಿಸಿದ್ದು, ಹೊಸ ಸಲಕರಣೆಗಳನ್ನು ಅಳವಡಿಸಿರುವುದರಿಂದ ಈಗ ಎಲ್ಲಾ ಓಟಿಗಳೂ ಹೊಸ ಮಾದರಿಯಲ್ಲಿ ಸಜ್ಜುಗೊಂಡು ಕೆಲಸ ಮಾಡುತ್ತಿವೆ ಎಂದು ಡಾ.ದಾಕ್ಷಾಯಣಿ ತಿಳಿಸಿದರು.

ಡಿಸೆಂಬರ್‌ನಲ್ಲಿ ಕಾಮಗಾರಿ ಪೂರ್ಣ: ಎಲ್ಲಾ 14 ಬಗೆಯ ರಿಪೇರಿ ಕಾಮಗಾರಿಗಳನ್ನು 2023ರ ಡಿಸೆಂಬರ್ ಮಾಹೆಯೊಳಗಾಗಿ ಪೂರ್ಣಗೊಳಿಸಲಾಗುವುದು. ಕಟ್ಟಡಗಳನ್ನು ಖಾಲಿ ಮಾಡಿ ಬೇರೆ ವಿಭಾಗ ಗಳು, ಕೃಷ್ಣಾಜಮ್ಮಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್‌ಗಳಿಗೆ ಸ್ಥಳಾಂತರಿಸಿ ಕೆಲಸ ಮಾಡಲು ಅನುವು ಮಾಡಿಕೊಡಲಾಗುತ್ತಿದೆ ಎಂದು ನಿರ್ದೇಶಕರು ತಿಳಿಸಿದರು.




ಹವಾಮಾನ ಬದಲಾವಣೆಯಿಂದಾಗಿ ಕೆ.ಆರ್. ಆಸ್ಪತ್ರೆಯ ಸರ್ಜಿಕಲ್ ಬ್ಲಾಕ್‌ನ ಮೇಲ್ಛಾವಣಿ ಹಾನಿಗೊಳಗಾಗಿರುವುದು. ಬಲಚಿತ್ರದಲ್ಲಿ ಸರ್ಜಿಕಲ್ ಬ್ಲಾಕ್‌ನ ಹೊಸ ಫ್ಲೋರಿಂಗ್ ಕಾಮಗಾರಿಗೆ ಶೇಖರಿಸಿಟ್ಟಿರುವ ಗ್ರಾನೈಟ್ಸ್‌ಗಳನ್ನು ಕಾಣಬಹುದು.

ಕೆ.ಆರ್.ಆಸ್ಪತ್ರೆಯಲ್ಲಿ 9 ಕೋಟಿಯ ಎಂಆರ್‌ಐ ಉಪಕರಣ ಅಳವಡಿಕೆ

ಆರ್ಥೋಪೆಡಿಕ್ ಸರ್ಜಿಕಲ್ ಸಲಕರಣೆ ವಿತರಿಸಲು ಚಿಂತನೆ, ಬರ್ನ್ಸ್ ವಾರ್ಡ್ ನವೀಕರಣ ಕಾಮಗಾರಿ ಬಹುತೇಕ ಪೂರ್ಣ

ಮೈಸೂರು, ಜೂ.7(ಆರ್‌ಕೆ)–ಬಡ ರೋಗಿಗಳಿಗೆ ಸ್ಕ್ಯಾನಿಂಗ್‌ಗೆ ಅನುಕೂಲವಾಗಲು ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಇದೇ ಮೊದಲ ಬಾರಿ ಸುಮಾರು 9 ಕೋಟಿ ಬೆಲೆಯ ಅತ್ಯಾಧುನಿಕ ಎಂಆರ್‌ಐ ಉಪಕರಣವನ್ನು ಅಳವಡಿಸಲಾಗಿದೆ.



ಡಾ.ದಾಕ್ಷಾಯಿಣಿ

ಆಸ್ಪತ್ರೆಯ ರೇಡಿಯಾಲಜಿ ವಿಭಾಗದ ನವೀಕೃತ ಕೊಠಡಿಯಲ್ಲಿ ಅಳವಡಿಸಿರುವ ಉಪಕರಣದಲ್ಲಿ ಜುಲೈ 15ರಿಂದ ಎಂಆರ್‌ಐ ಸ್ಕ್ಯಾನಿಂಗ್ ಪ್ರೊಸೀಜರ್ ಮಾಡಲಾಗುವುದು ಎಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಅಂಡ್ ಡೈರೆಕ್ಟರ್ ಡಾ. ಕೆ.ಎಸ್.ದಾಕ್ಷಾಯಣಿ ತಿಳಿಸಿದ್ದಾರೆ.

ಈವರೆಗೆ ಆಸ್ಪತ್ರೆಗೆ ಬರುವ ಹೊರ ಹಾಗೂ ಒಳ ರೋಗಿಗಳಿಗೆ ಖಾಸಗಿ ಸಂಸ್ಥೆಯವರು ಆಸ್ಪತ್ರೆ ಆವರಣದಲ್ಲಿ ಸ್ಥಾಪಿಸಿದ್ದ ಎಂಆರ್‌ಐ ಘಟಕದಲ್ಲೇ ರಿಯಾಯಿತಿ ದರದಲ್ಲಿ ಸ್ಕ್ಯಾನಿಂಗ್ ಮಾಡಿಸಲಾಗುತ್ತಿತ್ತು. ಅದಕ್ಕೆ ಹೆಚ್ಚು ಬೇಡಿಕೆ ಇರುವುದರಿಂದ ಸರ್ಕಾರದಿಂದಲೇ ಈ ಉಪಕರಣ ಖರೀದಿಸಿ ಅಳವಡಿಸಲಾಗಿದ್ದು, ಜುಲೈ 15ರಿಂದ ಇನ್ನೂ ಕಡಿಮೆ ಶುಲ್ಕ ಪಡೆದು ರೋಗಿಗಳ ಎಂಆರ್‌ಐ ಸ್ಕ್ಯಾನಿಂಗ್ ಮಾಡಲಾಗುವುದು ಎಂದು ತಿಳಿಸಿದರು.

ಈವರೆಗೆ ಕೆ.ಆರ್.ಆಸ್ಪತ್ರೆಯಲ್ಲಿ ಎಕ್ಸರೇ, ಸಿಟಿ ಸ್ಕ್ಯಾನಿಂಗ್‌ನಂತಹ ಸೇವೆ ಮಾತ್ರ ಲಭ್ಯವಿತ್ತು. ಎಂಆರ್‌ಐ ಸ್ಕ್ಯಾನಿಂಗ್‌ಗಾಗಿ ಕೆಲವೊಮ್ಮೆ ಅನಿವಾರ್ಯ ಸಂದರ್ಭಗಳಲ್ಲಿ ಹೊರಗಿನ ಸಂಸ್ಥೆಗಳಿಗೆ ಕಳುಹಿಸಲೇಬೇಕಾಗಿತ್ತು. ದುಬಾರಿ ವೆಚ್ಚ ಭರಿಸುವುದನ್ನು ತಪ್ಪಿಸಲು ಆಸ್ಪತ್ರೆಯಲ್ಲೇ ಈ ಸೌಲಭ್ಯ ಕಲ್ಪಿಸಿರುವುದರಿಂದ ರೋಗಿಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಸರ್ಜಿಕಲ್ ಇನ್‌ಸ್ಟ್ರುಮೆಂಟ್: ದೊಡ್ಡಾಸ್ಪತ್ರೆ ಎಂದೇ ಖ್ಯಾತಿಯಾಗಿರುವ ನಮ್ಮ ಆಸ್ಪತ್ರೆಯಲ್ಲಿ ನಿತ್ಯ ಮೂಳೆ ಸಂಬಂಧ ಹಲವು ಶಸ್ತ್ರಚಿಕಿತ್ಸೆ (ಆರ್ಥೋ ಸರ್ಜರಿ)ಗಳಾಗುತ್ತಿವೆ. ಅದಕ್ಕೆ ಬೇಕಾದ ಸಲಕರಣೆಗಳು ಲಭ್ಯವಿಲ್ಲದ ಕಾರಣ, ಹೊರಗಿನಿಂದ ರೋಗಿಗಳ ಕಡೆಯವರೇ ತರುವ ವ್ಯವಸ್ಥೆ ಇದೆ. ಬಡವರಿಗೆ ಈ ಸಲಕರಣೆಗಳನ್ನು ಖರೀದಿಸಲು ತೊಂದರೆಯಾಗುತ್ತಿರುವುದನ್ನು ಮನಗಂಡು ಕೆ.ಆರ್. ಆಸ್ಪತ್ರೆಯಲ್ಲೇ ಆರ್ಥೋ ಸರ್ಜಿಕಲ್ ಘಟಕ ಆರಂಭಿಸಿ ಕೈಗೆಟಕುವ ದರದಲ್ಲಿ ಅಥವಾ ಸಾಧ್ಯವಾದರೆ ಉಚಿತವಾಗಿ ಪೂರೈಸುವ ಬಗ್ಗೆ ಚಿಂತಿಸಲಾಗಿದೆ. ಸರ್ಕಾರದ ಮಟ್ಟದಲ್ಲಿ ವ್ಯವಹರಿಸಿ ಈ ವ್ಯವಸ್ಥೆ ಜಾರಿಗೊಳಿಸುವ ಬಗ್ಗೆ ಪ್ರಯತ್ನಿಸಲಾಗುವುದು ಎಂದು ಡಾ.ದಾಕ್ಷಾಯಣಿ ತಿಳಿಸಿದ್ದಾರೆ.

ಸುಟ್ಟ ಗಾಯಗಳ ವಿಭಾಗ: ಕೆ.ಆರ್. ಆಸ್ಪತ್ರೆ ಆವರಣದಲ್ಲಿರುವ ಸುಟ್ಟ ಗಾಯಗಳ ಚಿಕಿತ್ಸಾ ವಿಭಾಗ (Burns Ward)ದ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದು, ರೋಗಿಗಳಿಗೆ ತೊಂದರೆಯಾಗುತ್ತಿದ್ದುದನ್ನು ಸರಿಪಡಿಸಲೆಂದು ಕೈಗೆತ್ತಿಕೊಂಡಿದ್ದ ನವೀಕರಣ ಕಾಮಗಾರಿ ಇದೀಗ ಬಹುತೇಕ ಪೂರ್ಣಗೊಂಡಿದೆ. ಸುಸಜ್ಜಿತ ಹವಾನಿಯಂತ್ರಿತ ವಾರ್ಡ್‌ಗಳು, ವಿದ್ಯುತ್ ಶಕ್ತಿ ವ್ಯವಸ್ಥೆ, ಸೆಂಟ್ರಲೈಸ್ಡ್ ಆಕ್ಸಿಜನ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳೊಂದಿಗೆ ಅಭಿವೃದ್ಧಿಗೊಳಿಸಲಾಗಿದೆ ಎಂದು ತಿಳಿಸಿದರು.



ಕೆ.ಆರ್.ಆಸ್ಪತ್ರೆಯಲ್ಲಿ ಎಂಆರ್‌ಐ ಉಪಕರಣ ಅಳವಡಿಸಿರುವುದು



ನವೀಕರಣಗೊಂಡಿರುವ ಸುಟ್ಟಗಾಯಗಳ ಚಿಕಿತ್ಸಾ ವಿಭಾಗ

ಜೂ.12, ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ

ಮೈಸೂರು, ಜೂ. 7–ಜಿಲ್ಲಾಡಳಿತ ಜಿಲ್ಲಾ, ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ, ಸ್ವಯಂ ಸೇವಕ ಸಂಸ್ಥೆಗಳು ಹಾಗೂ ಮಕ್ಕಳ ಸಹಾಯವಾಣಿ 1098 ವತಿಯಿಂದ ಜೂ.12ರ ಬೆಳಗ್ಗೆ 10 ಗಂಟೆಗೆ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಣೆಯನ್ನು ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಅಧ್ಯಕ್ಷ ಡಾ.ಕೆ.ವಿ. ರಾಜೇಂದ್ರ ಅಧ್ಯಕ್ಷತೆ ವಹಿಸುವರು.

ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ದಿನೇಶ್, ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತರೆಡ್ಡಿ, ನಗರದ ಪೊಲೀಸ್ ಅಧೀಕ್ಷಕಿ ಸೀಮಾ ಲಾಟ್ಕರ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್ ಹಾಗೂ ಮುಡಾ ಆಯುಕ್ತ ಜಿ.ಟಿ.ದಿನೇಶ್ ಭಾಗವಹಿಸುವರು.

ಕಾರ್ಯಕ್ರಮದ ಅಂಗವಾಗಿ ಶಾಲಾ ಮಕ್ಕಳಿಂದ ಡಿಸಿ ಕಚೇರಿ ಎದುರಿನಲ್ಲಿರುವ ವೋವೆಲ್ಸ್ ಆಟದ ಮೈದಾನದಿಂದ ಕಲಾಮಂದಿರದವರೆಗೆ ಜಾಥಾ ಕಾರ್ಯಕ್ರಮವನ್ನು ಬೆಳಗ್ಗೆ 9 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಸದಸ್ಯ ಕಾರ್ಯದರ್ಶಿ ನಾಜಿಯ ಸುಲ್ತಾನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಡಿಶಾದಲ್ಲಿ ಮತ್ತೊಂದು ರೈಲು ಅಪಘಾತ

ಗೂಡ್ಸ್ ರೈಲಿಗೆ ಸಿಲುಕಿ ನಾಲ್ವರು ಕಾರ್ಮಿಕರು ಸಾವು; ಮೂವರಿಗೆ ಗಂಭೀರ ಗಾಯ

ಜಾಜ್‌ಪುರ: ಒಡಿಶಾದ ಬಾಲಸೋರ್‌ನಲ್ಲಿ 288 ಪ್ರಯಾಣಿಕರನ್ನು ಬಲಿ ಪಡೆದ ತ್ರಿವಳಿ ರೈಲು ದುರಂತ ಪ್ರಕರಣ ಸಂಭವಿಸಿ ಇನ್ನೂ ಒಂದು ವಾರ ಕಳೆದಿಲ್ಲ. ಅದಾಗಲೇ ಒಡಿಶಾದಲ್ಲಿ ಮತ್ತೊಂದು ರೈಲು ಅಪಘಾತ ನಡೆದಿದೆ.



ಗೂಡ್ಸ್ ರೈಲಿಗೆ ಸಿಲುಕಿ ನಾಲ್ವರು ಕಾರ್ಮಿಕರು ಸಾವನ್ನಪ್ಪಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಜಾಜ್‌ಪುರ ರಸ್ತೆ ರೈಲು ನಿಲ್ದಾಣದಲ್ಲಿ ಈ ದುರ್ಘಟನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗೂಡ್ಸ್ ರೈಲು ಚಲಿಸಲು ಪ್ರಾರಂಭಿಸಿದಾಗ ಕಾರ್ಮಿಕರು ಅದರಡಿ ಭಾರೀ ಮಳೆಯಿಂದ ಆಶ್ರಯ ಪಡೆದಿದ್ದರು ಎನ್ನಲಾಗಿದೆ. ದಿಢೀರನೆ ಗುಡುಗು ಸಹಿತ ಮಳೆಯಾಗಿದ್ದು, ರೈಲ್ವೆಯಲ್ಲಿ ಕೆಲಸ ಮಾಡುತ್ತಿದ್ದ ನಾಲ್ವರು ಕಾರ್ಮಿಕರು ಗೂಡ್ಸ್ ರೈಲಿನ ಅಡಿಯಲ್ಲಿ ಆಶ್ರಯ ಪಡೆದಿದ್ದಾಗ ರೈಲು ಚಲಿಸಲು ಪ್ರಾರಂಭಿಸಿದೆ. ಇದರಿಂದಾಗಿ ನಾಲ್ವರು ಸಾವನ್ನಪ್ಪಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ರೈಲ್ವೆ ವಕ್ತಾರರು ಹೇಳಿದ್ದಾರೆ.

ಅಲ್ಲದೇ, ಇನ್ನಿಬ್ಬರು ಸಹ ಗಾಯಗೊಂಡಿದ್ದಾರೆ ಎಂದು ಜಾಜ್‌ಪುರದ ಸ್ಥಳೀಯರು ಹೇಳಿದ್ದಾರೆ. ಬಾಲಸೋರ್ ಜಿಲ್ಲೆಯಲ್ಲಿ 288 ಜನರ ಸಾವಿಗೆ ಕಾರಣವಾದ 3 ರೈಲುಗಳನ್ನು ಒಳಗೊಂಡ ದೊಡ್ಡ ಅಪಘಾತದ 5 ದಿನಗಳ ನಂತರ ಈ ಘಟನೆ ಸಂಭವಿಸಿದೆ.

ನಾಳೆ ಸ್ವಯಂವರ ಪಾರ್ವತಿ ಹೋಮ

ಮೈಸೂರು, ಜೂ.7–ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜೂ.9ರಂದು ಶುಕ್ರವಾರದಂದು ಸ್ವಯಂವರ ಪಾರ್ವತಿ ಹೋಮ ಮಾಡಲಾಗುವುದು. ಅವಿವಾಹಿತರಿಗೆ ಪ್ರತ್ಯೇಕ ಸಂಕಲ್ಪ ಮತ್ತು ಪೂಜೆ ಹೋಮ ಮಾಡಲಾಗುವುದು. ಬೆಳಗ್ಗೆ 7.30ಕ್ಕೆ ಪ್ರಾರಂಭ 9.45ಕ್ಕೆ ಪೂರ್ಣಾಹುತಿ. ಮಾಹಿತಿಗೆ ಜಾತಕ ವಿಮರ್ಶಕ ಮೈಕುಮಾರ್ ಅವರನ್ನು ಮೊ.ಸಂ. 9845183392 9342183392 ಸಂಪರ್ಕಿಸಿ

ಚಾಮುಂಡಿಬೆಟ್ಟ ಪ್ಲಾಸ್ಟಿಕ್ ಮುಕ್ತ ಪ್ರದೇಶವಾಗಿಸಲು ಸಹಕರಿಸುವಂತೆ ಮೈಸೂರು ತಾಪಂ ಇಓ ಸಲಹೆ

ಮೈಸೂರು, ಜೂ.7(ಎಂಕೆ)– ಸಹಸ್ರಾರು ಸಂಖ್ಯೆಯ ಪ್ರವಾಸಿಗರು ಹಾಗೂ ಭಕ್ತಾದಿಗಳು ಆಗಮಿಸುವ ಚಾಮುಂಡಿಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ಪ್ರದೇಶವನ್ನಾಗಿಸಲು ಪ್ರತಿಯೊಬ್ಬರೂ ಸಹಕರಿಸಬೇಕು ಎಂದು ಚಾಮುಂಡಿಬೆಟ್ಟದ ಎಲ್ಲಾ ವರ್ತಕರಿಗೆ ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಹೆಚ್.ಡಿ.ಗಿರೀಶ್ ಸೂಚಿಸಿದರು.

ಚಾಮುಂಡಿಬೆಟ್ಟದಲ್ಲಿ ಗ್ರಾಪಂ ಅಧ್ಯಕ್ಷ ಪಿ.ಮಂಜುನಾಥ್ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಪ್ಲಾಸ್ಟಿಕ್ ಮುಕ್ತ ಪ್ರದೇಶಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಹೆಚ್ಚು ಪ್ರಸಿದ್ಧಿ ಪಡೆದಿರುವ ಬೆಟ್ಟದ ಆವರಣದಲ್ಲಿ ಸ್ವಚ್ಛತೆ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ ಎಂದರಲ್ಲದೆ ಈಗಾಗಲೇ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗಿರುವ ಅನೈರ್ಮಲ್ಯದ ಚಿತ್ರಗಳನ್ನು ತೋರಿಸಿ ವರ್ತಕರು ಸ್ವಚ್ಛತೆಗೆ ಸಹಕರಿಸುವಂತೆ ಮನವಿ ಮಾಡಿದರು.

ಆಷಾಢ ಮಾಸದ ದಿನಗಳಲ್ಲಿ ಬೆಟ್ಟಕ್ಕೆ ಹೆಚ್ಚಿನ ಭಕ್ತರು ಆಗಮಿಸುತ್ತಾರೆ. ಆ ದಿನಗಳಲ್ಲಿ ಹೆಚ್ಚಿನ ಪ್ಲಾಸ್ಟಿಕ್ ಬಳಕೆಯಾಗುತ್ತದೆ. ಇದರಿಂದ ಪರಿಸರ ಮಾಲಿನ್ಯ ಉಂಟಾಗುವುದಲ್ಲದೆ, ಬೆಟ್ಟದ ಸ್ವಚ್ಛತೆಯೂ ನಾಶವಾಗುತ್ತದೆ. ಹೀಗಾಗಿ ಪ್ರತಿಯೊಬ್ಬರೂ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಲು ಕೈಜೋಡಿಸಬೇಕು. ದೇಶದಾದ್ಯಂತ ಒಂದು ಬಾರಿ ಬಳಸಿ ಬಿಸಾಡುವ ಪ್ಲಾಸ್ಟಿಕ್ ನಿಷೇಧಿಸಲಾಗಿದೆ. ಅದಾಗ್ಯೂ ಇಂತಹ ಪ್ಲಾಸ್ಟಿಕ್ ಬಳಕೆ ಹೆಚ್ಚಾಗಿ ಕಂಡು ಬರುತ್ತಿದೆ. ಹೀಗಾಗಿ ಮರುಬಳಕೆ ಮಾಡಬಹುದಾದ ಬಟ್ಟೆ ಬ್ಯಾಗ್‌ಗಳನ್ನು ಉಪಯೋಗಿಸಬೇಕು ಎಂದು ಸಲಹೆ ನೀಡಿದರು.



ನಮ್ಮಲ್ಲಿ ಬಟ್ಟೆ ಬ್ಯಾಗ್‌ಗಳನ್ನು ಸಿದ್ಧಪಡಿಸಲು ಮಹಿಳಾ ಒಕ್ಕೂಟದ ಸದಸ್ಯರು ಮುಂದಾಗಿದ್ದಾರೆ. ಬೇಡಿಕೆಗೆ ತಕ್ಕಂತೆ ಅವರು ಬಟ್ಟೆ ಬ್ಯಾಗ್ ಪೂರೈಸಲಿದ್ದಾರೆ. ಇಲ್ಲಿನ ವರ್ತಕರೂ ಬರುವ ಭಕ್ತಾದಿಗಳಿಗೆ ಪ್ಲಾಸ್ಟಿಕ್ ಬ್ಯಾಗ್ ನೀಡದೆ, ಬಟ್ಟೆ ಬ್ಯಾಗ್ ನೀಡಬೇಕು. ಪ್ರತಿಯೊಂದು ಮಳಿಗೆ ಮುಂದೆ ಕಸದ ಬುಟ್ಟಿ ಇಡುವ ಮೂಲಕ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಮುಂದಿನ ಏಳು ದಿನಗಳ ಕಾಲ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಲು ಕಾಲಾವಕಾಶ ನೀಡಿದ್ದು, ಬಳಿಕವೂ ಪ್ಲಾಸ್ಟಿಕ್ ಬಳಸಿದರೆ, ದಂಡ ಹಾಕುವುದು, ಮಳಿಗೆಯ ಪರವಾನಗಿ ರದ್ದು ಮಾಡುವಂಥ ಕಟ್ಟುನಿಟ್ಟಿನ ಕ್ರಮವನ್ನು ಗ್ರಾಪಂ ವತಿಯಿಂದ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಗ್ರಾಪಂ ಉಪಾಧ್ಯಕ್ಷೆ ನಾಗಮ್ಮ, ಸದಸ್ಯರು, ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಗೋವಿಂದರಾಜು, ಪಿಡಿಓ ರೂಪೇಶ್, ಕ್ಲೀನ್ ಮೈಸೂರು ಸಂಸ್ಥೆಯ ವೆಂಕಟೇಶ್, ಸ್ನೇಹ ಸಂಸ್ಥೆಯ ಶಾಂತರಾಜ್, ಪರಿಸರ ಬಳಗದ ಶೈಲಜೇಶ್, ಪರಿಸರ ವಾರಿಯರ್ಸ್ ಗ್ರೂಪ್‌ನ ಮಂಜುನಾಥ್ ಹಾಗೂ ವರ್ತಕರು ಸಭೆಯಲ್ಲಿ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಓರ್ವ : (ಮದುವೆ ಛತ್ರದ ಭೋಜನ ಶಾಲೆಯಲ್ಲಿ) "ಬೆಂಡೆಕಾಯಿ ಪಲ್ಯಕ್ಕೆ ಉಪ್ಪು ಜಾಸ್ತಿಯಾಯಿತಲ್ಲವೇ?"
ಮತ್ತೋರ್ವ : "ಇಲ್ಲ ಉಪ್ಪಿನ ಪ್ರಮಾಣಕ್ಕೆ ಬೆಂಡೆಕಾಯಿ ಕಡಿಮೆಯಾಗಿದೆ ಅಷ್ಟೆ"

ಮೈಸೂರು ಮಿತ್ರ
ಗುರುವಾರ, 8 ಜೂನ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಾಳೆ ಎಂದು ಯಾವ ಕಾರ್ಯವನ್ನು ಮುಂದೂಡಬೇಡ.
ನಿನ್ನ ಪಾಲಿಗೆ ಆ ನಾಳೆ ಎಂದೂ ಬಾರದಿರಬಹುದು. –ಕಾಂಗ್ರೀಫ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಗ್ಗ ಹರಿಯಲಿಲ್ಲ, ಕೋಲು ಮುರಿಯಲಿಲ್ಲ

ನಿಮ್ಮ ಪತ್ರಗಳು

ರೈಲ್ವೆ ಅಧಿಕಾರಿಗಳಿಗೆ ಹೀಗೊಂದು ಮನವಿ

ಮಾನ್ಯರೆ,

ಕೇಂದ್ರ ರೈಲ್ವೆ ಇಲಾಖೆಯ ಸಚಿವರೇ, ಮೈಸೂರು–ಬೆಂಗಳೂರು–ಬೀದರ್ ವಿಭಾಗಗಳ ರೈಲ್ವೆ ಇಲಾಖೆಯ ವಿಭಾಗೀಯ ವ್ಯವಸ್ಥಾಪಕರೇ – ಅಭಿವೃದ್ಧಿ ಮತ್ತು ಪ್ರಗತಿಯ ದಾರಿಯಲ್ಲಿ ವೇಗವಾಗಿ ಮುಂದೆ ಸಾಗುತ್ತಿರುವ ತಮ್ಮ ಇಲಾಖೆಯ ಬಗ್ಗೆ ಭಾರತೀಯನಾಗಿ ಅಪಾರ ಮೆಚ್ಚುಗೆ ಇದ್ದರೂ 15 ದಿನಗಳೊಳಗೆ ತಮ್ಮ ರೈಲುಗಳು ಸುಮಾರು ಎರಡೂವರೆ ಗಂಟೆ ವಿಳಂಬವಾಗಿ ನಾವು ತಲುಪಬೇಕಾದ ಸ್ಥಳ ತಲುಪಿದಾಗ ಆದ ನೋವಿನ ಅನುಭವ ದಯವಿಟ್ಟು ಗಮನಿಸಿ.

- 24–05–2023ರಂದು ಯಶವಂತಪುರದಿಂದ ಭಾಲ್ಕಿಗಾಗಿ ನಾವು 4 ಜನ ಹಿರಿಯ ನಾಗರಿಕರು ಯಶವಂತಪುರ–ಲಾತೂರ್ ರೈಲಿನಲ್ಲಿ ಸಂಜೆ 7–05 ನಿಮಿಷಕ್ಕೆ ಪ್ರಯಾಣ ಆರಂಭಿಸಿದೆವು. ಅದು ಭಾಲ್ಕಿಯನ್ನು 25ರಂದು ಬೆಳಗ್ಗೆ 8.25ಕ್ಕೆ ತಲುಪಬೇಕಿತ್ತು. ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ 11ನೇ ರಾಜ್ಯಮಟ್ಟದ ಸಮ್ಮೇಳನದಲ್ಲಿ ಉದ್ಘಾಟನಾ ಸಮಾರಂಭದಲ್ಲಿ ಬೆಳಗ್ಗೆ 9.30ಕ್ಕೆ ನಾನು ಮೈಸೂರು ವಿಭಾಗದ ಎಂಟು ಜಿಲ್ಲೆಗಳ ಅಧ್ಯಕ್ಷನಾಗಿ ಹಾಜರಿರಬೇಕಿತ್ತು. ಆದರೆ ಅದೇನು ಕಾರಣವೋ ತಿಳಿಯದು–ನಮ್ಮ ರೈಲು ಅಲ್ಲಿ ತಲುಪಿದಾಗ 10–45 ಆಗಿತ್ತು. ಕರ್ನಾಟಕದ 2 ಪ್ರಖ್ಯಾತ ವೀರಶೈವ ಮಠಗಳ ಮೂವರು ಸ್ವಾಮೀಜಿಗಳು ವೇದಿಕೆಯಲ್ಲಿದ್ದಾಗ ನಾನು ಉದ್ಘಾಟನಾ ಸಮಾರಂಭಕ್ಕೆ ಬಹಳ ತಡವಾಗಿ ಹೋಗಬೇಕಾಯಿತು. ಅದೇ ರೈಲಿನಲ್ಲಿ ಕೆಲವು ಕುಟುಂಬಗಳು ಮದುವೆಯ ಮುಹೂರ್ತಕ್ಕೆ ಮತ್ತೂ ಕೆಲವು ಕುಟುಂಬಗಳು ಶವ ಸಂಸ್ಕಾರಕ್ಕಾಗಿ ಹೊರಟಿದ್ದವು. ಮದುವೆ ಹಾಗೂ ಶವಸಂಸ್ಕಾರಕ್ಕೂ ಸಂಬಂಧಿಸಿದ ಆ ಕುಟುಂಬಗಳು ಹೋಗಲಾಗಲಿಲ್ಲ. ರಿಸರ್ವೇಶನ್ ಮಾಡಿ ಪ್ರಯಾಣ ಹೊರಟ ಹಿರಿಯ ನಾಗರಿಕ ರಾದ ನಮಗೆ ಅಂದು ಸ್ನಾನ, ತಿಂಡಿ ಎಲ್ಲ ತಪ್ಪಿ, ಮಧುಮೇಹದ ರೋಗಿಗಳು ಮಾತ್ರೆ ತೆಗೆದು ಕೊಳ್ಳಲಾಗದೇ ಬಳಲಬೇಕಾಯಿತು. ಇದ್ಯಾಕೆ ಹೀಗೆ? ಇಂತಹ ಆಧುನಿಕ ಸೌಲಭ್ಯಗಳ ಕಾಲದಲ್ಲಿ ರೈಲು ತಡವಾಗುವುದನ್ನು ತಪ್ಪಿಸಲಾಗುವುದಿಲ್ಲವೇ?
- 30–05–2023ರಂದು ಸಂಜೆ 7.05ಕ್ಕೆ ಕಾಚೀಗುಡಾದಿಂದ ಬೆಂಗಳೂರಿಗೆ ಬರುವ ರೈಲು ಬೆಂಗಳೂರನ್ನು 31ರಂದು ಬೆಳಗ್ಗೆ 6.25ಕ್ಕೆ ತಲುಪಬೇಕಿತ್ತು. ಈ ರೈಲು ಸಹ ಬೆಳಗ್ಗೆ 8.50ಕ್ಕೆ ಬೆಂಗಳೂರಿಗೆ ತಲುಪಿತು. ವಿಕಾರಾಬಾದ್ ಎಂಬಲ್ಲಿ ರೈಲು 1 ಗಂಟೆಗಿಂತ ಹೆಚ್ಚು ಹೊತ್ತು ನಿಂತಿತ್ತು.
- 30–5–2023ರಂದು ನನ್ನ ಒಬ್ಬ ಮಹಿಳಾ ಬಂಧು ಸಿಕಂದರಾಬಾದ್‌ನಿಂದ ಬೆಂಗಳೂರಿಗೆ ಬರಬೇಕಿದ್ದ ರೈಲು ರಾತ್ರಿ 9 ಗಂಟೆಗೆ ಬಿಡಬೇಕಿತ್ತು. ಅದು ಮಾರನೆ ದಿನ ಬೆಂಗಳೂರಿಗೆ ಬೆಳಗ್ಗೆ 8.30ಕ್ಕೆ ಬರಬೇಕಿತ್ತು. ಆದರೆ ಅದು ಸಿಕಂದರಾಬಾದ್ ಬಿಟ್ಟಿದ್ದು ಮಧ್ಯರಾತ್ರಿ 12–15ರ ನಂತರ. ಹೀಗಾಗಿ ಅದು ಬೆಂಗಳೂರಿಗೆ ಮಾರನೇ ದಿನ ಬೆಳಗ್ಗೆ 11–30ಕ್ಕೆ ಬಂತು. ನಾವೆಲ್ಲ 70 ವರ್ಷ ದಾಟಿದ ಹಿರಿಯ ನಾಗರಿಕರು ಹಾಗೂ ಮಧುಮೇಹದ ಔಷಧಿಗಳನ್ನು ಹಾಗೂ ತಿಂಡಿಯನ್ನು ಸಕಾಲಕ್ಕೆ ಲೆಕ್ಕಹಾಕಿ ತೆಗೆದುಕೊಳ್ಳ ಬೇಕಾದವರು. ಹೀಗಾಗಿ ಸಂಬಂಧಿಸಿದ ಅಧಿಕಾರಿಗಳು, ರೈಲ್ವೆ ಇಲಾಖೆಯ ಮುಖ್ಯಸ್ಥರು ರೈಲು ಬಹಳ ತಡವಾಗಿ ಸಂಚರಿಸುವ ಇಂಥ ಘಟನೆಗಳನ್ನು ತಪ್ಪಿಸಬೇಕೆಂದು ಮನವಿ.

–ಎನ್.ವ್ಹಿ. ರಮೇಶ್, ನಿವೃತ್ತ ಕಾರ್ಯಕ್ರಮ ಅಧಿಕಾರಿಗಳು, ಆಕಾಶವಾಣಿ, ಮೈಸೂರು.

ಗ್ಯಾರಂಟಿ ಈಡೇರಿಸುವ ಭರದಲ್ಲಿ ರಾಜ್ಯದ ಅಭಿವೃದ್ಧಿ ಕುಂಠಿತ ಸಾಧ್ಯತೆ

ಮಾನ್ಯರೆ,

ಮತ ಬೇಟೆಗಾಗಿ ಚುನಾವಣೆ ಸಮಯದಲ್ಲಿ ಐದು ಗ್ಯಾರಂಟಿಗಳನ್ನು ನೀಡಿದ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಗ್ಯಾರಂಟಿಗಳನ್ನು ಜಾರಿಗೊಳಿಸುತ್ತಿದೆ. ಆದರೆ ಇದು ದುರುಪಯೋಗ ಹಾಗೂ ದುಂದು ವೆಚ್ಚಕ್ಕೆ ಕಾರಣವಾಗುತ್ತಿದೆ. ಶಕ್ತಿ ಯೋಜನೆ ಎಂದು ಮಹಿಳೆಯರಿಗೆ ಉಚಿತ ಪ್ರಯಾಣ ಮಾಡಿದ್ದಾರೆ. ಇದು ಬಸ್ಸಿನಲ್ಲಿ ಪ್ರಯಾಣ ಮಾಡುವ ಮಹಿಳೆಯರಿಗೆ ಮಾತ್ರ ಉಪಯೋಗವಾಗುತ್ತದೆ ಮತ್ತು ಉಚಿತ ಎಂದು ಮಹಿಳೆಯರು ಓಡಾಡುವುದು ಜಾಸ್ತಿ ಆಗಬಹುದು. ಇದರಿಂದ ಖರ್ಚು ಜಾಸ್ತಿಯಾಗುತ್ತದೆ ವಿನಹ ಕಡಿಮೆ ಆಗುವುದಿಲ್ಲ. ಐದು ಗ್ಯಾರಂಟಿಗಳನ್ನು ನೀಡುವ ಬದಲು ಎಲ್ಲಾ ವರ್ಗಕ್ಕೂ ಅನುಕೂಲವಾಗುವಂತೆ ಸಿಲಿಂಡರ್ ಬೆಲೆ, ಬಸ್ ಚಾರ್ಜ್, ಕರೆಂಟ್ ಬಿಲ್ ಹಾಗೂ ಹಾಗೂ ದಿನಸಿ ಪದಾರ್ಥಗಳ ಬೆಲೆ, ಔಷಧಿಗಳ ಬೆಲೆ ಕಡಿಮೆ ಮಾಡಿದ್ದರೆ ಚೆನ್ನಾಗಿತ್ತು. ಹಾಗೂ ಗಂಡಸರಿಗೂ ನ್ಯಾಯ ದೊರಕುತ್ತಿತ್ತು. ಗ್ಯಾರಂಟಿಗಳನ್ನು ಈಡೇರಿಸುವ ಭರದಲ್ಲಿ ರಾಜ್ಯದ ಅಭಿವೃದ್ಧಿ ಕುಂಟಿತಗೊಳ್ಳುತ್ತದೆ. ಈ ಭರವಸೆಗಳು ಎಂದಿಗೂ ಶಾಶ್ವತವಲ್ಲ. ಮೂಲಭೂತ ಸೌಲಭ್ಯಗಳನ್ನೇ ಪಡೆಯದೆ ಇಂದಿಗೂ ಗ್ರಾಮೀಣ ಪ್ರದೇಶದ ಜನತೆ ಹೋರಾಟದ ಜೀವನ ನಡೆಸುತ್ತಿರುವಾಗ ಇಂತಹ ಗ್ಯಾರಂಟಿಗಳು ಅನವಶ್ಯಕ.

–ರೂಪ ಎಂ.,ಸೋಮನಾಥನಗರ, ದಟ್ಟಗಳ್ಳಿ, ಮೈಸೂರು

ಮೀಟರ್ ರೀಡರ್‌ಗಳನ್ನು ಬಳಸಿಕೊಳ್ಳಿ

ಮಾನ್ಯರೆ,

ಕರ್ನಾಟಕ ಸರಕಾರ ಪ್ರತಿ ಮನೆಯ ವಿದ್ಯುತ್ ಬಳಕೆದಾರರಿಗೆ ಪುಕ್ಕಟೆ ವಿದ್ಯುತ್ ನೀಡುವ ಸಲುವಾಗಿ ಅರ್ಜಿ ಸಲ್ಲಿಸಲು ಎಷ್ಟೊಂದು ಕಸರತ್ತು ಮಾಡುತ್ತಿದೆ.

ಸರಳೋಪಾಯವೆಂದರೆ ಕ.ವಿ.ಮಂಡಳಿಯ ಮಾಪನ ಓದುವವರಿಗೆ ಪ್ರತಿ ಮನೆ, ಮಾಲೀಕ, ಬಾಡಿಗೆದಾರರ ಪರಿಚಯವಿರುತ್ತದೆ.

ಅವರಿಗೆ ಯಾರು ಎಷ್ಟು ವಿದ್ಯುತ್ ಬಳಸುತ್ತಾರೆಂಬ ಮಾಹಿತಿಯೂ ಇರುತ್ತದೆ. ಅವರ ಮೂಲಕ ಅರ್ಜಿ ಇತ್ಯಾದಿ ವಿತರಿಸಿ ಮಾಹಿತಿ ಸಂಗ್ರಹ ಮಾಡಿದರೆ ಆಗುವುದಿಲ್ಲವೇ? ವಿದ್ಯುತ್ ಇಲಾಖೆಯ ಮಾಪನ ಓದುಗರಿಗೇ ಸ್ವಲ್ಪ ಗೌರವ ಧನವನ್ನು ನೀಡಿ ಕೆಲಸ ತೆಗೆದುಕೊಂಡರೆ ಇಲಾಖೆಗೂ, ಗ್ರಾಹಕರಿಗೂ ಅನುಕೂಲವಲ್ಲವೇ? ಕ.ವಿ.ಮಂಡಳಿ ಈ ಕುರಿತು ಯೋಚಿಸಿ ಅಗತ್ಯ ಕ್ರಮ ಕೈಗೊಳ್ಳಲಿ ಹಾಗೂ ಜನರು ಅಲ್ಲಿ ಇಲ್ಲಿ ಅಲೆಯುವುದನ್ನು ತಪ್ಪಿಸಲಿ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು

ಉದಾರತೆ ಮೆರೆದ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್

ಮಾನ್ಯರೆ,

ಭಾರತ ಕ್ರಿಕೆಟ್ ಕಂಡ ಅದ್ಭುತ ಆಟಗಾರರಲ್ಲಿ ಒಬ್ಬರಾದ ವೀರೇಂದ್ರ ಸೆಹ್ವಾಗ್ ಅವರು ಓಡಿಶಾದಲ್ಲಿ ಸಂಭವಿಸಿದ ರೈಲು ದುರಂತದಲ್ಲಿ ಸಾವನ್ನಪ್ಪಿದ ಕುಟುಂಬಸ್ಥರ ನೆರವಿಗೆ ಧಾವಿಸಿರುವುದು ತುಂಬಾ ಶ್ಲಾಘನೀಯ. ಈ ರೈಲ್ವೆ ದುರಂತದಲ್ಲಿ ಸಾವನ್ನಪ್ಪಿದವರ ಮಕ್ಕಳಿಗೆ ತಮ್ಮ ಸೆಹ್ವಾಗ್ ಇಂಟರ್‌ನ್ಯಾಶನಲ್ ಸ್ಕೂಲ್‌ನ ಬೋರ್ಡಿಂಗ್ ಸೌಲಭ್ಯದಲ್ಲಿ ಉಚಿತವಾಗಿ ಶಿಕ್ಷಣವನ್ನು ನೀಡುತ್ತೇನೆ ಎಂದು ತಮ್ಮ ಟ್ವಿಟರ್ ಖಾತೆಯಲ್ಲಿ ಭರವಸೆ ನೀಡಿರುವುದು ಪ್ರತಿಯೊಬ್ಬ ಭಾರತೀಯರ ಅಂತಃಕರಣವನ್ನು ಮುಟ್ಟುವ ವಿಷಯವಾಗಿದೆ. ಈ ದುರಂತದ ಚಿತ್ರಗಳು ನಮ್ಮನ್ನು ದೀರ್ಘಕಾಲದವರೆಗೂ ಕಾಡುತ್ತವೆ. ಇಂತಹ ಬಿಕ್ಕಟ್ಟಿನ ಸಮಯದಲ್ಲೂ ರಕ್ಷಣಾ ಕಾರ್ಯದಲ್ಲಿ ನಿರತರಾದ ಎಲ್ಲಾ ಧೈರ್ಯಶಾಲಿ ಪುರುಷರು, ಮಹಿಳೆಯರು ಮತ್ತು ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡುತ್ತಿರುವ ವೈದ್ಯಕೀಯ ತಂಡ ಮತ್ತು ಸ್ವಯಂಸೇವಕರಿಗೆ ಸೆಹ್ವಾಗ್ ಅವರು ಧನ್ಯವಾದ ಅರ್ಪಿಸಿರುವುದು ಅಭಿನಂದನಾರ್ಹ.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ.ನಗರ, ಮೈಸೂರು.

ಸಮಾಜಮುಖಿ



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಬದಲಾಗುವುದೆಂದು ಬಾಲಕಾರ್ಮಿಕರ ಬದುಕು

ಮಕ್ಕಳನ್ನು ದುಡಿಮೆಗೆ ಹಚ್ಚುವುದನ್ನು ನಿಷೇಧಿಸಿ– ನಿಯಂತ್ರಿಸುವ ಕಾಯಿದೆ ನಮ್ಮ ದೇಶದಲ್ಲಿ ಜಾರಿಗೆ ಬಂದದ್ದು 1986 ರಲ್ಲಿ. ಈ ಕಾಯಿದೆ ಕೆಲ ಉದ್ಯೋಗಗಳಲ್ಲಿ ಮಕ್ಕಳು ದುಡಿಯುವುದನ್ನು ತಡೆಗಟ್ಟುವುದಷ್ಟೇ ಅಲ್ಲದೆ, ಮಕ್ಕಳ ದುಡಿಮೆಗೆ ಸಂಬಂಧಿಸಿದ ಹಾಗೆ ಕಠಿಣ ನಿಯಮಗಳ ಅನುಪಾಲನೆಯನ್ನು ಆದೇಶಿಸಿದೆ. ಈ ಕಾಯಿದೆಗೆ 2016 ರಲ್ಲಿ ತಿದ್ದುಪಡಿ ತರಲಾಗಿ ಮಕ್ಕಳನ್ನು ಯಾವುದೇ ಉದ್ಯೋಗದಲ್ಲಿ ದುಡಿಮೆಗೆ ಹಚ್ಚುವ ಹಾಗಿಲ್ಲ ಎಂಬುದನ್ನು ಸ್ಪಷ್ಟ ಪಡಿಸಿದ್ದೇ ಅಲ್ಲದೆ, ಕೈಗಾರಿಕಾ ಕಾಯಿದೆಯಲ್ಲಿ ನಿಷೇಧಿಸಲಾಗಿರುವ ಅಪಾಯಕಾರಿ ಉದ್ಯೋಗಗಳಲ್ಲಿ ಹದಿಹರೆಯದ ಮಕ್ಕಳಿಂದ ಕೆಲಸ ಮಾಡಿಸುವ ಹಾಗಿಲ್ಲ ಎಂದು ತಿಳಿಸಿದೆ. ಬಾಲಕಾರ್ಮಿಕ ನಿಷೇಧ ಕಾಯಿದೆ ಸುಮಾರು 83 ಉದ್ಯೋಗಗಳನ್ನು ಗುರುತಿಸಿ ಅವುಗಳಲ್ಲಿ 14 ವರ್ಷದ ಕೆಳಗಿನ ಮಕ್ಕಳು ಕೆಲಸ ಮಾಡುವ ಹಾಗಿಲ್ಲ ಎಂಬುದನ್ನು ನಿರ್ದಿಷ್ಟವಾಗಿ ಗುರುತಿಸಿದೆ. ಅವುಗಳಲ್ಲಿ ಮುಖ್ಯವಾದುವೆಂದರೆ ರೈಲು, ಬಂದರು, ಪಟಾಕಿ ತಯಾರಿಕಾ ಘಟಕಗಳು, ಗಣಿಗಳು ಮುಂತಾದುವು.

ಭಾರತಕ್ಕೆ ಸ್ವಾತಂತ್ರ್ಯ ಬರುವ ಮುನ್ನವೇ, ಅಂದರೆ 1938 ರಲ್ಲೇ ಮಕ್ಕಳನ್ನು ದುಡಿಮೆಯಲ್ಲಿ ತೊಡಗಿಸುವುದನ್ನು ತಡೆಗಟ್ಟುವ ಕಾಯಿದೆ ಜಾರಿಗೆ ಬಂದಿತ್ತು. ದೇಶ ಸ್ವತಂತ್ರವಾದ ನಂತರ ಜಾರಿಗೆ ಬಂದ ಕೈಗಾರಿಕಾ ಕಾಯಿದೆ 1948 ಮತ್ತು ಗಣಿ ಕಾಯಿದೆ 1952, 14 –18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಿಸುವುದನ್ನು ನಿಷೇಧ ಮಾಡಿತ್ತು. 2000ರಲ್ಲಿ ಜಾರಿಯಾದ ಬಾಲ ನ್ಯಾಯ ಕಾಯಿದೆ ಕೂಡ ಮಕ್ಕಳನ್ನು ದುಡಿಮೆಯಲ್ಲಿ ತೊಡಗಿಸುವುದನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಿತ್ತು. ಮಕ್ಕಳನ್ನು ದುಡಿಯಲು ಬಳಸುವುದನ್ನು ವಿರೋಧ ಮಾಡುವ ಕಾಯಿದೆಗಳಿಗೆ ಒಂದು ದೀರ್ಘ ಇತಿಹಾಸವೇ ಇದ್ದರೂ ಈ ಪಿಡುಗು ನಿರಂತರವಾಗಿ ಮುಂದುವರೆಯುತ್ತಿರುವುದು ವಿಪರ್ಯಾಸ.

ಒಂದೆಡೆ ಮಕ್ಕಳನ್ನು ದುಡಿಮೆಗಾಗಿ ಬಳಸಿಕೊಳ್ಳುವುದನ್ನು ನಿಷೇಧಿಸುವ ಕಾಯಿದೆಗಳಿದ್ದರೆ, ಮತ್ತೊಂದೆಡೆ ದೇಶದ ಸಂವಿಧಾನವೇ ಅವರಿಗೆ ಶಿಕ್ಷಣವನ್ನು ಪಡೆದು ತಮ್ಮ ಬದುಕನ್ನು ಹಸನು ಮಾಡಿಕೊಳ್ಳಲು ಅವಕಾಶಗಳನ್ನು ಕಲ್ಪಿಸಿದೆ. ಭಾರತದ ಸಂವಿಧಾನ, 6–14ರ ವಯೋ ಗುಂಪಿನಲ್ಲಿರುವ ಎಲ್ಲ ಮಕ್ಕಳಿಗೆ ಮುಕ್ತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ನೀಡಿ ಇನ್ನೆರಡು ವರ್ಷಗಳು ಕಳೆದರೆ 75 ವರ್ಷಗಳಾಗುತ್ತವೆ. ಇದನ್ನು ಮತ್ತಷ್ಟು ಗಟ್ಟಿಯಾಗಿಸಿದ ಶಿಕ್ಷಣ ಹಕ್ಕು ಕಾಯಿದೆ ಜಾರಿಗೆ ಬಂದು ಮತ್ತೆರಡು ವರ್ಷಗಳು ಕಳೆದರೆ ಒಂದೂವರೆ ದಶಕ ಪೂರೈಸುತ್ತದೆ. ಈ ಕಾಯಿದೆ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕಾಗಿ ಪರಿಗಣಿಸಿತು. ಆದರೆ ಲಕ್ಷಾಂತರ ಮಕ್ಕಳು ಬಾಲ್ಯದ ಎಲ್ಲ ಕನಸುಗಳನ್ನು ಹತ್ತಿಕ್ಕಿ ಸಂಸಾರದ ನೊಗವನ್ನು ತಮ್ಮ ಎಳೆಯ



> “ಸುಮಾರು ಎರಡು ದಶಕಗಳಿಂದ ನಿಧಾನವಾಗಿ ಇಳಿಮುಖವಾಗುತ್ತಿದ್ದ ಬಾಲ ಕಾರ್ಮಿಕರ ಸಂಖ್ಯೆ ಮತ್ತೆ ಏರಿಕೆಯಾಗತೊಡಗಿತು. ಅದರಲ್ಲೂ 5-11 ವಯೋಗುಂಪಿನಲ್ಲಿರುವ ಬಾಲಕಾರ್ಮಿಕರ ಸಂಖ್ಯೆ ಹೇಗೆ ಹೆಚ್ಚಾಯಿತೆಂದರೆ ಜಾಗತಿಕ ಬಾಲ ಕಾರ್ಮಿಕರ ಜನಸಂಖ್ಯೆಯಲ್ಲಿ ಈ ವಯೋಗುಂಪಿನವರು ಅರ್ಧಕ್ಕಿಂತ ಹೆಚ್ಚಾಗಿದ್ದಾರೆ ಎಂದು ಐಎಲ್ಒ ತಿಳಿಸಿತು. ಜಾಗತಿಕ ಮಟ್ಟದಲ್ಲಿ 2022 ಅಂತ್ಯಗೊಳ್ಳುವ ವೇಳೆಗೆ 9 ಮಿಲಿಯನ್ ಮಕ್ಕಳು ಬಾಲಕಾರ್ಮಿಕರಾಗುವ ಸಂಭವವಿದೆ, ಅವರಿಗೇನಾದರೂ ಸಾಮಾಜಿಕ ಬೆಂಬಲ ದೊರೆಯದಿದ್ದರೆ ಈ ಸಂಖ್ಯೆ ಮುಂಬರುವ ಕಾಲಘಟ್ಟದಲ್ಲಿ 46 ಮಿಲಿಯನ್‌ನಷ್ಟು ಹೆಚ್ಚುವ ಸಂಭವವಿದೆ ಎಂಬುದು ವಿಶ್ವ ಸಂಸ್ಥೆಯ ವರದಿಯೊಂದು ಬಾರಿಸಿರುವ ಕರೆಗಂಟೆ.

ಹೆಗಲ ಮೇಲೆ ಹೊರಲೋ, ಹಸಿವಿನ ಹೊಡೆತದಿಂದ ತಪ್ಪಿಸಿ ಕೊಳ್ಳಲೋ, ತಂದೆ–ತಾಯಿಗಳ ಆಸರೆಯಿಲ್ಲದಿದ್ದುದರಿಂದಲೋ ದುಡಿಮೆಯಲ್ಲಿ ತೊಡಗಿ ತಮ್ಮ ಬದುಕನ್ನು ಸವೆಸಬೇಕಾದ ಸ್ಥಿತಿಯನ್ನು ತಲುಪುತ್ತಾರೆ. ತಮ್ಮ ವಯಸ್ಸಿನ ಅನೇಕ ಮಕ್ಕಳು ಜ್ಞಾನಾರ್ಜನೆ ಮಾಡುತ್ತಾ, ಆಟವಾಡುತ್ತಾ, ಆರ್ಥಿಕ ಅನುಕೂಲಗಳು ತರುವ ಎಲ್ಲ ಸೌಲಭ್ಯಗಳನ್ನು ಅನುಭವಿಸುತ್ತಿದ್ದರೆ ಬಾಲಕಾರ್ಮಿಕರು ತಮ್ಮ ಜೀವ ರಕ್ಷಣೆಗಾಗಿ ಬೀದಿಗಳಿಂದ ಹಿಡಿದು ಅತ್ಯಂತ ಭಯಾನಕ ಪರಿಸರಗಳಲ್ಲಿ ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆ.

ಲಭ್ಯ ಮಾಹಿತಿಯ ಅನ್ವಯ ನಮ್ಮ ದೇಶದಲ್ಲಿ 10.1 ಮಿಲಿಯನ್ ಬಾಲಕಾರ್ಮಿಕರಿದ್ದಾರೆ, ಅವರಲ್ಲಿ 5.6 ಮಿಲಿಯನ್ ಗಂಡು ಮಕ್ಕಳು ಮತ್ತು 4.5 ಮಿಲಿಯನ್ ಹೆಣ್ಣು ಮಕ್ಕಳು. ಸಾಮಾನ್ಯವಾಗಿ ಬಾಲ ಕಾರ್ಮಿಕರನ್ನು ಕುರಿತ ಅಂಕಿ–ಅಂಶಗಳು 14 ವಯಸ್ಸಿಗಿಂತ ಕಡಿಮೆಯಿರುವ ಮಕ್ಕಳನ್ನು ಗಣನೆಗೆ ತೆಗೆದುಕೊಳ್ಳುತ್ತವೆ. ಆದರೆ 0–18 ರ ವಯೋ ಗುಂಪನ್ನು ಪರಿಗಣಿಸಿದರೆ ಭಾರತದಲ್ಲಿ 33 ಮಿಲಿಯನ್ ಮಕ್ಕಳು ದುಡಿಮೆಗೈಯ್ಯುತ್ತಿದ್ದಾರೆ ಎಂದು ಹೇಳಿರುವ ಅಧ್ಯಯನವೊಂದು ದೇಶದಲ್ಲಿ ಪ್ರತಿ 11 ಮಕ್ಕಳಿಗೆ ಒಂದು ಮಗು ಕೆಲಸ ಮಾಡುತ್ತಿದೆ ಎಂಬ ಆಘಾತಕಾರಿ ಸಂಗತಿಯನ್ನು ಹೊರ ಹಾಕಿದೆ. ಈ ಮಾಹಿತಿಗೆ 2011ರ ಜನಗಣತಿ ಆಧಾರ ವಾಗಿದ್ದರೂ ಬಾಲಕಾರ್ಮಿಕರ ಸಂಖ್ಯೆಯಲ್ಲಿ ಗಮನಾರ್ಹವಾದ ಇಳಿಕೆಯೇನೂ ಆಗುತ್ತಿಲ್ಲ ಎನ್ನುವುದು ಮತ್ತೊಮ್ಮೆ ನಮ್ಮನ್ನು ಅಧೀರರನ್ನಾಗಿಸುತ್ತದೆ. ಈ ಅಧ್ಯಯನದ ಪ್ರಕಾರ ನಮ್ಮ ದೇಶದಲ್ಲಿರುವ ಬಾಲ ಕಾರ್ಮಿಕರನ್ನೆಲ್ಲ ಈ ವಿಷವರ್ತುಲದಿಂದ ಹೊರತೆಗೆಯಲು ಕನಿಷ್ಠ ಒಂದು ಶತಮಾನವಾದರೂ ಹಿಡಿಯುತ್ತದೆ.

ಅಪ್ರಾಪ್ತ ವಯಸ್ಸಿನ ಮಕ್ಕಳು ದುಡಿಯುವುದನ್ನು ನಿಷೇಧಿಸಿರುವ ಕಾಯಿದೆ ಅವರು ಗೃಹಾಧಾರಿತ ಕೆಲಸಗಳಲ್ಲಿ ತೊಡಗಲು ಅಡ್ಡಿಯನ್ನು ಮಾಡದ ಕಾರಣ ಲಕ್ಷಾಂತರ ಮಕ್ಕಳ ವಿದ್ಯಾರ್ಜನೆ ಮತ್ತು ಬಾಲ್ಯ ಅವರ ಮನೆಗಳಲ್ಲೇ ಕಳೆದುಹೋಗುತ್ತಿದೆ. ಮಕ್ಕಳು ಈ ಸಮಾಜದಲ್ಲಿ ಒಂದು ಸಿದ್ಧ ಕಾರ್ಮಿಕ ವರ್ಗ, ಏಕೆಂದರೆ ಅವರ ಪರಾವಲಂಬಿತನ ಮತ್ತು ಅಸಹಾಯಕತೆಯನ್ನು ಬಳಸಿ ಅವರನ್ನು ಮನೆಗೆಲಸದಲ್ಲಿ ಸಹಾಯ ಮಾಡುವ ಅಥವಾ ಕೆಲಸ ಕಲಿಸುವ ನೆಪದಿಂದ ಅನೇಕ ಕುಟುಂಬಗಳಲ್ಲಿ ಕಾರ್ಮಿಕರಂತೆ ಬಳಸಿ ಅವರನ್ನು ಶೋಷಣೆಗೆ ಒಳಪಡಿಸಲಾಗುತ್ತಿದೆ. ಕೃಷಿಯಿರಬಹುದು, ಆಹಾರ ಉತ್ಪನ್ನ ಅಥವಾ ವಿತರಣಾ ಘಟಕಗಳಿರಬಹುದು ಇಲ್ಲವೇ ಮನೆಗೆಲಸವಿರಬಹುದು–ಇಲ್ಲೆಲ್ಲಾ ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ. ಮನೆಗೆಲಸಕ್ಕೆ ಕಳುಹಿಸಲ್ಪಟ್ಟ ಹದಿಹರೆಯದ ಹೆಣ್ಣು ಮಕ್ಕಳು ಲೈಂಗಿಕ ಹಿಂಸೆಗಳಿಗೂ ಒಳಗಾಗುವ ಸಾಧ್ಯತೆಗಳಿವೆ. ಕೋವಿಡ್ ಕಾರಣದಿಂದಾಗಿ ಶಾಲೆಗಳು– ವಿದ್ಯಾರ್ಥಿನಿಲಯಗಳು ಮುಚ್ಚಿದಾಗ ತಮ್ಮ ಮನೆಗಳಿಗೆ ಹಿಂದಿರುಗಿದ ಹೆಣ್ಣು ಮಕ್ಕಳನ್ನು ಮನೆಗೆಲಸಕ್ಕೆ ಕಳುಹಿಸಲಾಗಿ ಅವರ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಅನೇಕ ಪ್ರಕರಣಗಳು ವರದಿಯಾಗಿವೆ. ಹೆಣ್ಣು ಮಕ್ಕಳು ತಮ್ಮ ಮನೆಯಲ್ಲಿಯೇ ಲೈಂಗಿಕ–ಮಾನಸಿಕ ಕಿರುಕುಳಕ್ಕೆ ಒಳಗಾಗಬಹುದು, ಇಲ್ಲ ಕೆಲಸ ಮಾಡುವ ಮನೆಗಳಲ್ಲಿ ಅಥವಾ ಢಾಬಾಗಳಂತಹ ಹೋಟೆಲ್ ಮಾದರಿ ಆಹಾರ ಸರಬರಾಜು ಘಟಕಗಳಲ್ಲಿ ಇರಬಹುದು ಹೆಣ್ಣು ಮಕ್ಕಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಯುತ್ತಲೇ ಇದೆ.

ನಮ್ಮ ದೇಶದಲ್ಲಿ ಮಕ್ಕಳ ಸಾಗಾಣಿಕೆಗೂ ಮಕ್ಕಳು ಬಾಲಕಾರ್ಮಿಕರಾಗುವುದಕ್ಕೂ ನಡುವೆ ನಿಕಟ ಸಂಬಂಧವಿದೆ. ಪ್ರತಿ ವರ್ಷವೂ 1.2 ಮಿಲಿಯನ್ ಮಕ್ಕಳನ್ನು ಬಾಲಕಾರ್ಮಿಕರಾಗಿ ದುಡಿಯಲು ಅಥವಾ ಲೈಂಗಿಕ ಶೋಷಣೆಯಂಥ ಉದ್ದೇಶಗಳಿಗಾಗಿ ಸಾಗಾಣಿಕೆ, ದೇಶದ ಒಳಗೆ ಮತ್ತು ಹೊರಗೆ ಮಾಡಲಾಗುತ್ತದೆ. ಈ ಮಕ್ಕಳಿಗೆ ಯಾವ ಬಗೆಯ ಕಾನೂನಾತ್ಮಕ ರಕ್ಷಣೆಯೂ ಇಲ್ಲ. ಬಡತನ ಹೆಚ್ಚಾಗಿರುವ ಕುಟುಂಬಗಳ ಮಕ್ಕಳೇ ಇಂಥ ನ್ಯಾಯಬಾಹಿರ ಕೃತ್ಯಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗುವುದು.

ಕೋವಿಡ್ ತಂದಿಟ್ಟ ಉದ್ಯೋಗ ರಹಿತತೆ ಅಥವಾ ಉದ್ಯೋಗದಿಂದ ಹೊರ ಹಾಕಲ್ಪಡುವಿಕೆ, ಪೋಷಕರ ಸಾವು, ಸಮಾಜದ ತಳಸ್ತರಗಳಲ್ಲಿರುವ ವರ್ಗಗಳಿಗೆ ಇದ್ದಂಥ ಬೆಂಬಲ ಯೋಜನೆಗಳು ಹೆಚ್ಚು–ಕಡಿಮೆ ಸ್ಥಗಿತವಾದದ್ದು–ಈ ಕಾರಣಗಳಿಂದ ಅನೇಕ ಕುಟುಂಬಗಳಲ್ಲಿ ಮಕ್ಕಳು ದುಡಿದರೆ ಮಾತ್ರ ಉಳಿವು ಸಾಧ್ಯ ಎನ್ನುವ ಸ್ಥಿತಿಗೆ ತಲುಪಿದರು. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಪ್ರಕಾರ ಜಗತ್ತಿನಾದ್ಯಂತ ಬಾಲ ಕಾರ್ಮಿಕರ ಸಂಖ್ಯೆ ಕೋವಿಡ್ ಕಾರಣದಿಂದಾಗಿ 160 ಮಿಲಿಯನ್‌ಗೆ ಏರಿತು. ಸುಮಾರು ಎರಡು ದಶಕಗಳಿಂದ ನಿಧಾನವಾಗಿ ಇಳಿಮುಖವಾಗುತ್ತಿದ್ದ ಬಾಲಕಾರ್ಮಿಕರ ಸಂಖ್ಯೆ ಮತ್ತೆ ಏರಿಕೆಯಾಗತೊಡಗಿತು. ಅದರಲ್ಲೂ 5–11 ವಯೋ ಗುಂಪಿನಲ್ಲಿರುವ ಬಾಲಕಾರ್ಮಿಕರ ಸಂಖ್ಯೆ ಹೇಗೆ ಹೆಚ್ಚಾಯಿತೆಂದರೆ ಜಾಗತಿಕ ಬಾಲ ಕಾರ್ಮಿಕರ ಜನಸಂಖ್ಯೆಯಲ್ಲಿ ಈ ವಯೋ ಗುಂಪಿನವರು ಅರ್ಧಕ್ಕಿಂತ ಹೆಚ್ಚಾಗಿದ್ದಾರೆ ಎಂದು ಐ.ಎಲ್.ಒ ತಿಳಿಸಿತು. ಜಾಗತಿಕ ಮಟ್ಟದಲ್ಲಿ 2023 ಅಂತ್ಯಗೊಳ್ಳುವ ವೇಳೆಗೆ 9 ಮಿಲಿಯನ್ ಮಕ್ಕಳು ಬಾಲಕಾರ್ಮಿಕರಾಗುವ ಸಂಭವವಿದೆ, ಅವರಿಗೇನಾದರೂ ಸಾಮಾಜಿಕ ಬೆಂಬಲ ದೊರೆಯದಿದ್ದರೆ ಈ ಸಂಖ್ಯೆ ಮುಂಬರುವ ಕಾಲಘಟ್ಟದಲ್ಲಿ 46 ಮಿಲಿಯನ್‌ನಷ್ಟು ಹೆಚ್ಚುವ ಸಂಭವವಿದೆ ಎಂಬುದು ವಿಶ್ವಸಂಸ್ಥೆಯ ವರದಿಯೊಂದು ಬಾರಿಸಿರುವ ಕರೆಗಂಟೆ.

ಭಾರತದ ಮಟ್ಟಿಗೆ ಹೇಳುವುದಾದರೆ ಇಲ್ಲಿಯೂ ಕೋವಿಡ್ ತಂದಿಟ್ಟಿರುವ ಆರ್ಥಿಕ ಸಂಕಷ್ಟ ಬಾಲ ಕಾರ್ಮಿಕರು ಹೆಚ್ಚಾಗುವ ಸೂಚನೆಯನ್ನು ನೀಡುತ್ತಿದೆ. ಲಾಕ್‌ಡೌನ್‌ನಿಂದಾಗಿ ಸುಮಾರು 1.5 ಮಿಲಿಯನ್ ಶಾಲೆಗಳು ಮುಚ್ಚಿದ್ದು ಅದರಿಂದ 250 ಮಿಲಿಯನ್ ಮಕ್ಕಳು ಶಾಲೆಗಳಿಂದ ಹೊರಗುಳಿಯುವ ಪರಿಸ್ಥಿತಿ ಸೃಷ್ಟಿಯಾಗಿದೆ. ಇವರಲ್ಲಿ ಅನೇಕರು ಅಸುರಕ್ಷಿತ ವಲಸೆ ಮತ್ತು ದುಡಿಮೆಯ ವರ್ತುಲದಲ್ಲಿ ಸಿಲುಕಿ ಹಾಕಿಕೊಳ್ಳುವ ಸಾಧ್ಯತೆ ಇದೆ ಎಂದು ಕೆಲ ಅಧ್ಯಯನಗಳು ಸೂಚಿಸುತ್ತಿವೆ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಮಕ್ಕಳ ಶಾಲಾ ದಾಖಲಾತಿ ಮತ್ತು ಹಾಜರಾತಿಯಲ್ಲಿ ನಮ್ಮ ಸಾಧನೆಗಳೆಲ್ಲ ಹಿಮ್ಮೆಟ್ಟುವುದರಲ್ಲಿ ಸಂದೇಹವಿಲ್ಲ.


ಬಾಲಕಾರ್ಮಿಕ ಪದ್ಧತಿಯಿಂದ ಲಕ್ಷಾಂತರ ಮಕ್ಕಳು ಎದುರಿಸುತ್ತಿರುವ ಪರಿಸ್ಥಿತಿಗಳತ್ತ ಪ್ರಪಂಚದ ಗಮನ ಸೆಳೆದು ನಮ್ಮನ್ನು ಜಾಗೃತಗೊಳಿಸಲು ಆರಂಭವಾದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಇದೇ ಸೋಮವಾರ, ಎಂದರೆ ಜೂನ್ 12 ರಂದು 'ಎಲ್ಲರಿಗೂ ಸಾಮಾಜಿಕ ನ್ಯಾಯ: ಬಾಲಕಾರ್ಮಿಕ ಪದ್ಧತಿಯನ್ನು ಅಂತ್ಯಗೊಳಿಸಿ' ಎಂಬ ಘೋಷವಾಕ್ಯದೊಂದಿಗೆ 21 ನೇ ಬಾರಿಗೆ ಆಚರಣೆಯಾಗುತ್ತಿದೆ. ಆದರೆ ಇದು ಒಂದು ದಿನದಲ್ಲಿ ಅಂತ್ಯಗೊಳ್ಳುವ ವಿಚಾರವಲ್ಲ. ರಾಜ್ಯ ಮತ್ತು ನಾಗರಿಕ ಸಮಾಜಗಳು ಎಲ್ಲಿಯವರೆಗೂ ಸಂಘಟಿತ ಪ್ರಯತ್ನ ನಡೆಸಿ ಇದನ್ನು ಅಂತ್ಯಗೊಳಿಸುವುದಿಲ್ಲವೋ ಅಲ್ಲಿಯವರೆಗೂ ಮಕ್ಕಳು ಅಸಮಾನ ಸಮಾಜ ಮಾಡುವ ಅನ್ಯಾಯಗಳಿಗೆ ಬಲಿಯಾಗುತ್ತಲೇ ಇರುತ್ತಾರೆ.

ಸಕಾಲಿಕ



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ವಿಪಕ್ಷಗಳ ಅವಸರ, ಅಪಸ್ವರ ಸಲ್ಲದು







ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಮನೆ ಒಡತಿಗೆ ತಿಂಗಳಿಗೆ ಎರಡು ಸಾವಿರ ಮನೆ ಖರ್ಚಿಗೆ ಹಣ, ತಲಾ 10 ಕೆಜಿ ಅಕ್ಕಿ, ನಿರುದ್ಯೋಗಿ ಪದವಿ ಡಿಪ್ಲೊಮಾ ಮಾಡಿದ ಯುವಕ–ಯುವತಿಯರಿಗೆ 3000–1500 ರೂ. ಮಾಸಿಕ ಭತ್ಯೆ. ಇವೆಲ್ಲ ಜಾರಿಗೆ ಸ್ವಲ್ಪ ಅಂದರೆ ಮೂರು ತಿಂಗಳು +10 ದಿನ ಒಟ್ಟು 100 ದಿನಗಳ ಕಾಲಾವಕಾಶ ಕೊಟ್ಟು ನೋಡುವುದು ಸಾಧುವಲ್ಲವೇ?

ಚುನಾವಣೆ ಫಲಿತಾಂಶ ಬಂದು ಒಂದು ತಿಂಗಳೂ ಕಳೆದಿಲ್ಲ. ಮಂತ್ರಿಮಂಡಲ ರಚನೆಯಾಗಿ 15 ದಿನ ಪೂರ್ಣಗೊಂಡಿಲ್ಲ. ಸಚಿವರಿಗೆ ತಮ್ಮ ಖಾತೆಗಳ ಬಗ್ಗೆ ಇನ್ನೂ ಸರಿಯಾದ ಮಾಹಿತಿಯೇ ಇಲ್ಲ. ಎಲ್ಲವನ್ನು ಒಂದೇ ಸಾರಿ ಈಗಿಂದೀಗಲೇ ಜಾರಿ ಮಾಡಿ ಎಂದು ಪಟ್ಟು ಹಿಡಿದರೆ ಹೇಗೆ ಹೇಳಿ?

ಕಡು ಭ್ರಷ್ಟ ಬಿಜೆಪಿ ಸರ್ಕಾರವನ್ನು ನಾಲ್ಕು ವರ್ಷಗಳ ಕಾಲ ಸಹಿಸಿಕೊಂಡ ಮತದಾರರ ತಾಳ್ಮೆ ಮೆಚ್ಚುವಂತದ್ದು. ಅಂದ ಮೇಲೆ ಕಾಂಗ್ರೆಸ್‌ಗೂ ಸ್ವಲ್ಪ ಅವಕಾಶ ನೀಡಿ. ಮುಂದೆ ಬರಲಿದೆ ಲೋಕಸಭಾ ಚುನಾವಣೆ. ಆಗ ನಿಮ್ಮ ಬ್ರಹ್ಮಾಸ್ತ್ರ(ವೋಟ್) ಬಳಸಿ.

ಬಡವರಿಗೆ ಉಚಿತವಾಗಿ ದೊರೆಯುವ ಯೋಜನೆಗಳ ಜಾರಿ ಬಗ್ಗೆ ಸಾಧಕ–ಬಾಧಕ ನೋಡಲಿ. ಅದನ್ನು ಬಿಟ್ಟು ಆರಂಭದಿಂದಲೇ ಅಪಸ್ವರದ ಮಾತು, ಅಡ್ಡಗಾಲು ಹಾಕುವುದು, ಜನರನ್ನು ಪ್ರೇರೇಪಿಸುವುದು, ಹಿಂದೆ ರಾಜ್ಯವಾಳಿದವರಿಗೆ ಯೋಗ್ಯ ಕ್ರಮವಲ್ಲ. ನೀವು ಬಿಜೆಪಿಯವರು ಪ್ರಧಾನಿ ನರೇಂದ್ರ ಮೋದಿ ನೀಡಿದ್ದ ಭರವಸೆಗಳೆಲ್ಲಾ ಜಾರಿಯಾಗಿವೆಯಾ. ಬ್ಯಾಂಕ್‌ಗೆ 15 ಲಕ್ಷ ರೂ. ಹಾಕಿದ್ದಾರಾ ನೆನಪಿಸಿಕೊಂಡು ಇವರನ್ನು ಟೀಕಿಸಿ. ಸುಮಾರು 130 ಶಾಸಕರಿದ್ದವರು ಏಕೆ 65ಕ್ಕೆ ಕುಸಿದು ಬಿದ್ದರು ಎಂಬುದನ್ನು ಅವಲೋಕಿಸಿ. ಇನ್ನು ಜೆಡಿಎಸ್, 123 ಸ್ಥಾನ ಗೆಲ್ಲಿಸಿ ಕೊಡಿ ಅಧಿಕಾರಕ್ಕೆ ಬಂದು ಸ್ವರ್ಗವನ್ನೇ ಧರೆಗಿಳಿಸುತ್ತೇವೆಂದು ಬಡಾಯಿ ಕೊಚ್ಚಿಕೊಂಡ ಅವರ ಸ್ಥಿತಿ ಏನಾಗಿದೆ ಪರಾಮರ್ಶಿಸಿಕೊಳ್ಳಲಿ.

ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಕುಳಿತು ಆಡಳಿತ ನಡೆಸಿದ್ದನ್ನು ಮತದಾರ ಮರೆತಿಲ್ಲ. ಆದ್ದರಿಂದ ಮಾತಿನಲ್ಲಿ, ಟೀಕೆಯಲ್ಲಿ ಇತಿ ಮಿತಿ ಇರಲಿ. ಕಾಂಗ್ರೆಸ್ ಆಡಳಿತ ಕಾದು ನೋಡೋಣ. ತಪ್ಪು ಮಾಡಿದರೆ ಕಲ್ಲು ಎಸೆಯುವುದು ಇದ್ದೇ ಇದೆ? ಆದ್ದರಿಂದ ಸದ್ಯಕ್ಕೆ ತಾಳ್ಮೆ ಹಾಗೂ ಮೌನಕ್ಕೆ ಶರಣಾಗಿ.

> ಹೊಸ ಸರ್ಕಾರ, ಅದರ ಹೊಸ ಯೋಜನೆಗಳನ್ನು ಈಗಲೇ ಟೀಕಿಸುವ ಅಧಿಕಾರ ವಿರೋಧ ಪಕ್ಷಗಳಿಗಿಲ್ಲ. ಹಾಗೂ ರಾತ್ರೋರಾತ್ರಿ ರಾಮರಾಜ್ಯ ಮಾಡಲು ಸಾಧ್ಯವಿಲ್ಲ. ಇದಕ್ಕೂ ಮತದಾರ ಪ್ರಭುಗಳು ಸಹಕರಿಸಬೇಕು. ಕಾಂಗ್ರೆಸ್ ಸರ್ಕಾರವೂ ಎಚ್ಚರಿಕೆಯಿಂದ ಹೆಜ್ಜೆ ಇಡುವುದನ್ನು ಮರೆಯಬಾರದು. ಮೈಮರೆತರೆ "ಲೋಕಸಭಾ ಗುಮ್ಮ" ಬೆನ್ನ ಹಿಂದೆಯೇ ಇದೆ? ಎಚ್ಚರ... ಎಚ್ಚರ... ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೂ ಇದು "ಅಗ್ನಿಪರೀಕ್ಷೆ". ಅವರಿಗೆ ಐದು ಯೋಜನೆ ಜಾರಿ ಹಾಗೂ 136 ಶಾಸಕರ "ಸಂಕಟ" ಪರಿಹಾರದ ಸವಾಲು?

ಚುನಾವಣೆ ಸಂದರ್ಭದಲ್ಲಿ ಮಾತಿನ ಭರದಲ್ಲಿ "ಸಿಎಂ ನನ್ನ ಹೆಂಡತಿಗೂ, ಸಿ.ಟಿ.ರವಿ ಪತ್ನಿಗೂ, ಶೋಭಾ ಕರಂದ್ಲಾಜೆಗೂ, ಆರ್.ಅಶೋಕ್ ಪತ್ನಿಗೂ... ಉಚಿತ ಬಸ್ ಪ್ರಯಾಣ ಎಂದು ಹೇಳಿದ್ದು ನಿಜ. ಆ ಮಾತಿನ ಹಿಂದಿರುವ ಅವರ ಭಾವನೆ ಬಡವರ ಬಗೆಗಿನ ಕಾಳಜಿ ಅರ್ಥ ಮಾಡಿಕೊಳ್ಳಿ, ಸಿಎಂ ಹಾಗೆ ಹೇಳಿದ ಮಾತ್ರಕ್ಕೆ ಈ ಮಹನೀಯರ ಪತ್ನಿಯರು ಎಲ್ಲಾ ಐದು ಸೌಲಭ್ಯ ಪಡೆಯಲು ಸರತಿ ಸಾಲಿನಲ್ಲಿ ನಿಂತು ಅರ್ಜಿ ಸಲ್ಲಿಸುವರೇ? ಆತ್ಮಸಾಕ್ಷಿಯಿಂದ ಪ್ರಶ್ನಿಸಿ ನೋಡೋಣ.

ಹೊಸ ಸರ್ಕಾರ ಭರವಸೆಗಳೆಂಬ ಬೀಜ ಬಿತ್ತಿದೆ. ಮಳೆಯೂ ಬರುತ್ತಿದೆ. ಬೀಜ ಮೊಳಕೆಯಾಗಿ, ಅದು ಸಸಿಯಾಗಿ, ನಂತರ ತೆನೆಯಾಗಿ ಫಸಲು "ಕೈ"ಗೆ ಬರಲು ಕಾಲಾವಕಾಶ ಬೇಡವೇ? ನುಡಿದಂತೆ ನಡೆಯಿರಿ. ಎಲ್ಲವನ್ನೂ ಇಂದೇ ಜಾರಿ ಮಾಡಿ ಎಂದು ಮೊಂಡಾಟ ಮಾಡಿದರೆ ಮೆಚ್ಚನಾ ಭಗವಂತನು.

ಅಂದರೆ, ಕಾಂಗ್ರೆಸ್ ನಾಯಕರು ದೇವಲೋಕದಿಂದ ಬಂದವರಲ್ಲ. ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಲ್ಲರೂ ಇದೇ ಭೂಮಿಯಲ್ಲಿ ಹುಟ್ಟಿ ಇದೇ ಗರಡಿಯಲ್ಲಿ ಬೆಳೆದವರು. ಇವರ ಆಡಳಿತದಲ್ಲಿ ಅವರು ಆಡಿದ ಕಣ್ಣಾಮುಚ್ಚಾಲೆ ಭ್ರಷ್ಟಾಚಾರ ಆಟಗಳ ನೆನಪು ಜನರ ಮನಸ್ಸಲ್ಲಿ ಅಚ್ಚ ಹಸಿರಾಗಿದೆ. ಆದರೆ ಹಳೆಯದನ್ನು ಈಗ ಕೆದಕುವುದು ಸರಿಯಲ್ಲ. ಆದರೆ ಇವರೇನು "ಶುದ್ಧ ಹಸ್ತ"ರು ಎಂದು ಸರ್ಟಿಫಿಕೇಟ್ ಕೊಡುವ ಆತುರವಿಲ್ಲ!

ಅಳಿಯನ ಕುರುಡು ಬೆಳಗಾಗುವುದರೊಳಗೆ ಬಯಲಾಗುತ್ತದೆ ಎಂಬ ಗಾದೆಯಂತೆ; ಕೆಲವು ತಿಂಗಳು ಕಳೆಯಲಿ. ಇವರ ಬಯಲಾಟ ಬೀದಿಗೆ ಬರುವ ದಿನಗಳು ಬಹಳ ದೂರವಿಲ್ಲ. ಆದರೂ, ಹೊಸ ಸರ್ಕಾರ, ಅದರ ಹೊಸ ಯೋಜನೆಗಳನ್ನು ಈಗಲೇ ಟೀಕಿಸುವ ಅಧಿಕಾರ ವಿರೋಧ ಪಕ್ಷಗಳಿಗಿಲ್ಲ. ಹಾಗೂ ರಾತ್ರೋರಾತ್ರಿ ರಾಮರಾಜ್ಯ ಮಾಡಲು ಸಾಧ್ಯವಿಲ್ಲ. ಇದಕ್ಕೂ ಮತದಾರ ಪ್ರಭುಗಳು ಸಹಕರಿಸಬೇಕು. ಕಾಂಗ್ರೆಸ್ ಸರ್ಕಾರವೂ ಎಚ್ಚರಿಕೆಯಿಂದ ಹೆಜ್ಜೆ ಇಡುವುದನ್ನು ಮರೆಯಬಾರದು. ಮೈಮರೆತರೆ "ಲೋಕಸಭಾ ಗುಮ್ಮ" ಬೆನ್ನ ಹಿಂದೆಯೇ ಇದೆ? ಎಚ್ಚರ... ಎಚ್ಚರ...

ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೂ ಇದು "ಅಗ್ನಿಪರೀಕ್ಷೆ". ಅವರಿಗೆ ಐದು ಯೋಜನೆ ಜಾರಿ ಹಾಗೂ 136 ಶಾಸಕರ "ಸಂಕಟ" ಪರಿಹಾರದ ಸವಾಲು?

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

FOR SALE
All types of Beauty Parlour products available.
Contact: Mrs. SHENOY, Mysore
Mob: 9686399456

ಮಾರುವವರು – ಕೊಳ್ಳುವವರು
18x40, 20x30, 30x40, 40x60, 50x80 ಎಲ್ಲಾ ಅಳತೆಯ ಹೊಸ ಮನೆ, ಹಳೆ ಮನೆ, ಸೈಟು ಮೈಸೂರು ನಗರದ ಎಲ್ಲಾ ಬಡಾವಣೆಗಳಲ್ಲಿ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
Mob: 8618495118

20x30 ಡ್ಯೂಪ್ಲೆಕ್ಸ್ ಹೊಸ ಮನೆ – 68 ಲಕ್ಷ
30x40 ಸೈಟು ದಟ್ಟಗಳ್ಳಿ,
20x30 ಸೈಟು ದಟ್ಟಗಳ್ಳಿ – 25 ಲಕ್ಷ.
ಹಳೇ ಮನೆ – ಹೊಸ ಮನೆ ಮಾರುವವರು, ಕೊಳ್ಳುವವರು.
Mob: 9945042875

40x60 SITE FOR SALE
West Facing, Auction Site DIRECTLY MUDA
Rajeeva Nagar, Ali Miyan Road Near Dharu Salam Masjid, MYSORE
—Rs. 94 Lacs—
Call : 9845286583

ಮಂಟಪ ಮನೆ

ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

ಶ್ರೀ ಗೌರಿಶಂಕರ ಟ್ರಾವೆಲ್ಸ್
28-6-2023 (4 ದಿನ): ಭೀಮಾಶಂಕರ, ಘೃಷ್ಣೇಶ್ವರ, ಶಿರಡಿ, ನಾಶಿಕ್, ತ್ರ್ಯಂಬಕೇಶ್ವರ, ಎಲ್ಲೋರ ಇತ್ಯಾದಿ. 16-7-23 (1 ದಿನ): ಘಾಟಿ ಸುಬ್ರಮಣ್ಯ, ಇಶಾ ಫೌಂಡೇಶನ್, ಕೋಟಿಲಿಂಗ. 12-8-23 (7 ದಿನ): ಅಯೋಧ್ಯೆ ಪ್ರಯಾಗ್ ರಾಜ್, ಕಾಶಿ, ಗಯಾ, ಗಯಾ, ಬಾಬಾಬೈದ್ಯ ನಾಥ್, ಇತ್ಯಾದಿ.
ವಿಮಾನ / ಎಸಿ ಬಸ್ / ಊಟ / ರೂಂ.
Mob: 9620002114

ಖಾಲಿ ನಿವೇಶನ ಮಾರಾಟಕ್ಕಿದೆ
ನಂಜನಗೂಡಿನ ಪ್ರತಿಷ್ಠಿತ ಶ್ರೀ ಮಹದೇಶ್ವರ ಲೇಔಟ್‌ನಲ್ಲಿ 30x50 ಅಳತೆಯ ಪೂರ್ವ ದಿಕ್ಕಿಗೆ ಇರುವ ಖಾಲಿ ನಿವೇಶನ ಮಾರಾಟಕ್ಕಿದೆ
9880222454
9945781903

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
9945911118
9945144034,7026996123
ARTHOR SERVICES PVT. LTD
L-89, 2nd Floor, 'M' Block, Opp.Karuna Hospital, Kuvempunagar, Mysore-570023

ಅಡುಗೆಯವರು ಬೇಕಾಗಿದ್ದಾರೆ
ಬ್ರಾಹ್ಮಣ ಅಡುಗೆ ಕೆಲಸಗಾರರು ಬೇಕಾಗಿದ್ದಾರೆ. ಅನುಭವ ಬೇಕಿಲ್ಲ.
ಜಯಲಕ್ಷ್ಮಿಪುರಂ
9110467744

WANTED
Maths, PE, Social Science, Art and Craft, English and Computer teaching staff for reputed institution.
Send your resume through WhatsApp / Message.
Contact no:
8971577685, 9980631121

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಸೈಟ್ ಮಾರಾಟಕ್ಕಿದೆ
ಕಂದಾಯನಗರ ಬಡಾವಣೆ 1ನೇ ಹಂತ, ಶ್ರೀರಾಂಪುರ ಮೈಸೂರು ಇಲ್ಲಿ 30x40 ಅಳತೆಯ ಮುಡಾ ಸೈಟು ಮಾರಾಟಕ್ಕಿದೆ
9886699034
7795733772

JNANAYOTHI VIDYALAYA
BEERIHUNDI (HPS)
WANTED TEACHERS
English Teacher -2
Maths, Science - 2 (CBZ also)
NST/Montessori-2
any interested candidate can apply.
9845390377
8197057626

ಖುಷ್ಕಿ ಜಮೀನು ಮಾರಾಟಕ್ಕಿದೆ
ಮೈಸೂರು ತಾ॥ ಜಯಪುರ ಹೋ॥ ಜಯಪುರ ಗ್ರಾ॥ ಗೌತಮಿ ಪೆಟ್ರೋಲ್ ಬಂಕ್ ಹಿಂಭಾಗ 7.20 (ಏಳುವರೆ ಎಕರೆ) ಖುಷ್ಕಿ ಜಮೀನು ಬಡಾವಣೆ ನಿರ್ಮಿಸಲು ಯೋಗ್ಯವಾಗಿರುತ್ತದೆ ಆಸಕ್ತರು ಕರೆಮಾಡಿ ಮೊಬೈಲ್ ನಂ.
9448166798

ಕಳೆದಿದೆ
ರಾಮಚಂದ್ರ S/o ಲೇ॥ ಕೃಷ್ಣೇಗೌಡ ಆದ ನಾನು ನಂ.133, ಅರಳಿಮರ ರಸ್ತೆ, ಮಂಚೇಗೌಡನ ಕೊಪ್ಪಲು, ಮೈಸೂರು ಇಲ್ಲಿ ವಾಸವಿದ್ದು, ಮೂಲೆ ನಿವೇಶನ ಸಂಖ್ಯೆ 124, ವಾಣಿವಿಲಾಸ ಮೊಹಲ್ಲಾ, ಹೆಬ್ಬಾಳು, ಮೈಸೂರು ಈ ಸ್ವತ್ತಿನ ಮೂಲ ಮಂಜೂರಾತಿ ಪತ್ರ ಕಳೆದಿದ್ದು, ಸಿಕ್ಕವರು ಸಂಪರ್ಕಿಸಿ
9886239920
8088020667

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ಟಿಟ 15200/- to 86000/-
9740733021
9535028750

ಬೇಕಾಗಿದ್ದಾರೆ
ಬಿಲ್ಲಿಂಗ್, ಅಕೌಂಟ್ಸ್, ಅಂಗಡಿ ಕೆಲಸ ಹಾಗೂ ಡೆಲಿವರಿಗಳಿಗೆ ಕೆಲಸದವರು ಬೇಕಾಗಿದ್ದಾರೆ. ಅಂಗಡಿ ಕೆಲಸದವರಿಗೆ ದ್ವಿಚಕ್ರವಾಹನ ಡ್ರೈವಿಂಗ್ ಲೈಸನ್ಸ್ ಕಡ್ಡಾಯ ಹಾಗೂ ಮೈಸೂರು ನಗರ ನಿವಾಸಿಗಳಿಗೆ ಆದ್ಯತೆ ನೀಡಲಾಗುತ್ತದೆ.
ಶ್ರೀನಿವಾಸ ಇಮೇಜ್ ಪ್ರಾಡೆಕ್ಟ್ಸ್
ಮೋರ್ ಮೇಗಾ ಮಾರ್ಟ್ ಹತ್ತಿರ, ಶಿವರಾಂಪೇಟೆ, ಮೈಸೂರು
9902902530

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಮನೆ ಮಾರಾಟಕ್ಕಿದೆ
30X40 Corner G/F, F/F, S/F ಟೀಚರ್ಸ್ ಲೇಔಟ್ & ಆಲನಹಳ್ಳಿ ಲೇಔಟ್
IPS ಲೇಔಟ್ 3ನೇ ಹಂತ, Near Ring Road N/F Total Sqft 4300, 40x95 ನಿವೇಶನ ಮಾರಾಟಕ್ಕಿದೆ
9880929323

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50. ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ
9901080314

ತಕ್ಷಣ ಬೇಕಾಗಿದ್ದಾರೆ
SSLC / PUC / Diploma in Civil ಸರ್ವೆ & Office Work - Male
Age - 20 to 30, Salary Rs.7000/- to 9000/-
9900885554
9886243094

SITE FOR SALE
16X40 Corner Site East Facing Mahalakshmi Layout Mosambayana Halli Road, Varuna, Mysore
Broker Excuses
9900251774

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
9148733213

Sudarshan Saur
SOLAR WATER HEATER


SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ಸುವರ್ಣ ಯಾತ್ರ
ಕಾಶಿ ಪ್ರವಾಸ 7 ದಿನಗಳು 23–6–23, ಪುರಿ ಜಗನ್ನಾಥ ಪ್ರವಾಸ 4 ದಿನಗಳು 12–7–23, ನೇಪಾಳ ಪಶುಪತಿನಾಥ ಪ್ರವಾಸ 9 ದಿನಗಳು 13–7–23. ಅಮರನಾಥ ಯಾತ್ರ ಪ್ರವಾಸ 10 ದಿನಗಳು. ಮಧ್ಯಪ್ರದೇಶ ಪ್ರವಾಸ 3–7–23 – 2 ಜ್ಯೋತಿರ್ಲಿಂಗದೊಂದಿಗೆ 4 ದಿನಗಳು.
9008381022, 9019462508

HOUSE FOR SALE
20x30 N/F
Kanakadasanagar (Dattagalli), Ground Floor 2 BHK, First floor 2 BHK.
Buyers only contact.
BROKERS EXCUSE.
Mob: 9945428296

ಕೆಲಸಕ್ಕೆ ಬೇಕಾಗಿದ್ದಾರೆ
ಡಿ.ಟಿ.ಪಿ ಆಪರೇಟರ್ (M/F) ಕನ್ನಡ (ನುಡಿ) ಮತ್ತು ಇಂಗ್ಲೀಷ್ ಟೈಪಿಂಗ್ ಕಡ್ಡಾಯವಾಗಿ ಗೊತ್ತಿರಬೇಕು.
ಸ್ಥಳ: ಸಂಕ್ರಾಂತಿ ಸರ್ಕಲ್ ಹತ್ತಿರ, ಹೆಬ್ಬಾಳು, ಮೈಸೂರು
9900525880
8105946168

REQUIRED
Telecallers Men & Women For Bajaj Finance Comapany Any Qualification Eligible Language- Tamil, Telugu, Malayalam and Kannada
6969567994
8105624293

WANTED
SALES BOY for FURNITURE SHOP at Nanjangud (2 wheeler must). Original Furniture at Factory Price.
TST FURNITURE PLUS
3rd Cross in Side, RP Road, Opp. KEB Office Road, Nanjangud.
Mob: 9886723461

WANTED
We required ITI Turner, Fitter, Electricians and Diploma in Mechanical, preferably female.
0821-2582668, 7204445679
Address: Mystech Machines #Q113, 4th Cross, 8th Main, Hebbal Industrial Estate, Mysore-570 016

Wanted Teachers
Ideal School Yelwala
English Medium
Only Ladies Teachers
B.Sc., B.Ed., M.Sc., B.Ed. (Maths). Contact:
9900593211, 9845353761

ಕಳೆದಿದೆ
ಕಣ್ಣಣಿ. ಎ, ನಂ. 65 ಬಿಬಿ ಕೇರಿ, ಪುಲಿಕೇಶಿ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು, ಅರ್ಜಿದಾರರ ಬಾಬ್ತು ತಾಯಿಯ ಹೆಸರಿನಲ್ಲಿರುವ ಮನೆ ನಂ. 65, ಬಿಬಿ ಕೇರಿ ವಿಲಾಸ್ ಹಕ್ಕು ಪತ್ರ Reg No. 51921/2008-09 ರ 3ನೇ ಪುಟ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9945463895

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ಬೇಕಾಗಿದ್ದಾರೆ
ಟ್ರೆಂಡ್ಸ್ ಸೆರಾಮಿಕ್ ಅಂಡ್ ಸಾನಿಟೇಷನ್ ಬೋಗಾದಿ ಮೈಸೂರಿನಲ್ಲಿ ಮಾರ್ಕೆಟಿಂಗ್ ಮತ್ತು ಸೇಲ್ ಎಕ್ಸಿಕ್ಯೂಟೀವ್ ಕೆಲಸ ಮಾಡಲು ಹುಡುಗ ಮತ್ತು ಹುಡುಗಿಯರು. ದ್ವಿಚಕ್ರ ವಾಹನ ಹೊಂದಿರಬೇಕು. ಆಕರ್ಷಕ ವೇತನ & ಪೆಟ್ರೋಲ್ ಭತ್ಯೆ ನೀಡಲಾಗುವುದು. ಸಂಪರ್ಕಿಸಿ:
9108668282, 9448361818

SITE & HOUSE FOR SALE
1) Site (N/F) 3807 Sqft. Bhoomika Garden, yelawala Bus Stand
2) 30x40 House For Sale Vasantha Nagar
3) 20x30 House For Sale Shantveri Gopal Gowda
4) 30x50 (North East) Corner Site for Sale Near Lalithadripura
9900777408
7760413556

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಮೈಸೂರು ಲ್ಯಾಂಡ್ ಮಾರ್ಟ್
ಹಳೆ ಕೆಸರೆ, ಸಾತ್‌ಗಳ್ಳಿ ಮತ್ತು ಬನ್ನೂರು ರೋಡ್ ಸುತ್ತಮುತ್ತ
30x40 & 40x60
ನಿವೇಶನಗಳು ಲಭ್ಯವಿದೆ
ಸಂಪರ್ಕಿಸಿ
7483656875

ಕೆಲಸ ಕೆಲಸ ಕೆಲಸ
ಕನ್ನಡ ಮಾತನಾಡಲು ಬರುವ 18 ವರ್ಷ ಮೇಲ್ಪಟ್ಟ 7th, SSLC, PUC, ITI, DIPLOMA, PASS/FAIL ಆಗಿರುವ ಯುವಕ / ಯುವತಿಯರಿಗೆ ನೇರ ನೇಮಕಾತಿ, ಸಂಬಳ 18000,ರಿಂದ 28000ವರೆಗೆ ಸಿಗುತ್ತದೆ, ಸೌಲಭ್ಯ ಊಟ, ರೂಂ , ESI, PF, ID CARD ಸಿಗುತ್ತದೆ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ. ರಾಧ
9035023710, 9538905503

ಬೇಕಾಗಿದ್ದಾರೆ
1.ಅಡುಗೆಯವರು (ಮಹಿಳೆಯರು ಮಾತ್ರ)
2. ಮನೆ ಕೆಲಸಕ್ಕೆ, ಸರಸ್ವತಿಪುರಂ, ಕಾಮಾಕ್ಷಿ ಆಸ್ಪತ್ರೆ ಹತ್ತಿರ.
ಸಂಪರ್ಕಿಸಿ:
74112 16781

COMMERCIAL SPACE FOR RENT
2000 Sq.ft. 2nd floor, Fully Furnished, 14 KW Power Backup, & AC at Café Biriyani corner building, Vishwamanava Double Road, Kuvempunagar, Mysore.
Broker Excuse
9448601180 | 7899756195

ಬೇಕಾಗಿದ್ದಾರೆ
ಹೆಲ್ಪರ್/ಕ್ಯಾಷಿಯರ್, ಸೂಪರ್‌ವೈಸರ್ Accountant ಪೆಟ್ರೋಲ್ ಪಂಪ್‌ನಲ್ಲಿ ಕೆಲಸ ಮಾಡಲು ಪುರುಷರು ಹಾಗೂ ಮಹಿಳೆಯರು ವಯಸ್ಸಿನ ಮಿತಿ 20-40ರ ಒಳಗೆ
7259858585

FOR SALE / LEASE
Successfully Running Boutique & Beauty Parlour for Sale or Lease in Kuvempunagar, Mysore
8792720395

SITE FOR SALE
30X50, EAST FACING SITE, NEXT TO VIDYA VIKAS ENGINEERING COLLEGE, MYSORE. CONTACT OWNER :
9482029729

WANTED
LECTURER'S - 5 POST
M.Sc IN MICROBIOLOGY | BIOCHEMISTRY
PART TIME | FULL TIME
9886654463

HOUSE FOR SALE
20x30 MUDA, New 3 BHK, Duplex Fully Furnished House, N/F Door at Dattagalli, Near Triveni Supermarket, Price-79 Lakhs, Contact Owner
6361295132

HOUSE FOR RENT
2BHK 1st Floor House for Rent with Two wheeler Parking, Near Snake shyam Road, 2nd stage, Vijaynagar, Mysore
9916820426

WANTED TEACHERS
LITTLE STAR ABC MONTESSORI, any degree, freshers can apply, English Mandatory, Female Candidates Only, near to Vijayanagar, Mysore contact:
8884970282 | 0821-2955499

BRIDE / GROOMS MATCH MAKERS
ವಧು/ವರರ ಮಾಹಿತಿ ಕೇಂದ್ರ
PUC ವಧುಗೆ 35 ವರ್ಷ ಮನೆ ಅಳಿಯ ಬೇಕು ಎಲ್ಲಾ ಜಾತಿಯ Govt Job, Private, Job, ಸ್ವಂತ ಉದ್ದಿಮೆ, ಡಾಕ್ಟರ್, BE, CA, Diploma All Degree ಮೊದಲನೇ ಮದುವೆ, ಡೈವೋರ್ಸಿಗಳು, ವಿದುರರು, ವಿಧವೆಯರು, 120 ಸ್ವಂತತ್ರ್ಯ ವಧುಗಳಿಗೆ ವರಬೇಕು ಕರ್ನಾಟಕಾದ್ಯಂತ ಇರುವ ಲಕ್ಷಾಂತರ ವಧು–ವರರ ಆಯ್ಕೆಗಾಗಿ ನೇರ ಭೇಟಿನೀಡಿ
7975728012

FOR RENT
1) ಸಂತೇಪೇಟೆ, 1st Floor 20x75 = 1500 sqft
2) Near ಬನುಮಯ್ಯ ಚೌಕ 20x40 - 800 sqft
9448150597
6362582678

ಕುಕ್ ಬೇಕಾಗಿದ್ದಾರೆ
ಮೈಸೂರಿನ ರಿಂಗ್ ರಸ್ತೆ, ದೇವೇಗೌಡ ಸರ್ಕಲ್‌ನಲ್ಲಿ ಇರುವ ಹೋಟೆಲ್‌ಗೆ ಕುಕ್ (ವೆಜ್, ನಾನ್‌ವೆಜ್) ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ.
9380394364

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ.
ಬಾಲಕೃಷ್ಣ ಪ್ರಾವಿಷನ್ ಸ್ಟೋರ್, ಕರ್ನಾಟಿಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ.
ವಯಸ್ಸು : 18 ರಿಂದ 40 ವರ್ಷ
ವಿದ್ಯಾರ್ಹತೆ: 7 ರಿಂದ ಪಿಯುಸಿ
ಸಂಪರ್ಕಿಸಿ:
7760913433

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಖ್ಯಾತ ಕಂಪನಿಗಳಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು ಬೇಕಾಗಿದ್ದಾರೆ 1 ರಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿಯವರಿಗೂ ಅಥವಾ (ವಿದ್ಯಾರ್ಹತೆ ಇಲ್ಲ) ವೇತನ ಅರ್ಹತೆಗೆ ತಕ್ಕಂತೆ ಇರುತ್ತದೆ. ವಯೋಮಿತಿ 18 ರಿಂದ 45 ವರ್ಷದ ವರೆಗೆ ಇರುತ್ತದೆ ESI, PF ಹಾಗೂ ಊಟ, ವಸತಿ ಸೌಲಭ್ಯವಿರುತ್ತದೆ (ಪಾರ್ಟ್ ಟೈಮ್ ಜಾಬ್ ಇರುತ್ತದೆ).
9164975503
7795465519 | 8217498208

Study @ G-TEC Campus
DUBAI
Learn | Work | Earn
DDSAI — Diploma in Data Science & AI | DIFM — Diploma in International Finance Management
VISA | ACCOMODATION
FOOD | TRANSPORTATION
PART-TIME JOB OPTIONS
G-TEC Computer Education
8951208347

ಮನೆ ಭೋಗ್ಯಕ್ಕೆ ಇದೆ
ಕೆ.ಜಿ.ಕೊಪ್ಪಲಿನಲ್ಲಿ 1ನೇ ಅಂತಸ್ತಿನ 1BHK ಹಾಲ್ ಅಡುಗೆ ಮನೆ ಸ್ನಾನದ ಮನೆ, ದೇವರ ಮನೆ, ಬಾತ್‌ರೂಂ, ಸೋಲಾರ್ & N/F & WF ಭೋಗ್ಯಕ್ಕಿದೆ.
5 ಲಕ್ಷ (ನೆಗೋ...) ಸಂಪರ್ಕಿಸಿ:
ಸತೀಶ್: 9113612442
ಸ್ವಾಮಿ: 9845570573

ಬೇಕಾಗಿದ್ದಾರೆ
1. ಹೌಸ್ ಕೀಪಿಂಗ್ ಸೂಪರ್‌ವೈಸರ್ –2 ಹುದ್ದೆ
2. ಮೆಂಟೆನೆನ್ಸ್ – 2 ಹುದ್ದೆ
ಹೋಟೆಲ್ ಉದ್ದಿಮೆಯಲ್ಲಿ ಅನುಭವಿರಬೇಕು.
9620274630
9108085994

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಿ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ತಕ್ಷಣದಲ್ಲಿ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

100% Job
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 16,000 ರಿಂದ 38,000/- (ESI+PF+OT) ಷರತ್ತು ಅನ್ವಯ
6366141586,6364103418

WANTED
Immediately Joiner
Admin Nos. - 3
Female Telecaller Nos. - 10
PG Facilities Available
Meghana HR
7829803426

WANTED URGENTLY FEMALE STAFF
1) BBM Graduate - 1 No.
2) BCA - 1
3) Office Assistant - 2 Nos.
Office at B.M. Habitat mall Jayalakshmipuram, Mysore
6360254022

ಬಾಡಿಗೆಗೆ ದೊರೆಯುತ್ತದೆ
5 Rooms & Dormitory Hall Available (P.G Space, Office Space, Dance Class, Yoga Class, Space available)
7353682106
9482139665

SHASWATHA SEVA SCHOOL
T.Narasipura Main Road, Alanahalli, Mysuru
WANTED TEACHER
Sub: Maths -
Qul: B.Sc, B.Ed/ M.Sc, B.Ed
Intereted Candidates May apply with all Xerox Documents
0821-2478099
9611353433
M.R. Choudhary, Secretary

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಫ್ರಂಟ್ ಆಫೀಸ್ ಮತ್ತು ಅಕೌಂಟ್ಸ್ ನಿರ್ವಹಣೆಗಾಗಿ, ಬಿ.ಕಾಂ ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ
8073393505

ನಿವೃತ್ತ ನೌಕರರಿಗೆ ಉದ್ಯೋಗ ಅವಕಾಶದ ಸೆಮಿನಾರ್
ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಅವಕಾಶದ ತರಬೇತಿಯ ಶಿಬಿರವನ್ನು ಏರ್ಪಡಿಸಲಾಗಿದೆ. ನಿವೃತ್ತ ಕೇಂದ್ರ/ರಾಜ್ಯ, ಸಾರ್ವಜನಿಕ ಸಂಸ್ಥೆಯ ನೌಕರರು ಹಾಜರಾಗ ಬಹುದು. ವಿದ್ಯಾರ್ಹತೆ SSLC, Above Any Degree, ವಯಸ್ಸು 35 ವರ್ಷ ಮೇಲ್ಪಟ್ಟು. ದಾಖಲಾತಿಗಳು: ಫೋಟೋ, ಪಾನ್‌ಕಾರ್ಡ್, ಆಧಾರ್ ಕಾರ್ಡ್, ವಿದ್ಯಾರ್ಹತೆ ದಾಖಲೆ, ಬ್ಯಾಂಕ್ ಪಾಸ್ ಬುಕ್ ಸೆಮಿನಾರ್ ನಡೆಯುವ ಸ್ಥಳ: ಮೌರ್ಯ ರೆಸಿಡೆನ್ಸಿ ಉಡ್‌ಲ್ಯಾಂಡ್ ಟಾಕೀಸ್ ಹತ್ತಿರ, ಮೈಸೂರು. ದಿನಾಂಕ 10–06–2023 ಸಮಯ 11 ಗಂಟೆಗೆ ಲಘು ಉಪಹಾರ ವ್ಯವಸ್ಥೆ ಇದೆ.
9449068132,9480055885

ಇಂದೇ ಸಂಪರ್ಕಿಸಿ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 156 ವಿವಿಧ ಹುದ್ದೆಗಳಿಗೆ SSLC, PUC, ITI, Degree ಆಗಿರುವ ಉತ್ಸಾಹಿ ಯುವಕ /ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯುಊಟದೊಂದಿಗೆ 14,000–30,000/- (ESI+PF+OT)
9164052361,9035143190

ಜಮೀನು ಬೇಕಾಗಿದೆ
ಮೈಸೂರು ನಗರದ ಸುತ್ತಮುತ್ತ 20 ಕಿ.ಮೀ ಒಳಗೆ ಜಮೀನು ಬೇಕಾಗಿದೆ. (1 ರಿಂದ 5 ಎಕರೆ)
9066558856

SITE FOR SALE
50X80 South Face Opp. Park, Vijayanagara 4th Stage, 2nd Phase
9620026084

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷರು): ಪಾಲಳ್ಳಿ, ಬಂಬೂಬಜಾರ್, ಬನ್ನಿಮಂಟಪ, ಸಯ್ಯಾಜಿರಾವ್ ರಸ್ತೆ, ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ವಸತಿ ಹಾಗೂ ಊಟ ದೊರಕುವುದು. ಆಸಕ್ತರು ಸಂಪರ್ಕಿಸಿ:
8310098788
6361439167

ಕೆಲಸಕ್ಕೆ ಬೇಕಾಗಿದ್ದಾರೆ
ಫೋಟೋ ಫ್ರೇಮ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
8147433235

ಮೈಸೂರು ಮ್ಯಾರೇಜ್ ಬ್ಯೂರೋ
ಲಿಂಗಾಯತ, ಬ್ರಾಹ್ಮಣ, ಒಕ್ಕಲಿಗ, ಕುರುಬ, ನಾಯಕ, ಆದಿಕರ್ನಾಟಕ, ನಯನ ಕ್ಷತ್ರಿಯ, ಭೋವಿ, ಮರಾಠ, ವಿಶ್ವಕರ್ಮ, ಈಡಿಗ, ಮಡಿವಾಳ, ಕುಂಬಾರ, ತಮಿಳು, ದೇವಾಂಗ, ಮಲೆಯಾಳ ಇನ್ನೂ ಎಲ್ಲಾ ಜಾತಿಯ ಸುಂದರ ಶ್ರೀಮಂತ ವಿದ್ಯಾವಂತ ವಧುವರರಿಗೆ ನೇರ ಸಂಪರ್ಕಿಸಿ: ಡಾ. ಗುರೂಜಿ
9448229184
7899625268

ಸೈಟು ಮಾರಾಟಕ್ಕಿದೆ
30x40 ಅಳತೆಯ DTCP "A" ಖಾತೆಯುಳ್ಳ ಸೈಟು ಮಾರಾಟಕ್ಕಿದೆ
Rs.11,25,000/-
ನಿರ್ಮಾಣ್ ಲೇಔಟ್ ತಳೂರು ಸರ್ಕಲ್ ಹತ್ತಿರ, ಮೈಸೂರು
9742198093

FOR SALE
Buy & Sell Site , House, Land
1) 12x36 G+2 House Kuvempu Nagar
2) 30x40 40x60 Somanatha Nagar attch
3) 30x40 Duplex House Srirampura
4) 20x30 New and Old House available in Dattagalli
5) 20x30,30x40,40x60 sites in H D Kote Road Near Defence Apartment
9538690359,9035990359

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮೇಲುಕೋಟೆ ಅಭಿವೃದ್ಧಿಗೆ ಪ್ರಾಧಿಕಾರ ರಚನೆ

ಸಚಿವ ಎನ್. ಚಲುವರಾಯಸ್ವಾಮಿ ಭರವಸೆ



ಮೇಲುಕೋಟೆ, ಜೂ.7– ಕುಲದೈವ ಚೆಲುವ ನಾರಾಯಣಸ್ವಾಮಿ ಪವಿತ್ರ ಕ್ಷೇತ್ರ ಮೇಲುಕೋಟೆ ಅಭಿವೃದ್ಧಿಗೆ ಪ್ರಾಧಿಕಾರ ರಚಿಸಿ ಭಕ್ತರ ವಸತಿ ಸೌಕರ್ಯ ಸೇರಿದಂತೆ ಎಲ್ಲಾ ಮೂಲ ಸೌಕರ್ಯ ಕಲ್ಪಿಸಲು ಶ್ರಮಿಸುವುದಾಗಿ ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಭರವಸೆ ನೀಡಿದರು.

ದೇವರ ದರ್ಶನದ ನಂತರ ಮಾಧ್ಯಮದವ ರೊಂದಿಗೆ ಮಾತನಾಡಿದ ಸಚಿವರು, ಮನೆದೇವರ ದರ್ಶನ ನನಗೆ ಅತ್ಯಂತ ಸಂತೃಪ್ತಿ ನೀಡಿದೆ. ಚೆಲುವ ನಾರಾಯಣಸ್ವಾಮಿ ಜನಸೇವೆಗೆ ನನಗೆ ಶಕ್ತಿ ತುಂಬಿದ್ದಾನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗಮನ ಸೆಳೆದು ಸಚಿವ ಸಂಪುಟದಲ್ಲೇ ತೀರ್ಮಾನಿಸಿ ಮೇಲುಕೋಟೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುದಾನ ಬಿಡುಗಡೆ ಮಾಡಿಸುತ್ತೇನೆ. ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸಹ ಉತ್ಸಾಹವಾಗಿ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ ಎಂದರು.

ಸಚಿವರಾದ ನಂತರ ಮಂಗಳವಾರ ರಾತ್ರಿ ಕುಟುಂಬ ಸಮೇತರಾಗಿ ಮೇಲುಕೋಟೆಗೆ ಆಗಮಿಸಿದ ಸಚಿವರು ಆರಾಧ್ಯ ದೈವ ಚೆಲುವನಾರಾಯಣಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ನಾಡಿನ ಜನರ ಒಳಿತಿಗಾಗಿ ಹಾಗೂ ಭಕ್ತಸ್ನೇಹಿಯಾಗಿ ಮೇಲುಕೋಟೆ ಅಭಿವೃದ್ಧಿ ಮಾಡಲು ಶಕ್ತಿ ನೀಡುವಂತೆ ಪ್ರಾರ್ಥನೆ ಸಲ್ಲಿಸಿದರು. ಸಚಿವರ ಧರ್ಮಪತ್ನಿ ಧನಲಕ್ಷ್ಮಿ, ಮಹಾಲಕ್ಷ್ಮಿ ಅಮ್ಮನವರಿಗೆ ಮಡಿಲು ತುಂಬಿ ಆರತಿ ಬೆಳಗಿಸುವ ಮೂಲಕ ಹರಕೆ ತೀರಿಸಿದರು.

ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ಇದೇ ಪ್ರಥಮ ಬಾರಿಗೆ ದೇವಾಲಯಕ್ಕೆ ಆಗಮಿಸಿದ ಸಚಿವ ಚೆಲುವರಾಯಸ್ವಾಮಿ ದಂಪತಿಯನ್ನು ದೇವಾಲಯದ ಆಡಳಿತಾಧಿಕಾರಿಗಳೂ ಆದ ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್ ನಾಗರಾಜು ಬರಮಾಡಿಕೊಂಡರು. ನಂತರ ದೇವಾಲಯದ ಅನೂಚಾನ ಸಂಪ್ರದಾಯದಂತೆ ವಿಶೇಷ ಪಾದುಕಾ ಮರ್ಯಾದೆ, ಪೂರ್ಣಕುಂಭ ಸ್ವಾಗತ ಹಾಗೂ ಮಂಗಳವಾದ್ಯದೊಂದಿಗೆ ಬರಮಾಡಿಕೊಳ್ಳಲಾಯಿತು. ಉತ್ಸವಮೂರ್ತಿ ರಾಮಾನುಜಾಚಾರ್ಯರ ದರ್ಶನದ ನಂತರ ಸಚಿವ ದಂಪತಿಗಳಿಗೆ ವೇದಮಂತ್ರದೊಂದಿಗೆ ರಾಜಾಶೀರ್ವಾದ ಮಾಡಿ, ನಿಮ್ಮ ನೇತೃತ್ವದಲ್ಲಿ ಶ್ರೀಕ್ಷೇತ್ರ ಅಭಿವೃದ್ಧಿಯಾಗಲಿ ಎಂದು ಸ್ಥಾನಿಕರು, ಅರ್ಚಕ, ಪರಿಚಾರಕ ಕೈಂಕರ್ಯಪರರು ಹಾರೈಸಿದರು.

ನಂತರ ರಾಮಾನುಜಾಚಾರ್ಯರೇ ಭಿಕ್ಷೆ ಸ್ವೀಕರಿಸಿದ ಐತಿಹ್ಯವಿರುವ ಯತಿರಾಜದಾಸರ್ ಗುರುಪೀಠಕ್ಕೆ ಭೇಟಿ ನೀಡಿ, ವಿಜಯಲಕ್ಷ್ಮಿ ಅಮ್ಮನವರ ದರ್ಶನ ಪಡೆದು ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿಯವರ ಆಶೀರ್ವಾದ ಪಡೆದರು. ಈ ವೇಳೆ ಸಚಿವ ದಂಪತಿಯನ್ನು ಯತಿರಾಜದಾಸರ್ ಗುರುಪೀಠದಿಂದ ಅದಿದೈವ ಚೆಲುವನಾರಾಯಣಸ್ವಾಮಿ ಭಾವಚಿತ್ರ ನೀಡಿ ಗೌರವಿಸಲಾಯಿತು. ಈ ವೇಳೆ ಪಾಂಡವಪುರ ಉಪ ವಿಭಾಗಾಧಿಕಾರಿ ಅಕ್ರಂಪಾಷಾ, ತಹಶೀಲ್ದಾರ್ ಸೌಮ್ಯ, ಮೇಲುಕೋಟೆ ದೇವಾಲಯದ ಇಒ ಮಹೇಶ್ ಸೇರಿದಂತೆ ಹಲವು ಅಧಿಕಾರಿಗಳು ಭಾಗವಹಿಸಿದ್ದರು.

ವರದಕ್ಷಿಣೆ ಕಿರುಕುಳ ನೀಡಿ ಪತ್ನಿ ಸಾವಿಗೆ ಕಾರಣನಾದ ಪತಿರಾಯನಿಗೆ 17 ವರ್ಷ ಜೈಲು

ಪಾಂಡವಪುರ, ಜೂ.7– ವರದಕ್ಷಿಣೆ ಕಿರುಕುಳ ನೀಡಿ ಪತ್ನಿ ಸಾವಿಗೆ ಕಾರಣನಾದ ಪತಿರಾಯನಿಗೆ ಶ್ರೀರಂಗಪಟ್ಟಣ ನ್ಯಾಯಾಲಯ 17 ವರ್ಷ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಪಾಂಡವಪುರ ತಾಲೂಕು ರಾಗಿಮುದ್ದನಹಳ್ಳಿ ಗ್ರಾಮದ ಕೃಷ್ಣಾಚಾರಿ ಎಂಬುವರ ಪುತ್ರ ಲೋಕೇಶಾಚಾರಿ ಶಿಕ್ಷೆಗೆ ಗುರಿಯಾದವನಾಗಿದ್ದು, ಈತ ಹೆಚ್.ಡಿ.ಕೋಟೆ ತಾಲೂಕು ಅರಸನಹುಂಡಿ ಗ್ರಾಮದ ಸೋದರಮಾವನ ಪುತ್ರಿ ಎಸ್.ಸುಜಾತ ಎಂಬಾಕೆಯನ್ನು ವಿವಾಹವಾಗಿದ್ದ. ಈ ದಂಪತಿಗೆ ಇಬ್ಬರು ಮಕ್ಕಳಿದ್ದರು.

ಲಾರಿ ಚಾಲಕನಾಗಿರುವ ಲೋಕೇಶಾಚಾರಿ ತವರು ಮನೆಯಿಂದ ವರದಕ್ಷಿಣೆ ತರುವಂತೆ ಪತ್ನಿಗೆ ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ನೀಡುತ್ತಿದ್ದ ಎಂದು ಹೇಳಲಾಗಿದೆ. ಸುಜಾತ ಮನೆಯವರು ಈ ಸಂಬಂಧ ಹಲವು ಬಾರಿ ನ್ಯಾಯ ಪಂಚಾಯ್ತಿ ನಡೆಸಿ ಬುದ್ಧಿವಾದ ಹೇಳಿದರೂ ಕೂಡ ಈತನ ಕಿರುಕುಳ ಮುಂದುವರೆದಿತ್ತು ಎಂದು ಹೇಳಲಾಗಿದ್ದು, ಈತನ ಕಿರುಕುಳ ತಾಳಲಾರದೇ ಸುಜಾತ 2015ರಲ್ಲಿ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದರು. ಈ ಸಂಬಂಧ ಆಕೆಯ ತಂದೆ ಸೋಮಾಚಾರಿ ಪಾಂಡವಪುರ ಪಟ್ಟಣ ಠಾಣೆಗೆ ದೂರು ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಗೋಪಾಲ ಕೃಷ್ಣ ರೈ ಅವರು ಲೋಕೇಶ್ ಆಚಾರಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ.



ನಾಗಮಂಗಲ ತಾಲೂಕು ಬ್ರಹ್ಮದೇವರಹಳ್ಳಿ ಗ್ರಾಪಂ ವ್ಯಾಪ್ತಿಯ ಮೇಗಲ ಇಜ್ಜಲಘಟ್ಟ ಗ್ರಾಮದ ಮಾರಮ್ಮನ ದೇವಸ್ಥಾನದ ಮುಂಭಾಗ 15ನೇ ಹಣಕಾಸು ಯೋಜನೆಯಡಿ 4.98 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಶುದ್ಧ ನೀರಿನ ಘಟಕವನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು. ಗ್ರಾಪಂ ಅಧ್ಯಕ್ಷೆ ತಾರಾ ಚಂದ್ರು, ಸದಸ್ಯರಾದ ಎನ್.ಉಮೇಶ್, ಪುಟ್ಟರಾಜು, ತಮ್ಮಯ್ಯ, ರಾಜಣ್ಣ, ರಂಗಸ್ವಾಮಿ, ಉಪೇಂದ್ರ, ರವಿಕುಮಾರ್, ನವೀನ, ರಮೇಶ್ ಇನ್ನಿತರರು ಉಪಸ್ಥಿತರಿದ್ದರು.

ಬಾಕಿಯಿರುವ ಹಾಲಿನ ಪ್ರೋತ್ಸಾಹ ಧನ 669.59 ಕೋಟಿ ರೂ. ಬಿಡುಗಡೆ ಮಾಡಿ

ಸಿಎಂ, ಡಿಸಿಎಂಗೆ ಎಂಎಲ್‌ಸಿ ದಿನೇಶ್ ಗೂಳಿಗೌಡ ಮನವಿ

ಕಳೆದ 7 ತಿಂಗಳಿಂದ ಹಾಲಿನ ಪ್ರೋತ್ಸಾಹ ಧನ ಬಾಕಿ ಉಳಿಸಿಕೊಂಡಿದ್ದ ಹಿಂದಿನ ಸರ್ಕಾರ



ಸಿದ್ದರಾಮಯ್ಯ



ಡಿ.ಕೆ. ಶಿವಕುಮಾರ್



ದಿನೇಶ್ ಗೂಳಿಗೌಡ

ಮಂಡ್ಯ, ಜೂ.7– ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ರೈತರಿಗೆ ಸುಮಾರು 669.59 ಕೋಟಿ ರೂ. ಹಾಲಿನ ಪ್ರೋತ್ಸಾಹ ಧನವು ಬಾಕಿ ಇದ್ದು, ಇದನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ.

ರಾಜ್ಯ ಸರ್ಕಾರ ಹೈನುಗಾರರಿಗೆ ಅನುಕೂಲವಾಗಲು ರೈತರಿಗೆ ಪ್ರತಿ ಲೀಟರ್ ಹಾಲಿಗೆ 5 ರೂ. ಪ್ರೋತ್ಸಾಹಧನ ನೀಡುತ್ತಾ ಬಂದಿದೆ. ಇದರಿಂದ ಹೈನುಗಾರರು ಉತ್ಪಾದನೆ ಮಾಡಿದ ಹಾಲಿಗೆ ಲಾಭದಾಯಕ ದರ ಸಿಕ್ಕಿದಂತಾಗುತ್ತದೆ. ಅಲ್ಲದೆ, ನೇರವಾಗಿ ರೈತರ ಖಾತೆಗಳಿಗೆ ಹಣ ಜಮಾ ಆಗುವುದರಿಂದ ಮೇವು, ಪಶು ಆಹಾರ ಕೊಳ್ಳಲು ಈ ಪ್ರೋತ್ಸಾಹಧನವು ಅನುಕೂಲವಾಗುತ್ತದೆ. ಆದರೆ, ಹಿಂದಿನ ಸರ್ಕಾರ ಕಳೆದ 7 ತಿಂಗಳುಗಳಿಂದ ಹಾಲಿನ ಪ್ರೋತ್ಸಾಹ ಧನ ಬಿಡುಗಡೆ ಮಾಡಿರುವುದಿಲ್ಲ. ಇದರಿಂದಾಗಿ ಹೈನುಗಾರರಿಗೆ ತೊಂದರೆಯಾಗುತ್ತಿದೆ ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಈಗ ಸುಮಾರು 669.59 ಕೋಟಿ ರೂ. ಪ್ರೋತ್ಸಾಹಧನವನ್ನು ಸರ್ಕಾರ ಹೈನುಗಾರರಿಗೆ ವಿತರಿಸಲು ಬಾಕಿ ಇದೆ. ಪ್ರತಿ ರೈತನಿಗೆ ಕನಿಷ್ಠ 5 ಸಾವಿರದಿಂದ 30 ಸಾವಿರವರೆಗೂ ಪ್ರೋತ್ಸಾಹಧನ ಬರುವುದು ಬಾಕಿ ಉಳಿದುಕೊಂಡಿದೆ. ಪ್ರತಿ ತಿಂಗಳು ಸರ್ಕಾರ ರಾಜ್ಯದ ಎಲ್ಲಾ ಹೈನುಗಾರರಿಗೆ ಒಟ್ಟು 109 ಕೋಟಿ ರೂ. ಹಾಲಿನ ಪ್ರೋತ್ಸಾಹಧನ ನೀಡಬೇಕಿದೆ.

ಸಾಮಾನ್ಯ ವರ್ಗದ ಹೈನುಗಾರರಿಗೆ 2022 ರ ನವೆಂಬರ್‌ನಲ್ಲಿ 109.90 ಕೋಟಿ ರೂ, ಡಿಸೆಂಬರ್–109.81 ಕೋಟಿ, 2023ರ ಜನವರಿಯಲ್ಲಿ 107.89 ಕೋಟಿ, ಫೆಬ್ರವರಿ–93.56, ಮಾರ್ಚ್–93.89 ಕೋಟಿ, ಏಪ್ರಿಲ್–93.67 ಕೋಟಿ ರೂ.ಗಳನ್ನು ನೀಡುವುದು ಬಾಕಿ ಇದೆ. ಎಸ್‌ಸಿ ವರ್ಗಕ್ಕೆ 2023ರ ಮಾರ್ಚ್‌ರಲ್ಲಿ 3.08 ಕೋಟಿ ರೂ, ಏಪ್ರಿಲ್–3.17 ಕೋಟಿ ರೂ. ಸಹಾಯ ಧನ ವಿತರಣೆ ಬಾಕಿ ಇದೆ. ಹಾಗೆಯೇ ಕಳೆದ ಹಿಂದಿನ ವರ್ಷಗಳ ಪೈಕಿ ಸಾಮಾನ್ಯ ವರ್ಗದವರಿಗೆ 2019–20 ನೇ ಸಾಲಿನಲ್ಲಿ 12.51 ಕೋಟಿ ರೂ, 2020–21 ನೇ ಸಾಲಿನಲ್ಲಿ 9.64 ಕೋಟಿ ರೂ. 2021–22 ನೇ ಸಾಲಿನಲ್ಲಿ–22.37 ಕೋಟಿ ರೂ. ಸೇರಿದಂತೆ ಒಟ್ಟಾರೆ ಕಳೆದ ಆರ್ಥಿಕ ವರ್ಷದಲ್ಲಿ 624.06 ಕೋಟಿ ರೂ ಹಾಗೂ ಹಿಂದಿನ ವರ್ಷಗಳ ಬಾಕಿ 45.53 ಕೋಟಿ ರೂ. ಸೇರಿ ಒಟ್ಟು 669.59 ಕೋಟಿ ರೂ.ನಷ್ಟು ಸರ್ಕಾರದಿಂದ ಹೈನುಗಾರರಿಗೆ ಸಂದಾಯವಾಗಬೇಕಿದೆ ಎಂದು ಅವರು ವಿವರಿಸಿದ್ದಾರೆ.

ಇದರಲ್ಲಿ ಮಂಡ್ಯ ಜಿಲ್ಲೆಗೆ ಒಟ್ಟು 72.34 ಕೋಟಿ ರೂ.ಗಳು ಹಾಲಿನ ಪ್ರೋತ್ಸಾಹ ಧನ ಬಾಕಿ ಇದೆ ಎಂದಿರುವ ಅವರು, ಪಶು ಆಹಾರ, ಮೇವಿನ ಬೆಲೆ ಏರಿಕೆಯಾಗಿದೆ. ಕೆಲವೆಡೆ ಗಂಟು ರೋಗ ಜಾನುವಾರುಗಳಿಗೆ ಬಾಧಿಸಿ, ಹಾಲಿನ ಇಳುವರಿ ಕೂಡ ಕಡಿಮೆಯಾಗಿದೆ. ಕೆಲವು ಜಾನುವಾರುಗಳು ಮೃತಪಟ್ಟಿವೆ. ಇದರಿಂದ ಹೈನುಗಾರರು ತೀರ ಸಂಕಷ್ಟದಲ್ಲಿದ್ದಾರೆ. ಇಂಥ ಸಂದರ್ಭದಲ್ಲಿ ಬಾಕಿ ಇರುವ ಪ್ರೋತ್ಸಾಹಧನವನ್ನು ಸರ್ಕಾರ ಬಿಡುಗಡೆ ಮಾಡಿದಲ್ಲಿ ಹೈನುಗಾರರಿಗೆ ನೆರವಾಗುವುದು. ಮಳೆಗಾಲದಲ್ಲಿ ಪಶು ಆಹಾರ ಖರೀದಿಸಿ ದಾಸ್ತಾನು ಮಾಡಲು, ಅಲ್ಲದೆ ಮಕ್ಕಳ ವಿದ್ಯಾಭ್ಯಾಸದ ಶುಲ್ಕ ಪಾವತಿಗೆ, ಅಥವಾ ದೈನಂದಿನ ಇತರ ಖರ್ಚುಗಳಿಗೆ ಅನುಕೂಲವಾಗಲಿದೆ. ರಾಜ್ಯದ ಹೈನುಗಾರರ ಹಿತ ದೃಷ್ಟಿಯಿಂದ ಈ ಪ್ರೋತ್ಸಹಧನವನ್ನು ಅತಿ ಶೀಘ್ರವಾಗಿ ಬಿಡುಗಡೆ ಮಾಡಬೇಕೆಂದು ರೈತ ಸಮೂಹದ ಪರವಾಗಿ ಶಾಸಕ ದಿನೇಶ್ ಗೂಳಿಗೌಡ ಅವರು ಮನವಿ ಮಾಡಿದ್ದಾರೆ.

ನಾಳೆ ಜನಾಗ್ರಹ ಸಮಾವೇಶ

ಮಂಡ್ಯ, ಜೂ.7– ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಸ್ವಾಭಿಮಾನಿ ನಾಯಕ ಪ್ರೊ.ಬಿ.ಕೃಷ್ಣಪ್ಪ ಅವರ 86ನೇ ಜನ್ಮದಿನೋತ್ಸವ ಮತ್ತು ಸಮತೆಯ ಸಾಮಾಜಿಕ ನ್ಯಾಯಕ್ಕಾಗಿ ಜೂ.9ರಂದು ಬೆಳಿಗ್ಗೆ 11ಕ್ಕೆ ನಗರದ ಗಾಂಧಿಭವನದಲ್ಲಿ ಜನಾಗ್ರಹ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ಕೆ.ಎಂ.ಶ್ರೀನಿವಾಸ್ ತಿಳಿಸಿದರು.

ಸಮಾವೇಶದಲ್ಲಿ ವಿವಿಧ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಿ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಅನಾಗರಿಕತೆಯ ಅಸ್ಪೃಶ್ಯತಾ ಆಚರಣೆ ಅಂತ್ಯವಾಗಬೇಕು. ನ್ಯಾ.ಎ.ಜೆ. ಸದಾಶಿವ ಆಯೋಗದ ವರದಿ ಕೇಂದ್ರಕ್ಕೆ ಶಿಫಾರಸು, ನ್ಯಾ.ನಾಗಮೋಹನದಾಸ್ ವರದಿಯಂತೆ ಪರಿಶಿಷ್ಟ ಜಾತಿ, ಜನಸಂಖ್ಯಾವಾರು ಮೀಸಲಾತಿ ಹೆಚ್ಚಳ, ರಾಷ್ಟ್ರೀಯ ಶಿಕ್ಷಣ ನೀತಿ ಕೈಬಿಡಬೇಕು. ಉಚಿತ ಶಿಕ್ಷಣ ಮತ್ತು ಏಕರೂಪ ಸಮಾನ ಶಿಕ್ಷಣ ನೀತಿ ರೂಪಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಬಗ್ಗೆ ಚರ್ಚಿಸಿ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು. ಗೋಷ್ಠಿಯಲ್ಲಿ ಮುಖಂಡರಾದ ಕುಮಾರ್, ಸೋಮಶೇಖರ್, ಆನಂದ್, ಸುರೇಶ್ ಇದ್ದರು.

ಸ್ಲಂ ನಿವಾಸಿಗಳಿಗೆ ಹಕ್ಕುಪತ್ರ ವಿತರಣೆಗೆ ಶಾಸಕ ರವಿಕುಮಾರ್ ಸೂಚನೆ



ಮಂಡ್ಯ, ಜೂ.7– ಸ್ಲಂ ಪ್ರದೇಶದ ವಾಸಿಗಳಿಗೆ ತೊಂದರೆಯಾಗದಂತೆ ಹಕ್ಕು ಪತ್ರ ವಿತರಿಸಲು ಕ್ರಮ ಕೈಗೊಳ್ಳಬೇಕೆಂದು ಶಾಸಕ ಪಿ.ರವಿಕುಮಾರ್ ಗಣಿಗ ಕೊಳಚೆ ನಿರ್ಮೂಲನಾ ಮಂಡಳಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬುಧವಾರ ನಗರದ ನಗರಸಭೆಯ ಧರಣಪ್ಪ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಆರ್‌ಟಿಓ ಸ್ಲಂನಲ್ಲಿ ಹೈಟೆನ್ಶನ್ ವಿದ್ಯುತ್ ಲೈನ್ ಹಾದು ಹೋಗಿರುವ ಕೆಳಗಡೆ ಸುಮಾರು 10 ಮನೆಗಳಿಗೆ ಹಕ್ಕುಪತ್ರ ನೀಡಲು ಬರುವುದಿಲ್ಲ ಎಂಬ ಕೊಳಚೆ ನಿರ್ಮೂಲನಾ ಮಂಡಳಿಯ ಅಧಿಕಾರಿಯ ಹೇಳಿಕೆಗೆ ಪ್ರತಿಕ್ರಿಯಿಸಿದ ಶಾಸಕರು, ಆರ್‌ಟಿಒ ಸ್ಲಂನಲ್ಲಿ 10 ಮನೆಗಳ ಮೇಲೆ ಹೈಟೆನ್ಷನ್ ಲೈನ್ ಹಾದು ಹೋಗಿದೆ ಎಂದು ನೆಪ ಹೇಳುವುದು ಸರಿಯಲ್ಲ, ಕೂಡಲೇ ಅಲ್ಲಿನ ಇತರರೆಲ್ಲ ಅರ್ಹರಿಗೂ ಹಕ್ಕು ಪತ್ರ ಒದಗಿಸಿ ಎಂದು ಸೂಚನೆ ನೀಡಿದ ಅವರು, ಹೈಟೆನ್ಷನ್ ಲೈನ್ ಹಾದುಹೋಗಿರುವ ಮನೆಗಳವರಿಗೆ ಬದಲಿ ವ್ಯವಸ್ಥೆ ಏನು ಮಾಡಬಹುದು ಎಂಬುದನ್ನು ಚರ್ಚಿಸೋಣ ಎಂದರು.

ಇನ್ನು ಮಿಮ್ಸ್ ಪಕ್ಕದ ತಮಿಳು ಕಾಲೋನಿಯಲ್ಲಿ 524 ಮನೆಗಳಿದ್ದು, ನ್ಯಾಯಾಲಯ ಅವುಗಳನ್ನು ತೆರವುಗೊಳಿಸುವಂತೆ ಆದೇಶಿಸಿದೆ. ಚಿಕ್ಕ ಮಂಡ್ಯ ಬಳಿ ನಿರ್ಮಿಸಲಾಗಿರುವ 500 ಮನೆಗಳು ವಾಸಕ್ಕೆ ಸಿದ್ಧಗೊಂಡಿದ್ದು, ಅಲ್ಲಿಗೆ ಸ್ಥಳಾಂತರಗೊಳ್ಳಲು ಈ ಸ್ಲಂ ನಿವಾಸಿಗಳು ನಿರಾಕರಿಸುತ್ತಿದ್ದಾರೆ. ಅವರು ಬದಲಿ ನಿವೇಶನ ಕೊಡಿ ಎಂದು ಒತ್ತಾಯಿಸುತ್ತಿದ್ದಾರೆ ಎಂದು ಶಾಸಕರ ಗಮನಕ್ಕೆ ತರಲಾಯಿತು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು ಇಷ್ಟೊಂದು ದೊಡ್ಡ ಮಟ್ಟದಲ್ಲಿರುವ ಸ್ಲಂ ನಿವಾಸಿಗಳಿಗೆ ಬದಲಿ ನಿವೇಶನ ಒದಗಿಸಿ ಕೊಡುವಷ್ಟು ಜಾಗ ಎಲ್ಲಿದೆ ಎಂದು ಆಯುಕ್ತರನ್ನು ಕೇಳಿದರು. 20x30 ಅಳತೆ ನಿವೇಶನ ಕೊಡಲೂ ಕೂಡ ಈಗ ಎಲ್ಲೂ ಸ್ಥಳವಿಲ್ಲ. ಹಾಗಾಗಿ ಈ ವಿಚಾರವನ್ನು ಮೇಲಧಿಕಾರಿಗಳೊಂದಿಗೆ ಚರ್ಚಿಸಿ ಬಗೆಹರಿಸಬೇಕಾಗಿದೆ. ಇದಕ್ಕಾಗಿ ನಿಮ್ಮ ಇಲಾಖೆ ಮಟ್ಟದಲ್ಲಿ ಏನು ಸಾಧ್ಯತೆ ಇದೆ ಎಂಬುದನ್ನು ಗಮನಕ್ಕೆ ತನ್ನಿ ಎಂದು ಶಾಸಕರು ಸಲಹೆ ನೀಡಿದರು.

ನಗರದಲ್ಲಿ ಸಂಚಾರ ಮತ್ತು ವಾಹನಗಳ ಪಾರ್ಕಿಂಗ್ ಸಮಸ್ಯೆ ಹೆಚ್ಚಾಗುತ್ತಿದೆ. ಪ್ರಮುಖ ರಸ್ತೆಗಳಾದ 100 ಅಡಿ ರಸ್ತೆ, ವಿವಿ ರಸ್ತೆ, ಪೇಟೆಬೀದಿ ಮತ್ತಿತರೆಡೆ ಅಡ್ಡಾದಿಡ್ಡಿ ಪಾರ್ಕಿಂಗ್ ಮಾಡುವುದರಿಂದ ಸಂಚಾರ ವ್ಯವಸ್ಥೆ ಹದಗೆಡುತ್ತಿದೆ. ಈ ಬಗ್ಗೆ ಪೊಲೀಸ್ ಹಾಗೂ ನಗರಸಭೆ ಜಂಟಿಯಾಗಿ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿದರು

ಅರಣ್ಯ ಇಲಾಖೆಯವರು ಒಣಗಿ ನಿಂತ ಮರದ ಕೊಂಬೆಗಳನ್ನು ತೆರವುಗೊಳಿಸಬೇಕು. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಅತಿ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ. ಈ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರೆಂಬ ಶಾಸಕರ ಪ್ರಶ್ನೆಗೆ ಉತ್ತರಿಸಿದ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಅಭಿಯಂತರರು ಅತಿ ವೇಗವೇ ಅಪಘಾತಕ್ಕೆ ಕಾರಣ ಎಂದರು.

ಸಭೆಯಲ್ಲಿ ನಗರಸಭೆ ಪೌರಾಯುಕ್ತ ಮಂಜುನಾಥ್, ಡಿವೈಎಸ್‌ಪಿ ಶಿವಮೂರ್ತಿ ಸೇರಿದಂತೆ 32ಕ್ಕೂ ಹೆಚ್ಚು ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ನೇಮಕಾತಿ ಅರ್ಜಿ ಆಹ್ವಾನ

ಮೈಸೂರು, ಜೂ.7– ರಾಜ್ಯ ಸರ್ಕಾರದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ವತಿಯಿಂದ, 2023–2024ನೇ ಸಾಲಿನ ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರಕ್ಕೆ ಪ್ರವೇಶಾತಿ ಆರಂಭವಾಗಿದೆ. ಮೈಸೂರಿನ ಸರ್ಕಾರಿ ಅಂಧ ಮಕ್ಕಳ ಪಾಠಶಾಲೆಯ ಆವರಣದಲ್ಲಿ ಡಿಪ್ಲೊಮೊ ಇನ್ ಎಜುಕೇಷನಲ್ (ಹೆಚ್.ಐ) ಹಾಗೂ ಡಿಪ್ಲೊಮೊ ಇನ್ ಸ್ಪೆಷಲ್ ಎಜುಕೇಷನ್ (ವಿ.ಐ) ತರಬೇತಿ ಕೇಂದ್ರ ತೆರೆಯಲಾಗಿದೆ. ಜೂನ್ 5ರಿಂದ ಅರ್ಜಿ ಸಲ್ಲಿಸಬಹುದಾಗಿದ್ದು, ಜೂನ್ 30 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ 0821–2959600 ಹಾಗೂ 9686762378 ನಂಬರ್‌ಗಳಿಗೆ ಸಂಪರ್ಕಿಸಬಹುದು.

ಉಚಿತ ಗ್ಯಾರಂಟಿ ಚುನಾವಣಾ ಗಿಮಿಕ್: ಅಧಿಕಾರ ಹಿಡಿಯಲು ಇದೊಂದು ಚೀಪ್ ಪಾಪ್ಯುಲಾರಿಟಿ

ಚಲುವರಾಯಸ್ವಾಮಿ ವಿಡಿಯೋ ವೈರಲ್



ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಐದು ಉಚಿತ ಭಾಗ್ಯಗಳನ್ನು ಅನುಷ್ಠಾನಕ್ಕೆ ತರಲು ಮುಂದಾಗಿದೆ. ಈ ಸಂಬಂಧ ಸಿದ್ದರಾಮಯ್ಯ ಕಾರ್ಯ ಮುಂದುವರಿಸಿದ್ದಾರೆ. ಇದೇ ವೇಳೆ ಸಿದ್ದರಾಮಯ್ಯ ಸಂಪುಟದ ಕೃಷಿ ಸಚಿವ ಚಲುವರಾಯಸ್ವಾಮಿ ಮಾತನಾಡಿರುವ ವಿಡಿಯೋವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಉಚಿತ ಭರವಸೆಗಳೆಲ್ಲ ಕೇವಲ ಚುನಾವಣಾ ಗಿಮಿಕ್ ಅಷ್ಟೆ ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿಯಲು ಇಂಥ ಚೀಪ್ ಪಾಪ್ಯುಲಾರಿಟಿ ಗಿಮಿಕ್‌ಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ.

ಮೊದಲಿಗೆ ಉಚಿತ ಯೋಜನೆಗಳನ್ನು ಘೋಷಿಸುವ ಬಗ್ಗೆ ದೇಶದಲ್ಲೆಲ್ಲ ಚರ್ಚೆಯಾಯಿತು. ನಾವು ಕೂಡ ಚರ್ಚೆ ಮಾಡಿದೆವು. ಇದು ಒಳ್ಳೆಯದಲ್ಲ ಎಂಬುದಾಗಿ. ಮುಂದೆ ಫ್ರೀ ಫ್ರೀ ಅಂತ ಹೋದರೆ ಇದು ಎಲ್ಲಿಗೆ ಹೋಗಿ ಮುಟ್ಟಬಹುದು ಎಂಬ ಬಗ್ಗೆ ಚರ್ಚಿಸಲಾಯಿತು.

ಈಗ ನಾವುಗಳೂ ಅದೇ ಲೈನ್‌ನಲ್ಲಿ ಹೊರಟಿದ್ದೇವೆ. ಎಲ್ಲೋ ಒಂದು ಕಡೆ ಚುನಾವಣೆ, ರಿಸಲ್ಟ್, ಸರ್ಕಾರ ಬಂದ್ರೆ ತಾನೇ ನಾವೇನಾದ್ರೂ ಮಾಡಲು ಸಾಧ್ಯವಾಗುವುದು ಅಧಿಕಾರ ಸಿಕ್ಕಿದರೆ ತಾನೇ ನಾವು ಕೆಲಸ ಮಾಡಲು ಸಾಧ್ಯವಾಗುವುದು ಅನ್ನುವ ದೃಷ್ಟಿ ಬಂದಾಗ ಆವತ್ತಿಗೆ ರಿಸಲ್ಟ್ ಅನಿವಾರ್ಯ ಆಗುತ್ತದೆ. ರಿಸಲ್ಟ್ ಬರಬೇಕು ಎಂದಾಗ ಈ ರೀತಿಯ ಚೀಪ್ ಪಾಪ್ಯುಲಾರಿಟಿ, ಇಲ್ಲದ್ದು ಬಲ್ಲದ್ದು ಎಲ್ಲ ಮಾಡ್ತೀವಿ.

ಬಟ್ ನಮ್ಮ ಮನಸ್ಸಿಗೆ ಇಷ್ಟ ಆಗ್ತದೋ, ಇಲ್ಲವೋ. ಸಿದ್ದರಾಮಯ್ಯನವರ ಮನಸಿಗೆ ಇಷ್ಟ ಆಗ್ತದೋ, ಇಲ್ಲವೋ. ಕೆಲವೊಂದನ್ನು ವಾಡಿಕೊಂಡು ಹೋಗಬೇಕಾಗುತ್ತದೆ. ಕೆಲವನ್ನು ಆಕ್ಸೆಪ್ಟ್ ಮಾಡಬೇಕಾಗುತ್ತದೆ ಎಂದು ಚೆಲುವರಾಯಸ್ವಾಮಿ ಹೇಳಿರುವುದು ವಿಡಿಯೋದಲ್ಲಿದೆ. ಈ ಸಂಬಂಧ ಎಲ್ಲೆಡೆ ಚರ್ಚೆಯಾಗುತ್ತಿದೆ, ಆದರೆ ಈ ಬಗ್ಗೆ ಸಿದ್ದರಾಮಯ್ಯ ಸಂಪುಟದ ಯಾವೊಬ್ಬ ಸಚಿವರು ಪ್ರತಿಕ್ರಿಯೆ ನೀಡಿಲ್ಲ.

ಸ್ಕರ್ಟ್ ಬದಲಿಗೆ, ಕರ್ನಾಟಕದ ವಿದ್ಯಾರ್ಥಿಗಳಿಗೆ ಸಮವಸ್ತ್ರವಾಗಿ ಚೂಡಿದಾರ್ ಇಲ್ಲವೇ ಪ್ಯಾಂಟ್‌ಗೆ ಮಕ್ಕಳ ರಕ್ಷಣಾ ಆಯೋಗ ಶಿಫಾರಸ್ಸು



ಬೆಂಗಳೂರು: ಬಾಲಕಿಯರ ಶಾಲಾ ಸಮವಸ್ತ್ರವನ್ನು ಸ್ಕರ್ಟ್‌ನಿಂದ ಚೂಡಿದಾರ್ ಅಥವಾ ಪ್ಯಾಂಟ್‌ಗೆ ಬದಲಾಯಿಸುವಂತೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಕೆಎಸ್‌ಸಿಪಿಸಿಆರ್) ರಾಜ್ಯ ಶಿಕ್ಷಣ ಇಲಾಖೆಗೆ ಶಿಫಾರಸು ಮಾಡಿದೆ.

ಕಲಬುರಗಿಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಸ್ಕರ್ಟ್ ಧರಿಸುವ ಹುಡುಗಿಯರು ಎದುರಿಸುತ್ತಿರುವ ಅನಾನುಕೂಲತೆಗಳ ಕುರಿತು ಆಯೋಗಕ್ಕೆ ಪತ್ರ ಬರೆದ ನಂತರ ಶಿಫಾರಸು ಮಾಡಲಾಗಿದೆ.

ಮೇ 15ರಂದು ಬರೆದ ಪತ್ರದಲ್ಲಿ ಹುಡುಗಿಯರು ನಾಚಿಕೆ ಸ್ವಭಾವದವರಾಗಿದ್ದು ಪ್ರಯಾಣಿಸುವಾಗ, ಜನನಿಬಿಡ ಪ್ರದೇಶಗಳಲ್ಲಿ ತಿರುಗಾಡುವಾಗ, ಸೈಕ್ಲಿಂಗ್ ಅಥವಾ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಾಗ ಸ್ಕರ್ಟ್ ಧರಿಸುವುದು ಒಂದು ಅಡಚಣೆಯಾಗಿದೆ. ಇನ್ನು ಪತ್ರದಲ್ಲಿ ಲೈಂಗಿಕ ಕಿರುಕುಳದ ವರದಿಗಳಿವೆ ಎಂದು ಸೇರಿಸಲಾಗಿದೆ. ಹುಡುಗಿಯರು ಸಾಮಾನ್ಯವಾಗಿ ಸ್ಕರ್ಟ್‌ಗಳನ್ನು ಧರಿಸುವುದರಿಂದ ಮುಜುಗರ ವ್ಯಕ್ತಪಡಿಸುತ್ತಾರೆ ಎಂದು ಉಲ್ಲೇಖಿಸಿ, ಅವರ ಸಮವಸ್ತ್ರವನ್ನು ಚೂಡಿದಾರ್ ಅಥವಾ ಪ್ಯಾಂಟ್‌ಗೆ ಬದಲಾಯಿಸುವಂತೆ ಸೂಚಿಸಿದೆ.

ಮೇ 17ರಂದು ಕೆಎಸ್‌ಪಿಸಿಆರ್‌ಸಿ ಅಧ್ಯಕ್ಷರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರಿಗೆ ಪತ್ರ ಬರೆದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಯ ಈ ಶಿಫಾರಸನ್ನು ಎತ್ತಿ ತೋರಿಸಿದ್ದಾರೆ.

ಈ ಬಗ್ಗೆ ಸಾರ್ವಜನಿಕ ಅಭಿಪ್ರಾಯವೂ ವ್ಯಕ್ತವಾಗಿದ್ದು, ಇಲಾಖೆ ನಿಯಮಾನುಸಾರ ಸಮವಸ್ತ್ರ ವಿನ್ಯಾಸ ಬದಲಾವಣೆಗೆ ಅವಕಾಶವಿದ್ದಲ್ಲಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಅನುಕೂಲವಾಗುವಂತೆ ಹಾಗೂ ಅವರ ಸುರಕ್ಷತೆಗೆ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಇದು ನಾವು ಮಾಡಿರುವ ಶಿಫಾರಸ್ಸು, ಇದನ್ನು ಶಿಕ್ಷಣ ಇಲಾಖೆಯೇ ನಿರ್ಧರಿಸಬೇಕು. ಅಧಿಕಾರಿಗಳಿಂದ ಶಿಫಾರಸ್ಸುಗಳು ಬಂದಿರುವುದು ಮಾತ್ರವಲ್ಲ, ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳೊಂದಿಗೆ ಸಂವಾದ ನಡೆಸಿದ್ದೇವೆ. ಆಟವಾಡುವಾಗ ಸ್ಕರ್ಟ್ ಧರಿಸಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇನ್ನು ಶಾಲೆಗೆ ಸೈಕಲ್‌ನಲ್ಲಿ ಹೋಗುವಾಗ ಸಮವಸ್ತ್ರ–ಚೂಡಿದಾರ್ ಅಥವಾ ಪ್ಯಾಂಟ್–ಬದಲಾವಣೆಯು ಅವರ ಮನಸ್ಸಿನಿಂದ ಈ ಚಿಂತೆಯನ್ನು ದೂರ ಮಾಡುತ್ತದೆ ಎಂದು ಕೆಎಸ್‌ಪಿಸಿಆರ್‌ಸಿ ಅಧ್ಯಕ್ಷ ಕೆ. ನಾಗಣ್ಣ ಗೌಡ ಹೇಳಿದರು.

ಕ್ಯಾಂಪ್‌ನಲ್ಲಿ ಊಟ ಸೇವಿಸಿ 35 ಸೈನಿಕರು ಅಸ್ವಸ್ಥ

ಆರೋಗ್ಯ ವಿಚಾರಿಸಿದ ಸಕಲೇಶಪುರ ಶಾಸಕ ಮಂಜು

ಹಾಸನ, ಜೂ.7– ಮಧ್ಯಾಹ್ನದ ಊಟ ಸೇವಿಸಿದ ಬಳಿಕ 35 ಸೈನಿಕರು ಅಸ್ವಸ್ಥಗೊಂಡಿದ್ದು ಅವರನ್ನು ಸಕಲೇಶಪುರ ಕ್ರಾಫರ್ಡ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಕಲೇಶಪುರ ತಾಲೂಕಿನ ಕುಡುಗರಹಳ್ಳಿಯ ಕ್ಯಾಂಪ್‌ಗೆ ಸೈನಿಕರು ಚಾಲನಾ ತರಬೇತಿಗೆ ಬಂದಿದ್ದರು. ಮಧ್ಯಾಹ್ನ ಕ್ಯಾಂಪ್‌ನಲ್ಲೇ ತಯಾರಿಸಿದ್ದ ಆಹಾರ ಸೇವಿಸಿದ ಬಳಿಕ 35 ಸೈನಿಕರು ಅಸ್ವಸ್ಥಗೊಂಡಿದ್ದಾರೆ. ಹೀಗಾಗಿ ಅವರನ್ನು ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು, ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ. ಅಸ್ವಸ್ಥರಾಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೈನಿಕರನ್ನು ಭೇಟಿಯಾದ ಶಾಸಕ ಸಿಮೆಂಟ್ ಮಂಜು ಆರೋಗ್ಯ ವಿಚಾರಿಸಿದ್ದು ಉತ್ತಮ ಚಿಕಿತ್ಸೆ ನೀಡುವಂತೆ ಸೂಚಿಸಿದ್ದಾರೆ.

4ಜಿ, 5ಜಿ ತರಂಗಾಂತರ ಹಂಚಿಕೆಗಾಗಿ ಬಿಎಸ್‌ಎನ್‌ಎಲ್‌ಗೆ 89,047 ಕೋಟಿ ರೂ. ಪ್ಯಾಕೇಜ್‌ಗೆ ಕೇಂದ್ರ ಸಂಪುಟ ಅಸ್ತು

ನವದೆಹಲಿ: ಒಟ್ಟು 89,047 ಕೋಟಿ ರೂ.ಗಳ ಬಿಎಸ್‌ಎನ್‌ಎಲ್‌ನ ಮೂರನೇ ಪುನರುಜ್ಜೀವನ ಪ್ಯಾಕೇಜ್‌ಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಈ ಪ್ಯಾಕೇಜ್ ಈಕ್ವಿಟಿ ಇನ್ಫ್ಯೂಷನ್ ಮೂಲಕ BSNLಗೆ 4ಜಿ ಮತ್ತು 5ಜಿ ಸ್ಪೆಕ್ಟ್ರಮ್ ಹಂಚಿಕೆಯನ್ನು ಒಳಗೊಂಡಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಇಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ BSNLಗೆ ಒಟ್ಟು 89,047 ಕೋಟಿ ರೂಪಾಯಿಗಳ ಮೂರನೇ ಪುನರುಜ್ಜೀವನ ಪ್ಯಾಕೇಜ್ ಅನುಮತಿ ನೀಡಿದೆ ಎಂದು ಪ್ರಕಟಣೆ ಹೇಳಿದೆ. ಅಲ್ಲದೆ, BSNLನ ಅಧಿಕೃತ ಬಂಡವಾಳವನ್ನು 1,50,000 ಕೋಟಿಯಿಂದ 2,10,000 ಕೋಟಿಗೆ ಹೆಚ್ಚಿಸಲಾಗುವುದು.

ಇಂದು ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ, ಪ್ರಶಸ್ತಿ ಪ್ರದಾನ, ಗ್ರಂಥ ಲೋಕಾರ್ಪಣೆ



ಮೈಸೂರು,ಜೂ.7(ಪಿಎಂ)– ಬ್ರಹ್ಮ ವಿದ್ಯಾ ಸಂಸ್ಥೆ ಮತ್ತು ರಾಷ್ಟ್ರೀಯ ಅಂತಾರಾಷ್ಟ್ರೀಯ ಕಲಾಸಂಸ್ಥೆಗಳ ಸಹಯೋಗದೊಂದಿಗೆ ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ, ಪ್ರಶಸ್ತಿ ಪ್ರದಾನ, ಗ್ರಂಥ ಲೋಕಾರ್ಪಣೆ ಒಳಗೊಂಡ ಸಂಗೀತೋತ್ಸವವನ್ನು ಜೂ.8 ಮತ್ತು 9ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಚಾಲಕ ಡಾ.ರಾ.ಸ.ನಂದಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಕಾರ್ಯಕ್ರಮ ನಡೆಯಲಿದೆ. ಜೂ.8ರಂದು ಸಂಜೆ 7ಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಸಮಾರಂಭಕ್ಕೆ ಚಾಲನೆ ನೀಡಲಿದ್ದಾರೆ. ಅಂತಾರಾಷ್ಟ್ರೀಯ ಖ್ಯಾತಿಯ ವೀಣಾ ವಿದ್ವಾಂಸ ಡಾ.ರಾ.ವಿಶ್ವೇಶ್ವರನ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಇದೇ ವೇಳೆ ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರಿಗೆ 'ಸಾಹಿತ್ಯಸೂರೀ ಪ್ರಶಸ್ತಿ', ಇಟಲಿಯ ಭಾರತೀಯ ಶಾಸ್ತ್ರಜ್ಞ ಡಾ.ಜಿಯಾನ್ ಜೋಸೆಫ್ ಅವರಿಗೆ 'ಶಾಸ್ತ್ರಸೂರೀ ಪ್ರಶಸ್ತಿ' ಹಾಗೂ ವಿದ್ವಾನ್ ಹೆಚ್.ಕೆ.ನರಸಿಂಹಮೂರ್ತಿ (ಕರ್ನಾಟಕ ಸಂಗೀತ), ವಿದ್ವಾನ್ ಮಧುಕರಂ ಪ್ರಶಾಂತ್ ಅಯ್ಯಂಗಾರ್ (ವೀಣಾವಾದಕ), ವಿದ್ವಾನ್ ಶೃಂಗೇರಿ ಹೆಚ್.ಎಸ್.ನಾಗರಾಜ್ (ಕರ್ನಾಟಕ ಸಂಗೀತ) ಅವರಿಗೆ 'ರಾ.ಸತ್ಯನಾರಾಯಣ ಸಂಸ್ಮರಣ ಪ್ರಶಸ್ತಿ' ಪ್ರದಾನ ಮಾಡಲಾಗುವುದು ಎಂದು ಹೇಳಿದರು. ಸಂಗೀತ ವಿದ್ವಾನ್ ರಾ.ವಿಶ್ವೇಶ್ವರನ್ ಅವರ 'ಶ್ರೀ ಕಮಲಾಂಬಾ ಜಯತಿ (ವ್ಯಾಖ್ಯಾನ ಮತ್ತು ಸ್ವರಲಿಪಿ)' ಮತ್ತು ಸಂಗೀತ ವಿದುಷಿ ಕಾಂಚನ ರೋಹಿಣಿ ಸುಬ್ಬರತ್ನಂ ಅವರ 'ಆರೋಹಿಣೀ (ಸಂಗೀತ ನಾಟ್ಯ ಲೇಖನ ಸಂಕಲನ)' ಎಂಬ ಗ್ರಂಥಗಳನ್ನು ಬಿಡುಗಡೆ ಮಾಡಲಾಗುವುದು. ಜೂ.8ರಂದು ಸಂಜೆ 5.30ಕ್ಕೆ ವೀಣಾ ವಾದನ ಕಛೇರಿ ಹಾಗೂ ಜೂ.9ರಂದು ಸಂಜೆ 6ಕ್ಕೆ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದು ವಿವರಿಸಿದರು. ಗಾಯಕ ಶ್ರೀಹರ್ಷ, ಕಾರ್ಯಕ್ರಮದ ಸಂಚಾಲಕರಾದ ಡಾ.ಎಸ್.ಕಾರ್ತಿಕ್, ಎಂ.ಎಸ್.ಕೌಸ್ತುಬ್ ಗೋಷ್ಠಿಯಲ್ಲಿದ್ದರು.

ಹಿರಿಯ ವಿಮರ್ಶಕ ಪ್ರೊ.ಜಿ.ಹೆಚ್.ನಾಯಕರಿಗೆ ಭಾವಪೂರ್ಣ ನುಡಿ ನಮನ



ಮೈಸೂರು,ಜೂ.7(ಪಿಎಂ)– ಇತ್ತೀಚೆಗೆ ನಿಧನ ಹೊಂದಿದ ಹಿರಿಯ ವಿಮರ್ಶಕ ಪ್ರೊ.ಜಿ.ಹೆಚ್.ನಾಯಕ ಅವರಿಗೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ವತಿಯಿಂದ ಭಾವಪೂರ್ಣ ನುಡಿ ನಮನ ಸಲ್ಲಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರೊ.ಜಿ.ಹೆಚ್.ನಾಯಕ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಬಳಿಕ ನುಡಿ ನಮನ ಸಲ್ಲಿಸಲಾಯಿತು. ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಮಾತನಾಡಿ, ಜಿ.ಎಚ್.ನಾಯಕ ಅವರು ಎಂದೂ ತಮ್ಮ ಬದುಕಿನಲ್ಲಿ ವೈಯಕ್ತಿಕ ಲಾಭ-ನಷ್ಟದ ಬಗ್ಗೆ ಲೆಕ್ಕಾಚಾರ ಹಾಕಿದವರಲ್ಲ. ಒಂದು ವೇಳೆ ಅವರು ವಿಶ್ವವಿದ್ಯಾನಿಲಯದಲ್ಲಿ ಅಂದು ಸ್ಥಾನಮಾನ ಗಳಿಸಲು ನಡೆಯುತ್ತಿದ್ದ ರಾಜಕಾರಣದೊಂದಿಗೆ ರಾಜಿ ಮಾಡಿಕೊಂಡಿದ್ದರೆ ಬಹಳ ಉನ್ನತ ಸ್ಥಾನ ಅಲಂಕರಿಸಬಹುದಿತ್ತು. ಆದರೆ ಅವರು ಆ ರೀತಿ ಮಾಡಲಿಲ್ಲ ಎಂದು ಹೇಳಿದರು.

ಅವರದು ಶಿಸ್ತುಬದ್ಧ ಜೀವನವಾಗಿತ್ತು. ಕನ್ನಡ ಸಾಹಿತ್ಯದಷ್ಟೇ ಇಂಗ್ಲಿಷ್ ಸಾಹಿತ್ಯದ ತಳಸ್ಪರ್ಶಿ ಅಧ್ಯಯನ ಮಾಡಿದ್ದರು. ಜಾತಿ ತಾರತಮ್ಯ ಅವರಲ್ಲಿ ಇರಲೇ ಇಲ್ಲ. ಹೀಗಾಗಿ ವಿವಿಯ ವಿದ್ಯಾರ್ಥಿಗಳಿಗೆ ಎಷ್ಟು ಅಂಕ ಕೊಡಬೇಕೋ ಅಷ್ಟನ್ನೇ ನೀಡುತ್ತಿದ್ದರು. ಅವರಿಗೆ ಸಮತೋಲನದ ದೃಷ್ಟಿಕೋನ ಇತ್ತು. ಅವರು ಅನೇಕ ಕನ್ನಡಪರ ಚಳವಳಿಗಳಲ್ಲೂ ಪಾಲ್ಗೊಂಡಿದ್ದು, ಗೋಕಾಕ್ ಚಳವಳಿ ವೇಳೆ ಜೈಲು ಶಿಕ್ಷೆ ಅನುಭವಿಸಿದ್ದರು ಎಂದು ಸ್ಮರಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷರಾದ ಡಾ.ವೈ.ಡಿ.ರಾಜಣ್ಣ ಎಂ.ಚಂದ್ರಶೇಖರ್, ಚಿಂತಕ ಪ್ರೊ.ಕಾಳೇಗೌಡ ನಾಗವಾರ, ರಂಗಕರ್ಮಿಗಳಾದ ಜನಾರ್ಧನ್ (ಜನ್ನಿ), ರಾಜಶೇಖರ ಕದಂಬ, ಮುಖಂಡ ಜಿ.ಪ್ರಕಾಶ್ ಮತ್ತಿತರರು ಹಾಜರಿದ್ದರು.

ಕಠಿಣ ಪರಿಶ್ರಮದೊಂದಿಗೆ ಓದಿದರೆ ಉತ್ತಮ ಸಾಧನೆ ಸಾಧ್ಯ

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಸಲಹೆ



ಮೈಸೂರು, ಜೂ.7(ಎಸ್‌ಬಿಡಿ)– ಬಹುಬೇಗ ಸರ್ಕಾರಿ ಉದ್ಯೋಗ ಪಡೆಯಬೇಕೆಂಬ ಆತುರತೆ ಬಿಟ್ಟು, ಕಠಿಣ ಪರಿಶ್ರಮದೊಂದಿಗೆ ಅಧ್ಯಯನ ಮಾಡಿದರೆ ಉತ್ತಮ ಸಾಧನೆ ಸಾಧ್ಯ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ವಿವಿಧ ಪರೀಕ್ಷಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಹಾಗೂ ಪ.ಪೂ.ಕಾಲೇಜು ಆವರಣದ ಜ್ಞಾನಬುತ್ತಿ ಸಂಸ್ಥೆಯಲ್ಲಿ ಎಫ್‌ಡಿಎ, ಎಸ್‌ಡಿಎ ಹಾಗೂ ಪಿಸಿ ನೇಮಕಾತಿ ಪರೀಕ್ಷಾರ್ಥಿಗಳಿಗೆ ಆಯೋಜಿಸಿರುವ ಉಚಿತ ತರಬೇತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ಪರ್ಧಾತ್ಮಕ ಪರೀಕ್ಷೆಗೆ ಅಧ್ಯಯನ ನಡೆಸುತ್ತಿರುವ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ಎದೆಗುಂದಬಾರದು. ಬಹುಬೇಗ ಉದ್ಯೋಗ ಪಡೆಯಬೇಕೆಂಬ ಆಕಾಂಕ್ಷೆಯೊಂದಿಗೆ ಪರೀಕ್ಷೆ ಬರೆದು ಅದರಲ್ಲಿ ವಿಫಲವಾದ ಮಾತ್ರಕ್ಕೆ ಅಧ್ಯಯನದಿಂದ ವಿಮುಖರಾಗಬಾರದು. ಖಂಡಿತವಾಗಿ ಯಾವುದಾದರೂ ಉದ್ಯೋಗ ಪಡೆದೇ ಪಡೆಯುತ್ತೇನೆಂಬ ವಿಶ್ವಾಸದೊಂದಿಗೆ ಛಲದಿಂದ ಓದು ಮುಂದುವರೆಸಿದರೆ ಯಶಸ್ಸು ನಿಮ್ಮದಾಗುತ್ತದೆ ಎಂದು ಸಲಹೆ ನೀಡಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿಯಾಗಲು ಪರಿಶ್ರಮ ಹೊರತು ಯಾವುದೇ ಅಡ್ಡದಾರಿಗಳಿಲ್ಲ. ಗೈಡುಗಳನ್ನು ಹೆಚ್ಚಾಗಿ ಅವಲಂಬಿಸದೆ ಪಠ್ಯಪುಸ್ತಕಗಳ ಅಧ್ಯಯನಕ್ಕೆ ಹೆಚ್ಚು ಆದ್ಯತೆ ನೀಡಿ. ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಿ ಅಭ್ಯಾಸ ಮಾಡಿ. ಕನ್ನಡ ಲೇಖಕರ ವಿವಿಧ ಪ್ರಕಾರಗಳ ಉತ್ತಮ ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಿ, ಇದರಿಂದ ನಿಮ್ಮ ಮನಸ್ಸು ಉಲ್ಲಸಿತವಾಗುತ್ತದೆ. ಪರೀಕ್ಷೆ ತಯಾರಿ ಬಗ್ಗೆ ತಿಳಿಯಲು ಆರಂಭದಲ್ಲಿ ತರಬೇತಿ ಶಿಬಿರ ಸಹಕಾರಿಯಾಗುತ್ತದೆ. ನಂತರದಲ್ಲಿ ಸ್ವತಃ ಅಧ್ಯಯನ ನಡೆಸಬಹುದು ಎಂದು ತಿಳಿಸಿದರು. ಯುವ ಸಮುದಾಯವನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳಿಸುವ ಉದ್ದೇಶದಿಂದ ಯಾವುದೇ ಫಲಾಪೇಕ್ಷೆಯಿಲ್ಲದೆ ಹಣ ಸಂಪಾದಿಸುವ ಯೋಚನೆಯನ್ನೂ ಮಾಡದೆ 35 ವರ್ಷಗಳಿಂದ ಉಚಿತ ತರಬೇತಿ ನೀಡುತ್ತಾ ಬಂದಿರುವ ಜ್ಞಾನಬುತ್ತಿ ಸಂಸ್ಥೆಯ ಸೇವೆ ಸ್ಮರಣೀಯ. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣಗೌಡರ ನಿಸ್ವಾರ್ಥ ಸೇವೆಯನ್ನೂ ಸಮಾಜ ತುಂಬು ಹೃದಯದಿಂದ ನೆನೆಯುತ್ತದೆ ಎಂದು ಇದೇ ವೇಳೆ ಬಣ್ಣಿಸಿದರು.

ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹೆಚ್.ಬಾಲಕೃಷ್ಣ, ಜೈನಹಳ್ಳಿ ಸತ್ಯನಾರಾಯಣಗೌಡ, ಡಾ.ನಾಗಚಾರಿ, ಡಾ.ಉಮೇಶ್ ಬೇವಿನಹಳ್ಳಿ, ಡಾ.ಹೇಮಚಂದ್ರ, ಡಾ.ಕೃಷ್ಣಕುಮಾರ್, ಕಿರಣ್ ಕೌಶಿಕ್, ಉಮಾ ನಾಗೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಸ್ವಯಂ ಸೇವಾ ಶ್ರೇಷ್ಠತೆ ಮೆರೆದವರಿಗೆ ಎನ್‌ಎಸ್‌ಎಸ್ ಪ್ರಶಸ್ತಿ ಪ್ರದಾನ

ಸಂದರ್ಭಾನುಸಾರ ಸೇವಾ ನಿರತ ಎನ್‌ಎಸ್‌ಎಸ್ ಕಾರ್ಯಕರ್ತರ ಶ್ಲಾಘಿಸಿದ ಎನ್‌ಎಸ್‌ಎಸ್ ಕೋಶದ ರಾಜ್ಯ ಅಧಿಕಾರಿ ಪ್ರತಾಪ್ ಲಿಂಗಯ್ಯ



ಮೈಸೂರು, ಜೂ.7(ಎಂಟಿವೈ)– ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಕೋವಿಡ್ ಸಂದರ್ಭದಲ್ಲಿ ರೋಗಿಗಳಿಗೆ ನೆರವಾಗುವುದರೊಂದಿಗೆ ಲಸಿಕೆ ಹಾಕುವ ಅಭಿಯಾನ, ಚುನಾವಣಾ ಕರ್ತವ್ಯ ಸೇರಿದಂತೆ ಸರ್ಕಾರದ ಹಲವು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಶ್ಲಾಘನೀಯ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಎನ್‌ಎಸ್‌ಎಸ್ ಕೋಶದ ರಾಜ್ಯ ಅಧಿಕಾರಿ ಪ್ರತಾಪ್ ಲಿಂಗಯ್ಯ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ಭವನದಲ್ಲಿ ಬುಧವಾರ ನಡೆದ 2021-22ನೇ ಸಾಲಿನ ಎನ್‌ಎಸ್‌ಎಸ್ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ವರ್ಷಗಳಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳ ಸೇವೆ ವಿಸ್ತಾರಗೊಳ್ಳುತ್ತಿದೆ. ಈ ಹಿಂದೆ ಸೇವಾ ಶಿಬಿರಗಳಲ್ಲಿ ಪಾಲ್ಗೊಳ್ಳುತ್ತಿದ್ದ ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಇದೀಗ ಸರ್ಕಾರದ ವಿವಿಧ ಕಾರ್ಯಕ್ರಮ ಹಾಗೂ ಸರ್ವೆಗಳಲ್ಲೂ ತೊಡಗಿಸಿಕೊಳ್ಳುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಮನೆಯಿಂದ ಹೊರಗೆ ಬರಲು ಜನ ಭಯ ಪಡುವಂತಹ ಸಂದರ್ಭದಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ತಮ್ಮಲ್ಲಿರುವ ಸೇವಾ ಬದ್ಧತೆಯನ್ನು ಪ್ರದರ್ಶಿಸಿದ್ದಾರೆ. ಅಲ್ಲದೆ, ಕೋವಿಡ್ ಲಸಿಕೆ ಹಾಕುವ ಅಭಿಯಾನದಲ್ಲೂ ಪಾಲ್ಗೊಂಡಿದ್ದರು.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲೂ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಶ್ರಮಿಸಿದ್ದಾರೆ. ಚುನಾವಣೆ ಸಂದರ್ಭದಲ್ಲಿಯೂ ಹಲವಾರು ಮತಗಟ್ಟೆಗಳಲ್ಲಿ ಹಿರಿಯ ನಾಗರಿಕರು, ವಿಶೇಷಚೇತನರನ್ನು ಕರೆತಂದು ಮತ ಹಾಕಿಸುವುದು, ಮತ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ವಿಶೇಷ ಶಿಬಿರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಜೊತೆಗೆ ಕೇಂದ್ರ ಯುವ ನಿಧಿ ಕಾರ್ಯಕ್ರಮದಲ್ಲಿ ಸಮೀಕ್ಷಾ ಕಾರ್ಯದಲ್ಲೂ ಇವರನ್ನು ಬಳಕೆ ಮಾಡಿಕೊಳ್ಳಲಾಗಿದೆ. ಆಧಾರ್ ಕಾರ್ಡ್, ಬ್ಯಾಂಕ್ ಖಾತೆ, ಪಡಿತರ ಕಾರ್ಡ್ ಸರ್ವೆ ಕಾರ್ಯ ಮಾಡುವುದಕ್ಕೂ ಎನ್‌ಎಸ್‌ಎಸ್ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಗಿದೆ ಎಂದರು.

ಪ್ರಶಸ್ತಿ ಪಡೆದವರ ಜವಾಬ್ದಾರಿ ಹೆಚ್ಚುತ್ತದೆ. ಯಾವುದೇ ಕ್ಷೇತ್ರವಾದರೂ ಸರಿ ಸಾಧನೆ ಮಾಡುವತ್ತ ಗಮನ ಕೇಂದ್ರೀಕರಿಸಬೇಕು. ಆಗ ಮಾತ್ರ ಪ್ರಶಸ್ತಿಗಳು ತಾನಾಗಿಯೆ ಲಭಿಸುತ್ತದೆ. ಇದರಿಂದ ಮುಂದಿನ ಜೀವನದ ಹಾದಿ ಸುಗಮವಾಗುತ್ತದೆ. ಎನ್‌ಎಸ್‌ಎಸ್ ಶಿಸ್ತುಬದ್ಧ ಜೀವನ ಕಲಿಸುತ್ತದೆ ಎಂದರು.

ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಮಾತನಾಡಿ, ರಾಜ್ಯದಲ್ಲಿ 1969ರಲ್ಲಿ 11 ಕಾಲೇಜಲ್ಲಿ 1100 ಸ್ವಯಂಸೇವಕರಿಂದ ಆರಂಭಗೊಂಡ ಎನ್‌ಎಸ್‌ಎಸ್ ಇದೀಗ ಬೃಹದಾಕಾರವಾಗಿ ಬೆಳೆಯುತ್ತಿದೆ. ಆರಂಭದಿಂದಲೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎನ್‌ಎಸ್‌ಎಸ್ ಘಟಕ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ 19,200 ಸ್ವಯಂ ಸೇವಕರು ಹೆಸರು ನೋಂದಾಯಿಸಿದ್ದಾರೆ ಎಂದರು.

ಪ್ರಶಸ್ತಿ ಪ್ರದಾನ: 2021-22ನೇ ಸಾಲಿನಲ್ಲಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿದ ಎನ್‌ಎಸ್‌ಎಸ್ ವಿದ್ಯಾರ್ಥಿಗಳು, ಕಾಲೇಜು ಹಾಗೂ ಎನ್‌ಎಸ್‌ಎಸ್ ಅಧಿಕಾರಿಗಳಿಗೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಯಿತು. ಮಂಡ್ಯ ಜಿಲ್ಲೆಯ ಮದ್ದೂರು ಮಹಿಳಾ ಸರ್ಕಾರಿ ಕಾಲೇಜು, ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜಿಗೆ ಉತ್ತಮ ಘಟಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಂಡ್ಯ ಜಿಲ್ಲೆಯ ಮದ್ದೂರು ಮಹಿಳಾ ಸರ್ಕಾರಿ ಕಾಲೇಜಿನ ಡಿ. ನರೇಶ್‌ಬಾಬು, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜಿನ ಡಾ.ಕೆ.ಇ. ಗೋವಿಂದೇಗೌಡ ಅವರಿಗೆ ಉತ್ತಮ ಕಾರ್ಯಕ್ರಮ ಅಧಿಕಾರಿ ಪ್ರಶಸ್ತಿ, ಹುಣಸೂರು ತಾಲೂಕಿನ ಸಾಧನಾಪುರದ ರತ್ನಾಪುರಿ ವಿಎಸ್‌ಎಸ್ ಪ್ರಥಮ ದರ್ಜೆ ಕಾಲೇಜಿನ ಪ್ರಮೋದ್, ಕುವೆಂಪುನಗರ ಪ್ರಥಮ ದರ್ಜೆ ಕಾಲೇಜಿನ ಶ್ರೀಕಂಠಮೂರ್ತಿ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಡಿ.ಪಿ.ಸುಶ್ಮಿತ, ಹಾಸನ ಮಹಿಳಾ ಕಾಲೇಜಿನ ಎ.ತನುಶ್ರೀ, ಎ.ವಿ. ಕಾಂತಮ್ಮ ಉತ್ತಮ ಸ್ವಯಂ ಸೇವಕ, ಸೇವಕಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರಿನ ಗಂಗೋತ್ರಿ ಬಡಾವಣೆಯ ಜ್ಞಾನದೀಪ ಪ್ರಥಮ ದರ್ಜೆ ಕಾಲೇಜಿನ ಸಿ.ಜೆ. ಪ್ರಜ್ವಲ್, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ಜೆ. ದಕ್ಷತ್ ಉ.ಕಾ. ಸುಬ್ಬರಾಯಚಾರ್ ಸ್ಮರಣಾರ್ಥ ಉತ್ತಮ ಸ್ವಯಂಸೇವಕ ಪ್ರಶಸ್ತಿ ಪಡೆದರು. ಮಂಡ್ಯದ ಸರ್ಕಾರಿ ಮಹಿಳಾ ಕಾಲೇಜಿನ ಡಿ. ಶಾರದ ಅವರ ಅಕಾಲಿಕ ಮರಣದಿಂದಾಗಿ ಅವರ ತಂದೆ ಹಾಗೂ ಹುಣಸೂರಿನ ಡಿ.ದೇವರಾಜ ಅರಸು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸುಮೋದಿನಿ ಉತ್ತಮ ಸಮಾಜ ಸೇವಕಿ ಪ್ರಶಸ್ತಿ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಬಿ. ಚಂದ್ರಶೇಖರ, ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ. ಸುರೇಶ ಹಾಗೂ ಇತರರು ಉಪಸ್ಥಿತರಿದ್ದರು.

ಮೈಸೂರಿನಲ್ಲಿ ರಫ್ತುದಾರರ ಪ್ರೋತ್ಸಾಹ ಅಭಿಯಾನ ಆರಂಭ



ಮೈಸೂರು, ಜೂ. 7– ನೂತನ ವಿದೇಶಿ ವ್ಯಾಪಾರಿ ನೀತಿಯನ್ನು ವ್ಯಾಪಾರಸ್ಥರಿಗೆ ಪರಿಚಯಿಸುವ ಉದ್ದೇಶದಿಂದ ಬೆಂಗಳೂರು ಮೂಲದ ನವಟೈಸ್ ಸಂಸ್ಥೆ ವತಿಯಿಂದ 'ನೀವು ರಫ್ತು ಮಾಡಲು ಸಿದ್ಧರಿದ್ದೀರಾ?' ಕುರಿತು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಕಚೇರಿಯಲ್ಲಿ ಮೈಸೂರು ರಫ್ತುದಾರರ ಪ್ರೋತ್ಸಾಹಿಸಲು ರಫ್ತು ಅಭಿಯಾನವನ್ನು ಪ್ರಾರಂಭಿಸಲಾಗಿದೆ.

ಈ ವೇಳೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು ಮಾತನಾಡಿ, '2022-23ರಲ್ಲಿ ಮೈಸೂರು ಸುಮಾರು 6400 ಕೋಟಿ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಿ ರಾಜ್ಯದಲ್ಲಿ 6ನೇ ಅತಿದೊಡ್ಡ ರಫ್ತುದಾರರ ಜಿಲ್ಲೆಯಾಗಿದೆ. ಪ್ರಾಥಮಿಕ ಸರಕು ರಫ್ತುಗಳು ಆಟೋಮೋಟಿವ್ ಭಾಗಗಳು, ಜವಳಿ, ಸಕ್ಕರೆ ಇತ್ಯಾದಿಗಳಾಗಿದ್ದರೆ, ಪ್ರವಾಸೋದ್ಯಮ ಮತ್ತು ಆರೋಗ್ಯವು ಪ್ರಾಥಮಿಕ ಸೇವಾ ರಫ್ತಾಗಿದೆ ಈ ನಿಟ್ಟಿನಲ್ಲಿ ನವಟೈಸ್ ಸಂಸ್ಥೆಯು ನೀವು ರಫ್ತು ಮಾಡಲು ಸಿದ್ಧರಿದ್ದೀರಾ? ಕಾರ್ಯಕ್ರಮದ ಮೂಲಕ ಹೊಸ ರಫ್ತುದಾರರನ್ನು ಪ್ರೋತ್ಸಾಹಿಸುವ ಕೆಲಸವನ್ನು ಮಾಡುತ್ತಿದೆ. ದಾಖಲಾತಿಗಳು, ಖರೀದಿ ನಿರ್ವಹಣೆ, ಸಾಗಣೆ ಮತ್ತು ಪಾವತಿಗಳನ್ನು ನಿರ್ವಹಿಸಲು ರಫ್ತುದಾರರಿಗೆ ಬೇಕಿರುವ ಅಗತ್ಯ ನೆರವನ್ನು ಇದರಡಿ ನೀಡಲಾಗುತ್ತದೆ. ಈ ಅಭಿಯಾನದಲ್ಲಿ ಅವರನ್ನು ಬೆಂಬಲಿಸಲು ನಾವು ಸಹಕರಿಸುವೆವು ಎಂದರು. ಹೊಸ ರಫ್ತುದಾರರು, ಉತ್ಪಾದಕರು, ವ್ಯಾಪಾರಿಗಳು, ಸೇವಾ ಪೂರೈಕೆದಾರರು, ಎಫ್‌ಪಿಓಗಳು, ರೈತರು ಮತ್ತು ಅಂತಾರಾಷ್ಟ್ರೀಯ ವ್ಯಾಪಾರವನ್ನು ಅನ್ವೇಷಿಸಲು ಬಯಸುವ ಇತರ ಆಸಕ್ತರು 07941050727ಗೆ(079-4105-0727)ಮಿಸ್ಡ್ ಕಾಲ್ ನೀಡುವ ಮೂಲಕ ಈ ಅಭಿಯಾನಕ್ಕೆ ನೋಂದಾಯಿಸಿಕೊಳ್ಳಬಹುದು.

ನೇರ ಗುತ್ತಿಗೆ ಆಧಾರದಲ್ಲಿ ಕೃಷಿ ಇಲಾಖೆ ವಿವಿಧ ಹುದ್ದೆಗಳ ನೇಮಕಾತಿ

ಮೈಸೂರು, ಜೂ. 7– 2023-24ನೇ ಸಾಲಿನ ಆತ್ಮ ಯೋಜನೆಯಡಿಯಲ್ಲಿ ಜಿಲ್ಲೆಯ ಕೃಷಿ ಇಲಾಖೆಯಲ್ಲಿನ ಖಾಲಿಯಿರುವ ಉಪ ಯೋಜನಾ ನಿರ್ದೇಶಕರು(1) ಹಾಗೂ ಸಹಾಯಕ ತಾಂತ್ರಿಕ ವ್ಯವಸ್ಥಾಪಕರ(3) ಹುದ್ದೆಗಳಿಗೆ ಒಂದು ವರ್ಷದ ನೇರ ಗುತ್ತಿಗೆ ಆಧಾರದ ಮೇಲೆ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಂತೆ ನೇಮಕಾತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕೃಷಿ, ಕೃಷಿ ಸಂಬಂಧಿತ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು. ಉಪಯೋಜನಾ ನಿರ್ದೇಶಕರ ಹುದ್ದೆಗೆ ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ವ್ಯವಸ್ಥಾಪಕರಾಗಿ ಅಥವಾ ಮೇಲ್ವಿಚಾರಣಾ ಸಾಮರ್ಥ್ಯದಲ್ಲಿ 5 ವರ್ಷಗಳ ಅನುಭವ ಹೊಂದಿರಬೇಕು, ವೇತನ 42 ಸಾವಿರ ಆಗಿರುತ್ತದೆ. ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಹುದ್ದೆಗೆ ಕೃಷಿ ಸಂಬಂಧಿತ ಚಟುವಟಿಕೆಯಲ್ಲಿ 1 ವರ್ಷದ ಕ್ಷೇತ್ರಮಟ್ಟದ ಅನುಭವ ಹೊಂದಿರಬೇಕು. ವೇತನ ಶ್ರೇಣಿಯು 25 ಸಾವಿರ ಆಗಿರುತ್ತದೆ.

ಆಸಕ್ತ ಅಭ್ಯರ್ಥಿಗಳು ಅರ್ಜಿಯನ್ನು ಪಡೆದು ನಿಗದಿತ ನಮೂನೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ ಜೂನ್ 20 ರ ಸಂಜೆ 5 ಗಂಟೆಯೊಳಗಾಗಿ ಸೀಲು ಮಾಡಿದ ಲಕೋಟೆಯಲ್ಲಿ ಅಂಚೆ ಮೂಲಕ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿನ ಸಾರ್ವಜನಿಕ ಕಚೇರಿಗಳ ಕಟ್ಟಡ, ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ವಿಷಯ ನಿರ್ವಾಹಕರು ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್‌ಗಳನ್ನು ಸಂಪರ್ಕಿಸುವಂತೆ ಯೋಜನಾ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಕಾರ್ಯಾಗಾರ

ಮೈಸೂರು, ಜೂ. 7– ರಾಷ್ಟ್ರೀಯ ಡಿಜಿಟಲ್ ಸಾಕ್ಷರತಾ ಮಿಷನ್, ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಹಾಗೂ ಎಸ್‌ಎಸ್‌ಐಟಿ ಸಲ್ಯೂಷನ್ಸ್‌ನ ಸಹಯೋಗದಲ್ಲಿ ಮಾಂಟೆಸರಿ ಮತ್ತು ಎನ್‌ಟಿಟಿಸಿ ಪ್ರಶಿಕ್ಷಣ ಆಕಾಂಕ್ಷಿಗಳಿಗಾಗಿ ಇದೇ ಜೂನ್ 10ರ ಶನಿವಾರದಂದು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಕಾರ್ಯಾಗಾರದಲ್ಲಿ ಮಕ್ಕಳ ಮಾನಸಿಕ ಬೆಳವಣಿಗೆ, ಆರೋಗ್ಯ, ಬೆಳವಣಿಗೆಯ ಹಂತಗಳು, ಕಂಪ್ಯೂಟರ್ ಶಿಕ್ಷಣ, ಮುಂತಾದವುಗಳ ಕುರಿತು ಉಪನ್ಯಾಸಕರಿಂದ ಮಾರ್ಗದರ್ಶನವಿರುತ್ತದೆ.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಪದವಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮುಗಿಸಿರುವ 18ಕ್ಕಿಂತ ಮೇಲ್ಪಟ್ಟ ಎಲ್ಲಾ ವರ್ಗದವರು ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ಅರ್ಹರಾಗಿರುತ್ತಾರೆ. ಗೃಹಿಣಿಯರು ಉದ್ಯೋಗನಿರತ ಮಹಿಳೆಯರಿಗಾಗಿ ವಿಶೇಷ ಆದ್ಯತೆ ಇರುತ್ತದೆ.

ಆಸಕ್ತರು ಜೂನ್ 9ರೊಳಗಾಗಿ ತಮ್ಮ ಹೆಸರನ್ನು ಎಸ್‌ಎಸ್‌ಐಟಿ ಸಲ್ಯೂಷನ್ಸ್, ರಾಮಕೃಷ್ಣನಗರ ಕೆ ಬ್ಲಾಕ್, ಜಯಲಕ್ಷ್ಮಿದೇವಿ ಪದವಿಪೂರ್ವ ಕಾಲೇಜು ಆವರಣ, ಮೈಸೂರು ಇಲ್ಲಿ ನೇರವಾಗಿ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ 9964790442, 8310306882.

ಕೃಷ್ಣರಾಜ ಸರ್ಕಾರಿ ಶಾಲೆ ಉಳಿಸಿಕೊಳ್ಳಲು ಸಾಹಿತಿ ಬನ್ನೂರು ರಾಜು ಆಗ್ರಹ



ಮೈಸೂರು, ಜೂ.7–ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನಲ್ಲಿ ನಗರದ ಹೃದಯ ಭಾಗದಲ್ಲಿರುವ ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸವುಳ್ಳ ಮೈಸೂರಿಗರ ಹೆಮ್ಮೆಯ ಶ್ರೀ ಕೃಷ್ಣರಾಜ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಉಳಿಸಿಕೊಳ್ಳುವ ಕೆಲಸ ತ್ವರಿತವಾಗಿ ಆಗಬೇಕಾಗಿದೆ ಎಂದು ಸಾಹಿತಿ ಬನ್ನೂರು ಕೆ. ರಾಜು ಹೇಳಿದರು.

ನಗರದ ಅಗ್ರಹಾರದ ಬಿ.ಬಿ. ಗಾರ್ಡನ್‌ನಲ್ಲಿರುವ ಶ್ರೀ ಕೃಷ್ಣರಾಜ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ ಸಂಯುಕ್ತವಾಗಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ವರ್ಧಂತೋತ್ಸವದ ಅಂಗವಾಗಿ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆ ಮತ್ತು ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಚಾರಿತ್ರಿಕ ಮಹತ್ವದ ಈ ಶಾಲೆ ಒಂದು ರೀತಿ ನಮ್ಮ ಮೈಸೂರು ಸಂಸ್ಥಾನದ ಅಸ್ಮಿತೆಯಾಗಿದ್ದು ಇದರ ಉಳಿವಿನ ಹೊಣೆ ಮೈಸೂರಿಗರದ್ದೆಂದರು.

ಶಿಕ್ಷಣದ ಮಹತ್ವವನ್ನು ಅರಿತಿದ್ದ ದೂರದೃಷ್ಟಿಯುಳ್ಳ ಮಹಾರಾಜರು ತಮ್ಮ ಆಳ್ವಿಕೆಯಲ್ಲಿ ಅವತ್ತಿನ ಕಾಲದಲ್ಲೇ ಅಂದರೆ ಶತಮಾನದ ಹಿಂದೆಯೇ ತನ್ನ ಪ್ರಜೆಗಳು ಯಾರೂ ಕೂಡ ಶಿಕ್ಷಣದಿಂದ ವಂಚಿತರಾಗಬಾರದೆಂಬ ಕಾಳಜಿಯಿಂದ ಅನೇಕ ಶಾಲೆಗಳನ್ನು ವ್ಯವಸ್ಥಿತವಾಗಿ ತೆರೆದಿದ್ದರು. ಅಂತಹ ಶಾಲೆಗಳಲ್ಲೊಂದು ಶ್ರೀಕೃಷ್ಣರಾಜ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ಇವತ್ತಿಗೂ ಈ ಶಾಲೆ ಕಟ್ಟಡ, ಕೊಠಡಿಯ ತರಗತಿಗಳು ಸೇರಿದಂತೆ ಎಲ್ಲಾ ರೀತಿಯಿಂದಲೂ ಸುವ್ಯವಸ್ಥಿತವಾಗಿಯೇ ಇದೆ. ಆದರೂ ನಮ್ಮ ಜನರಲ್ಲಿರುವ ಖಾಸಗಿ ಶಾಲೆಗಳ ಭ್ರಮೆ ಮತ್ತು ಇಂಥ ಸಮೂಹ ಸನ್ನಿಯಿಂದಾಗಿ ಇಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆಯಾಗಿದೆ. ಇದು ಹೀಗೆಯೇ ಮುಂದುವರೆದರೆ ಮಕ್ಕಳೇ ಇಲ್ಲದೆ ಈ ಶಾಲೆ ಮುಚ್ಚಿಹೋಗುವ ಹಂತ ತಲುಪಿದೆ. ಹಾಗಾಗಿ ಈ ಶಾಲೆಯಲ್ಲಿ ಕಲಿತಿರುವ ಹಳೆಯ ವಿದ್ಯಾರ್ಥಿಗಳು, ಪ್ರಸ್ತುತ ಇಲ್ಲಿ ಕಲಿಯುತ್ತಿರುವವರು, ಪೋಷಕರು, ಸುತ್ತಮುತ್ತಲಿನ ಬಡಾವಣೆಯ ಜನರು ಸ್ವಯಂ ಜಾಗೃತಿಗೊಂಡು ಇಲ್ಲಿಗೆ ಸಾಕಷ್ಟು ಮಕ್ಕಳು ಬರುವಂತೆ ಮನವೊಲಿಸುವ ಕೆಲಸ ಮಾಡಿ ಶಾಲೆಯ ಉಳಿವಿಗೆ ನೆರವಾಗಬೇಕಾಗಿದೆ. ಇಂದು ನಮ್ಮ ಸರ್ಕಾರಗಳು ಎಲ್ಲಾ ರೀತಿಯ ಸವಲತ್ತುಗಳನ್ನೂ ಕೊಟ್ಟರೂ ಸರ್ಕಾರಿ ಶಾಲೆಗಳು ಮಕ್ಕಳಿಲ್ಲದೆ ಮುಚ್ಚುವ ಸ್ಥಿತಿಗೆ ಬರುವುದಕ್ಕೆ ನಮ್ಮ ಜನರ ಮನಸ್ಥಿತಿಯೇ ಬಹು ಮುಖ್ಯ ಕಾರಣವಾಗಿದ್ದು ಇದು ಬದಲಾಗಬೇಕಾಗಿದೆ. ಇಲ್ಲದಿದ್ದರೆ ಇಷ್ಟರಲ್ಲೇ ಸರ್ಕಾರಿ ಶಾಲೆಗಳು ಸಂಪೂರ್ಣವಾಗಿ ಮುಚ್ಚಿಹೋಗುವ ಬಹುದೊಡ್ಡ ಅಪಾಯವಿದೆಯೆಂದು ಹೇಳಿದರು.

ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ. ಕಾವೇರಿಯಮ್ಮ, ವಿಶ್ರಾಂತ ಶಿಕ್ಷಕ ಎಚ್.ವಿ. ಮುರಳೀಧರ್, ಶಾಲೆಯ ಮುಖ್ಯ ಶಿಕ್ಷಕಿ ಎನ್.ಆರ್.ಸುಮಾ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿಯರಾದ ಕೆ.ಲಕ್ಷ್ಮಿ ಮತ್ತು ಬಿ.ಎಸ್. ರೂಪಾ, ಅನುಭವ ಟುಟೋರಿಯಲ್ಸ್‌ನ ಶಿಕ್ಷಕ ವಿ.ನಾರಾಯಣರಾವ್ ಮುಂತಾದವರು ಉಪಸ್ಥಿತರಿದ್ದರು. ಇದೇ ವೇಳೆ ಚಿತ್ರಕಲಾ ಸ್ಪರ್ಧೆ ವಿಜೇತರಾದ ಸೌಜನ್ಯ, ಸೈಯದ್ ಅಖಿಲ್, ಹೇಮಂತ್, ಐಶ್ವರ್ಯ ಅವರಿಗೆ ಬಹುಮಾನ ವಿತರಿಸಲಾಯಿತು.

ಬೆಂಗಳೂರು ಹೊರ ವಲಯದಲ್ಲಿ ಐದು ಕಡೆ ಗೃಹ ಮಂಡಳಿಯಿಂದ ಹೈಟೆಕ್ ಸಿಟಿ ನಿರ್ಮಾಣ

● ನಾಲ್ಕು ಕಡೆ ಐಷಾರಾಮಿ ವಿಲ್ಲಾ ಯೋಜನೆ ಅನುಷ್ಠಾನ ● ರೂಪುರೇಷೆ ನಿರ್ಧರಿಸಲು ಅಧಿಕಾರಿಗಳಿಗೆ ವಸತಿ ಸಚಿವ ಜಮೀರ್ ಅಹಮದ್ ಸೂಚನೆ

ಬೆಂಗಳೂರು, ಜೂ.7(ಕೆಎಂಶಿ)– ರಾಜಧಾನಿಯ ಹೊರವಲಯದ ಐದು ಕಡೆ ಗೃಹ ಮಂಡಳಿ ವತಿಯಿಂದ ಹೈಟೆಕ್ ಸಿಟಿ (ಉಪನಗರ) ನಿರ್ಮಾಣ ಹಾಗೂ ನಾಲ್ಕು ಕಡೆ ಐಷಾರಾಮಿ ವಿಲ್ಲಾ ಯೋಜನೆ ಬಗ್ಗೆ ರೂಪುರೇಷೆ ಸಿದ್ಧಪಡಿಸಲು ವಸತಿ ಸಚಿವ ಜಮೀರ್ ಅಹಮದ್ ಸೂಚನೆ ನೀಡಿದ್ದಾರೆ. ಗೃಹ ಮಂಡಳಿ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ಬೆಂಗಳೂರಿನಲ್ಲಿ ವಸತಿ ಬೇಡಿಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ತಲಾ ಎರಡು ಸಾವಿರ ಎಕರೆ ಪ್ರದೇಶದಲ್ಲಿ ವಿಶ್ವ ದರ್ಜೆ ಸೌಲಭ್ಯ ಹೊಂದಿರುವ ಟೌನ್‌ಶಿಪ್ ಹಾಗೂ ಖಾಸಗಿ ವಲಯದ ಮಾದರಿ ಐಷಾರಾಮಿ ವಿಲ್ಲಾ ನಿರ್ಮಾಣಕ್ಕೆ ಪ್ರಸ್ತಾವನೆ ಸಿದ್ಧಪಡಿಸಲು ಹಾಗೂ ಅಗತ್ಯ ಜಮೀನು ಗುರುತಿಸಲು ನಿರ್ದೇಶನ ನೀಡಿದರು.

ಪ್ರತಿ ಉಪನಗರ ಯೋಜನೆಯಲ್ಲಿ 30 ಸಾವಿರ ನಿವೇಶನ ಹಾಗೂ ಐದು ಸಾವಿರ ಮನೆ ನಿರ್ಮಾಣ ಮಾಡಲು ಅವಕಾಶ ಇರುವಂತೆ ಯೋಜನೆ ರೂಪಿಸುವಂತೆ ಹಾಗೂ ವಿಲ್ಲಾ ಯೋಜನೆಗೆ ನಿಸರ್ಗದ ನಡುವಿನ 500 ಎಕರೆ ಪ್ರದೇಶ ಗುರುತಿಸಲು ಸೂಚನೆ ನೀಡಿದರು.

ಬಡವರಿಗಾಗಿ ರೂಪಿಸುವ ಯೋಜನೆಗಳಲ್ಲಿ ಲಾಭ ನೋಡಬೇಡಿ. ಕಾಮಗಾರಿ ಗುಣಮಟ್ಟದಲ್ಲಿ ರಾಜಿ ಆಗಬೇಡಿ ಎಂದು ತಾಕೀತು ಮಾಡಿದರು.



ಸಭೆಯ ನಂತರ ಮಾತನಾಡಿದ ಸಚಿವರು, ನಗರದ ಒತ್ತಡ ಕಡಿಮೆ ಮಾಡಲು ಹೊರವಲಯದಲ್ಲಿ ಉಪನಗರ ನಿರ್ಮಾಣ ಅನಿವಾರ್ಯ. ಮೆಟ್ರೋ ಸೇರಿದಂತೆ ಸಮರ್ಪಕ ಸಾರಿಗೆ ವ್ಯವಸ್ಥೆ ಗಮನದಲ್ಲಿಟ್ಟುಕೊಂಡು ಉಪನಗರ ನಿರ್ಮಾಣ ಆಗಲಿದೆ ಎಂದು ತಿಳಿಸಿದರು.

ಪ್ರತಿ ಉಪನಗರ ಎರಡು ಸಾವಿರ ಎಕರೆ ಪ್ರದೇಶದಲ್ಲಿ ತಲೆ ಎತ್ತಲಿದ್ದು 30 ಸಾವಿರ ನಿವೇಶನ, ಐದು ಸಾವಿರ ಮನೆ ನಿರ್ಮಾಣ ಆಗಲಿದೆ. ಐದು ಉಪನಗರಗಳಲ್ಲಿ ಒಟ್ಟು 1.50 ಲಕ್ಷ ನಿವೇಶನ, 25 ಸಾವಿರ ಮನೆ ನಿರ್ಮಾಣ ಆಗಲಿದೆ ಎಂದು ವಿವರಿಸಿದರು. ಅದೇ ರೀತಿ ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದ್ದು, ವಿದೇಶಗಳಿಂದ ಇಲ್ಲಿ ಖಾಯಂ ವಾಸಿಸಲು ಸಾಕಷ್ಟು ಉದ್ಯಮಿಗಳು, ಗಣ್ಯರು ಬರುತ್ತಿದ್ದಾರೆ.

ಹೊರವಲಯದಲ್ಲಿ ವಿಲ್ಲಾಗಳಿಗೆ ಬೇಡಿಕೆ ಇದೆ. ಹೀಗಾಗಿ ಗೃಹಮಂಡಳಿ ವತಿಯಿಂದ ಐಷಾರಾಮಿ ವಿಲ್ಲಾ ಯೋಜನೆ ರೂಪಿಸಲಾಗುವುದು. ಒಂದೊಂದು ವಿಲ್ಲಾ ಯೋಜನೆ 500 ಎಕರೆ ಪ್ರದೇಶದಲ್ಲಿ ಬರಲಿದ್ದು ಒಟ್ಟು 1000 ವಿಲ್ಲಾ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದರು. ಜಮೀನು ಮಾಲೀಕರೊಂದಿಗೆ 50:50 ಸಹಭಾಗಿತ್ವದಲ್ಲಿ ಯೋಜನೆ ಅನುಷ್ಠಾನವಾಗಲಿದ್ದು ಗೃಹಮಂಡಳಿಗೆ ಭೂಸ್ವಾಧೀನ ವೆಚ್ಚದ ಹೊರೆಯಾಗುವುದಿಲ್ಲ ಎಂದು ತಿಳಿಸಿದರು.

ಮೈಸೂರು ಮಿತ್ರ ಗುರುವಾರ 8 ಜೂನ್ 2023

ಕೊಡಗಿನ ನೈಸರ್ಗಿಕ ಭತ್ತ ಶ್ರೇಷ್ಠ ಗುಣಮಟ್ಟದ್ದು

● ವನ್ಯಪ್ರಾಣಿಗಳ ಉಪಟಳ, ಕಾರ್ಮಿಕರ ಸಮಸ್ಯೆಯಿಂದ ಭತ್ತದ ಕೃಷಿಗೆ ಹಿನ್ನಡೆ ● ಜಿಲ್ಲೆಯಲ್ಲಿ ರಾಜಮುಡಿಗೆ ರಾಜಾತಿಥ್ಯ



ಮಡಿಕೇರಿ, ಜೂ.7– ಕೊಡಗು ಜಿಲ್ಲೆಯಲ್ಲಿ ನೈಸರ್ಗಿಕವಾಗಿ ಬೆಳೆಸಲಾಗುತ್ತಿರುವ ಭತ್ತ 'ಶ್ರೇಷ್ಠ' ಗುಣಮಟ್ಟ ಹೊಂದಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶಬಾನ ಎಂ. ಶೇಖ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೊಡಗು ಪತ್ರಕರ್ತರ ಸಂಘದ ಕುಶಾಲನಗರ ತಾಲೂಕು ಘಟಕದಿಂದ ಕುಶಾಲನಗರ ರೈತ ಸಂಪರ್ಕ ಕೇಂದ್ರದಲ್ಲಿ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ಕೊಡಗು ಕೃಷಿ ಪ್ರಧಾನವಾದ ಜಿಲ್ಲೆಯಾಗಿದ್ದು, ಇಲ್ಲಿ ಎಲ್ಲ ರೀತಿಯ ಬೆಳೆಗಳನ್ನು ಲಾಭದಾಯಕವಾಗಿ ಬೆಳೆಯಲು ಸಾಧ್ಯವಿಲ್ಲ. ವನ್ಯ ಪ್ರಾಣಿಗಳ ಉಪಟಳ, ಕಾರ್ಮಿಕರ ಸಮಸ್ಯೆಯಿಂದಾಗಿ ಭತ್ತದ ಕೃಷಿ ಕೊಡಗಿನಲ್ಲಿ ಹಿನ್ನಡೆ ಕಂಡಿದೆ ಎಂದು ಅವರು ಇದೇ ಸಂದರ್ಭ ವಿಷಾದಿಸಿದರು.

ಶ್ರೇಷ್ಠ ಭತ್ತ: ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗಿನಲ್ಲಿ ಕಡಿಮೆ ಪ್ರಮಾಣದಲ್ಲಿ ಭತ್ತದ ಗದ್ದೆಗಳಿವೆ. ಈ ಭತ್ತದ ಗದ್ದೆಗಳಲ್ಲಿ ಬೆಳೆಸಲಾಗುತ್ತಿರುವ ಭತ್ತ ಶ್ರೇಷ್ಠ ಗುಣಮಟ್ಟದಿಂದ ಕೂಡಿದೆ. ಕೊಡಗಿನಲ್ಲಿ ತೋಟಗಾರಿಕಾ ಬೆಳೆಗಳಿಗೆ ಮಾತ್ರವೇ ರಸಗೊಬ್ಬರ ಸೇರಿದಂತೆ ರಾಸಾಯನಿಕಗಳನ್ನು ಬಳಸಲಾಗುತ್ತದೆ. ರಾಸಾಯನಿಕಗಳ ಮಿತ ಬಳಕೆ, ಕ್ರಿಮಿಕೀಟನಾಶಕಗಳನ್ನು ಭತ್ತದ ಕೃಷಿಯಲ್ಲಿ ಜಿಲ್ಲೆಯ ರೈತರು ತೀರಾ ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿರುವುದು ಭತ್ತ ಶ್ರೇಷ್ಠತೆಯಿಂದ ಕೂಡಿರಲು ಕಾರಣವಾಗಿದೆ ಎಂದು ಪ್ರತಿಪಾದಿಸಿದರು.

ಕೃಷಿ ಪ್ರದೇಶ ಕುಂಠಿತ: ಒಂದು ಕಾಲದಲ್ಲಿ ಜಿಲ್ಲೆಯಲ್ಲಿ 40 ಸಾವಿರಕ್ಕೂ ಅಧಿಕ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತಿತ್ತು. ಆದರೆ ಒಂದು ಅಂದಾಜಿನ ಪ್ರಕಾರ ಪ್ರಸ್ತುತ 28 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರವೇ ಭತ್ತ ಬೆಳೆಯಲಾಗುತ್ತಿದೆ. ಆದರೆ ಕಡಿಮೆ ಅವಧಿಯಲ್ಲಿ ಹೆಚ್ಚು ಇಳುವರಿ ಬರುವಂತಹ ತಳಿಗಳನ್ನು ಉಪಯೋಗಿಸಿ ಅದರೊಂದಿಗೆ ಶೇ.90ರಷ್ಟು ಯಂತ್ರೋಪಕರಣಗಳನ್ನು ಬಳಸುವ ಮೂಲಕ ಭತ್ತದ ಕೃಷಿಯನ್ನು ಲಾಭದಾಯಕವನ್ನಾಗಿ ಮಾಡಲು ಸಾಧ್ಯವಿದೆ ಎಂದು ಅವರು ಖಚಿತವಾಗಿ ನುಡಿದರು. ಕೃಷಿ ಇಲಾಖೆ ಆಧುನೀಕರಣಕ್ಕೆ ದಾಪುಗಾಲಿಟ್ಟಿದ್ದು, ಜಿಲ್ಲೆಯ ರೈತ ಸಮುದಾಯ ಇದರ ಸದುಪಯೋಗ ಪಡೆಯುವುದರೊಂದಿಗೆ ಯಾಂತ್ರೀಕೃತ ಕೃಷಿಯತ್ತ ಹೆಚ್ಚಿನ ಒಲವು ತೋರಬೇಕೆಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶಬಾನ ಎಂ. ಶೇಖ್ ಕರೆ ನೀಡಿದರು.

ಬಿತ್ತನೆ ಬೀಜ ದಾಸ್ತಾನು: ಈಗಾಗಲೇ ಭತ್ತ ಹಾಗೂ ಮುಸುಕಿನ ಜೋಳ ಬಿತ್ತನೆ ಬೀಜ ಜಿಲ್ಲೆಯಲ್ಲಿ ದಾಸ್ತಾನು ಮಾಡಲಾಗುತ್ತಿದೆ. ರಾಜ್ಯ ಭತ್ತದ ಬೀಜ ನಿಗಮದಿಂದ ತನು, ಬಿಆರ್ 2655, ಐಆರ್64, ಇಂಟಾನ್, ತುಂಗಾ ಮತ್ತು ಆರ್‌ಎನ್‌ಆರ್ 15048 ಮತ್ತು ಅತೀರಾ ಸೇರಿ ಮಡಿಕೇರಿ ತಾಲೂಕಿಗೆ 100 ಕ್ವಿಂಟಾಲ್, ಸೋಮವಾರಪೇಟೆ ತಾಲೂಕಿನ 814 ಕ್ವಿಂಟಾಲ್ ಹಾಗೂ ವಿರಾಜಪೇಟೆ ತಾಲೂಕಿಗೆ 804 ಕ್ವಿಂಟಾಲ್ ದಾಸ್ತಾನು ಮಾಡಲಾಗಿದೆ. ಆಗಸ್ಟ್‌ವರೆಗೂ ಬಿತ್ತನೆ ಬೀಜ ನೀಡಲಾಗುವುದು. ಮುಸುಕಿನ ಜೋಳ ಸೋಮವಾರಪೇಟೆ ತಾಲೂಕಿಗೆ 44.40 ಕ್ವಿಂಟಾಲ್ ದಾಸ್ತಾನಿದೆ ಎಂದು ಶಬಾನ ಎಂ.ಶೇಖ್ ತಿಳಿಸಿದರು. ವಿರಾಜಪೇಟೆ ವ್ಯಾಪ್ತಿಯಲ್ಲಿ ಅತಿಯಾಗಿ ಅತೀರಾ(ಕೆಂಪು ಅಕ್ಕಿ) ಭತ್ತದ ತಳಿಯನ್ನು ಬೆಳೆಯಲಾಗುತ್ತಿದೆ. ಹೀಗಾಗಿ ಆ ವ್ಯಾಪ್ತಿಯಿಂದ ಬೇಡಿಕೆ ಬಂದಿರುವ ಹಿನ್ನೆಲೆಯಲ್ಲಿ 400 ಕ್ವಿಂಟಾಲ್ ಅತೀರಾ ತಳಿಯ ಭತ್ತವನ್ನು ವಿರಾಜಪೇಟೆ ವ್ಯಾಪ್ತಿಗೆ ಮೀಸಲಿಡಲಾಗಿದೆ ಎಂದು ಮಾಹಿತಿ ನೀಡಿದರು.

ಶೇ.80ರಷ್ಟು ಹುದ್ದೆ ಖಾಲಿ!: ಕೊಡಗು ಜಿಲ್ಲಾ ಕೃಷಿ ಇಲಾಖೆಯಲ್ಲಿ ಶೇ.80ರಷ್ಟು ಹುದ್ದೆಗಳು ಖಾಲಿ ಇದ್ದು, 20ರಷ್ಟು ಸಿಬ್ಬಂದಿ ವರ್ಗದಿಂದ ಕೆಲಸ ನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿ 16 ರೈತ ಸಂಪರ್ಕ ಕೇಂದ್ರವಿದೆ. ಇಲ್ಲಿ ಪೂರ್ಣ ಪ್ರಮಾಣದ ಅಧಿಕಾರಿ, ಸಿಬ್ಬಂದಿ ವರ್ಗದ ಕೊರತೆ ಇದ್ದು, ಇದನ್ನು ಸರ್ಕಾರದ ಗಮನಕ್ಕೆ ತರಲಾಗಿದೆ ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಶಬಾನ ಉತ್ತರಿಸಿದರು.

ರಾಜಮುಡಿಗೆ ರಾಜಾತಿಥ್ಯ: ಕೊಡಗು ಜಿಲ್ಲೆಯಲ್ಲೂ ಇದೀಗ ರಾಜಮುಡಿ ತಳಿಯ ಭತ್ತ ಬೆಳೆಯಲಾಗುತ್ತಿದೆ. ಕೂಡಿಗೆ, ಶಿರಂಗಾಲ, ಕಣಿವೆ ಮತ್ತಿತ್ತರ ಕಡೆಗಳಲ್ಲಿ ರೈತರು ರಾಜಮುಡಿ ತಳಿಯನ್ನು ಬೆಳೆಯುವ ಮೂಲಕ ಉತ್ತಮ ಮಾರುಕಟ್ಟೆ ದಾರಣೆ ಪಡೆದಿದ್ದಾರೆ. ರಾಜಮುಡಿ ಭತ್ತದ ತಳಿಗೆ ಅಪಾರ ಬೇಡಿಕೆ ಇದ್ದು, ಆಧುನಿಕ ಬೇಸಾಯ ಪದ್ಧತಿಯ ಹಿನ್ನೆಲೆಯಲ್ಲಿ ಉತ್ಪಾದನಾ ವೆಚ್ಚವನ್ನು ತಗ್ಗಿಸಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿಕೊಂಡಲ್ಲಿ ಅಪಾರ ಲಾಭಗಳಿಸುವ ಸಾಧ್ಯತೆಯಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ರಾಜಮುಡಿ ಭತ್ತಕ್ಕೆ 2200 ರೂ.ದರವಿದ್ದು, ಒಣ ಹುಲ್ಲಿಗೂ ಬೇಡಿಕೆ ಇದೆ ಎಂದು ಯಾದವ್ ಬಾಬು ಹೇಳಿದರು. ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನಲ್ಲಿ ಅನೇಕ ಪ್ರಗತಿಪರ ಭತ್ತದ ಕೃಷಿಕರು ಆಧುನಿಕ ಬೇಸಾಯ ಪದ್ಧತಿ ಮತ್ತು ಯಾಂತ್ರೀಕರಣ ಪದ್ಧತಿಯಿಂದ ಲಾಭದಾಯಕ ಉದ್ಯಮವನ್ನಾಗಿ ಕೃಷಿಯನ್ನು ಪರಿಗಣಿಸಿದ್ದಾರೆಂದು ಉಲ್ಲೇಖಿಸಿದರು.

ಕೃಷಿ ಇಲಾಖೆಯಲ್ಲಿ ಆನ್‌ಲೈನ್ ಪ್ರಕ್ರಿಯೆ

ಸೋಮವಾರಪೇಟೆ ತಾಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಯಾದವ್ ಬಾಬು ಮಾತನಾಡಿ, ಕೃಷಿ ಇಲಾಖೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಆಧುನೀಕರಣದತ್ತ ಸಾಗಿದ್ದು ಇಲಾಖೆಯಲ್ಲಿ ಎಲ್ಲವೂ ಆನ್‌ಲೈನ್ ಪ್ರಕ್ರಿಯೆ ಮತ್ತು ಕ್ಯೂಆರ್ ಕೋಡ್ ಬಳಸಿ ವ್ಯವಹಾರ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ರೈತರಿಗೆ ಯಾವುದೇ ಮೋಸ ಹಾಗೂ ಕಳಪೆ ಗುಣಮಟ್ಟದ ಸೇವೆಗಳನ್ನು, ವಸ್ತು ಪರಿಕರಗಳನ್ನು ನೀಡಲು ಸಾಧ್ಯವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಓರ್ವ ರೈತನಿಗೆ ಒಂದು ಬಾರಿ ನೀಡಲಾದ ಸಬ್ಸಿಡಿ ಮತ್ತು ಇತರೆ ರಿಯಾಯಿತಿಗಳು ಷರತ್ತಿಗೆ ಒಳಪಟ್ಟಿರುವುದರಿಂದ ಕೆಲವೊಮ್ಮೆ ಗೊತ್ತಿದ್ದು, ಗೊತ್ತಿಲ್ಲದೆ ಕೃಷಿ ಇಲಾಖೆ ಮೇಲೆ ಅಪವಾದ ಹೊರಿಸಲಾಗುತ್ತಿದೆ ಎಂದು ಸ್ಪಷ್ಟನೆ ನೀಡಿದರು.

ಕೃಷಿ ಕ್ಷೇತ್ರದಲ್ಲಿ ಪರಿಹಾರ

ಕೃಷಿ ಇಲಾಖೆಯು ಸಾಲಬಾಧೆ ಅಥವಾ ಕೃಷಿ ಹಿನ್ನೆಲೆಯಲ್ಲಿ ಯಾವುದೇ ಋಣಭಾರದಿಂದ ಕೃಷಿಕರು ಆತ್ಮಹತ್ಯೆ ಮಾಡಿಕೊಂಡಲ್ಲಿ ರೂ.5 ಲಕ್ಷ ಪರಿಹಾರ ನೀಡಲಾಗುವುದು. ಕೃಷಿ ಕಾರ್ಮಿಕರು ಅಥವಾ ಮಾಲೀಕರು ಕೃಷಿ ಸಂಬಂಧಿಸಿದ ಕೆಲಸಗಳಲ್ಲಿ ಆಕಸ್ಮಿಕವಾಗಿ ಮರಣ ಹೊಂದಿದರೆ ರೂ.2 ಲಕ್ಷ ಪರಿಹಾರ ದೊರಕಲಿದೆ. ಆಯಾ ತಾಲೂಕಿನ ಕೃಷಿ ಸಹಾಯಕ ನಿರ್ದೇಶಕರು ಉಪ ವಿಭಾಗಾಧಿಕಾರಿ ಅಧ್ಯಕ್ಷತೆಯಲ್ಲಿ ಇರುವ ಸಮಿತಿಗೆ ಸದಸ್ಯ ಕಾರ್ಯದರ್ಶಿಗಳಾಗಿದ್ದು, ಸೂಕ್ತ ದಾಖಲಾತಿಗಳೊಂದಿಗೆ ಸಮಿತಿಗೆ ಮನವಿ ನೀಡಿದಲ್ಲಿ ಶೀಘ್ರ ಪ್ರಕರಣ ಇತ್ಯರ್ಥ ಪಡಿಸಲಾಗುವುದು. ಕರ್ನಾಟಕ ರಾಜ್ಯದ ನಿವಾಸಿಗಳಿಗೆ ಮಾತ್ರವೇ ಈ ಪರಿಹಾರ ಯೋಜನೆ ದೊರೆಯಲಿದೆ ಎಂದು ಸಹಾಯಕ ನಿರ್ದೇಶಕ ಯಾದವ್ ಬಾಬು ಸ್ಪಷ್ಟಪಡಿಸಿದರು.

ಕುಶಾಲನಗರ ಘಟಕ ಪತ್ರಕರ್ತರ ಸಂಘದ ಅಧ್ಯಕ್ಷ ವಿಘ್ನೇಶ್ ಭೂತನಕಾಡು, ಕೊಡಗು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಉಜ್ವಲ್ ರಂಜಿತ್ ಅವರುಗಳು ಸಂವಾದದ ಕುರಿತು ಮಾತನಾಡಿದರು. ಜಿಲ್ಲೆಯ ವಿವಿಧ ಕಡೆಗಳಿಂದ ಆಗಮಿಸಿದ್ದ ಪತ್ರಕರ್ತರು ಸಂವಾದದಲ್ಲಿ ಭಾಗವಹಿಸಿದ್ದರು.

ಶಾಸಕ ಎ.ಎಸ್. ಪೊನ್ನಣ್ಣರಿಗೆ ಸನ್ಮಾನ



ವಿರಾಜಪೇಟೆ, ಜೂ.7– ಕೊಡವ ಮುಸ್ಲಿಂ ಅಸೋಸಿಯೇಷನ್ (ಕೆಎಂಎ) ವತಿಯಿಂದ ಜನಾಂಗದ ಪ್ರಮುಖರ ನಿಯೋಗ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ನೂತನ ಶಾಸಕ ಎ.ಎಸ್. ಪೊನ್ನಣ್ಣ ಅವರನ್ನು ಭೇಟಿ ಮಾಡಿ, ಅಭಿನಂದನೆ ಸಲ್ಲಿಸಿತು.

ವಿರಾಜಪೇಟೆಯ ಶಾಸಕರ ನಿವಾಸದಲ್ಲಿ ಅವರನ್ನು ಭೇಟಿ ಮಾಡಿದ ಕೆಎಂಎ ಅಧ್ಯಕ್ಷ ದುದ್ದಿಯಂಡ ಹೆಚ್. ಸೂಫಿ ಹಾಜಿ ನೇತೃತ್ವದ ನಿಯೋಗ ಶಾಸಕರಾಗಿ ಮತ್ತು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾಗಿ ನೇಮಕಗೊಂಡಿರುವ ಹಿನ್ನೆಲೆಯಲ್ಲಿ ಪೊನ್ನಣ್ಣರನ್ನು ಅಭಿನಂದಿಸಿತು.

ಜನಾಂಗದ ಸಾಮಾಜಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೆಲವು ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಇದೇ ಸಂದರ್ಭದಲ್ಲಿ ಅಧ್ಯಕ್ಷ ಸೂಫಿ ಹಾಜಿ ಪೊನ್ನಣ್ಣ ಅವರಿಗೆ ಮನವಿ ಸಲ್ಲಿಸಿದರು.

ನಿಯೋಗದಲ್ಲಿ ಸಂಸ್ಥೆಯ ಪದಾಧಿಕಾರಿಗಳಾದ ಉದ್ಯಮಿ ಅಕ್ಕಳತಂಡ ಎಸ್. ಮೊಯ್ದು, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹರಿಶ್ಚಂದ್ರ ಎ.ಹಂಸ, ನಿವೃತ್ತ ಉಪ ತಹಸೀಲ್ದಾರ್ ಚಿಮ್ಮಿಚ್ಚಿರ ಎ. ಅಬ್ದುಲ್ಲಾ ಹಾಜಿ, ಹಿರಿಯ ಕಾಂಗ್ರೆಸ್ಸಿಗ ಆಲೀರ ಎ. ಅಹಮದ್ ಹಾಜಿ, ತಾಪಂ ಮಾಜಿ ಸದಸ್ಯ ಕುವೆಂಡ ವೈ. ಆಲಿ, ಕೆದಮುಳ್ಳೂರು ಗ್ರಾಪಂ ಸದಸ್ಯ ಮೀತಲತಂಡ ಎಂ. ಇಸ್ಮಾಯಿಲ್, ಕಡಂಗ ಗ್ರಾಪಂ ಮಾಜಿ ಸದಸ್ಯ ಪುದಿಯತ್ತಂಡ ಹೆಚ್. ಶಂಸುದ್ದೀನ್, ಬೇಟೋಳಿ ಗ್ರಾಪಂ ಮಾಜಿ ಉಪಾಧ್ಯಕ್ಷ ಮಂಡೇಡ ಎ. ಮೊಯ್ದು ಇತರರಿದ್ದರು.

ದುಸ್ಥಿತಿಯಲ್ಲಿದ್ದ ಪೊಲೀಸ್ ಚೌಕಿಗಳಿಗೆ ಕಾಯಕಲ್ಪ

ಬೀಳುವ ಸ್ಥಿತಿಯಲ್ಲಿದ್ದ, ತುಕ್ಕು ಹಿಡಿದ ಚೌಕಿಗಳ ತೆರವುಗೊಳಿಸುವ ಕಾರ್ಯ ಆರಂಭ

● ಪ್ರಸಾದ್ ಸಂಪಿಗೆಕಟ್ಟೆ





'ಮೈಸೂರು ಮಿತ್ರ' ವರದಿ ಫಲಶೃತಿ

ಮಡಿಕೇರಿ, ಜೂ.7– ಬಿಸಿಲು, ಮಳೆಯಿಂದ ಆರಕ್ಷಕರಿಗೆ ರಕ್ಷಣೆ ನೀಡದ ಮಡಿಕೇರಿ ನಗರದ ಪ್ರಮುಖ ವೃತ್ತಗಳಲ್ಲಿರುವ ಪೊಲೀಸ್ ಚೌಕಿಗಳ ದುರಸ್ತಿಗೆ ಪೊಲೀಸ್ ಇಲಾಖೆ ಮುಂದಾಗಿದೆ.

ಈ ಕುರಿತು 'ಮೈಸೂರು ಮಿತ್ರ' ಪೊಲೀಸ್ ಚೌಕಿಗಳ ವಾಸ್ತವ ದುಸ್ಥಿತಿಯ ಸುದ್ದಿ ಪ್ರಕಟಿಸುವ ಮೂಲಕ ಇಲಾಖೆಯ ಗಮನ ಸೆಳೆದಿತ್ತು. 'ಮೈಸೂರು ಮಿತ್ರ' ವರದಿಗೆ ಸ್ಪಂದಿಸಿರುವ ಇಲಾಖೆ ಅವುಗಳನ್ನು ಸುಸ್ಥಿತಿಗೆ ತರಲು ತೀರ್ಮಾನಿಸಿದೆ.

ತುಕ್ಕು ಹಿಡಿದು ಇಂದೋ ನಾಳೆಯೋ ಕುಸಿದು ಬೀಳುವ ಹಂತ ತಲುಪಿದ್ದ ನಗರದ ಎಲ್ಲಾ ಪೊಲೀಸ್ ಚೌಕಿಗಳನ್ನು ತಾತ್ಕಾಲಿಕ ಕ್ರಮವಾಗಿ ತೆರವು ಮಾಡಿದೆ. ಮಡಿಕೇರಿಯ ಖಾಸಗಿ ಸಂಸ್ಥೆಯೊಂದು ಚೌಕಿಗಳನ್ನು ಬುಡಮಟ್ಟದಿಂದಲೇ ತೆರವು ಕಾರ್ಯ ನಡೆಸಿದ್ದು, ಮುಂದಿನ ದಿನಗಳಲ್ಲಿ ಈ ಸ್ಥಳಗಳಲ್ಲಿ ಮತ್ತೊಂದು ಹೊಸ ಪೊಲೀಸ್ ಚೌಕಿಗಳ ನಿರ್ಮಾಣವಾಗಲಿದೆ.

ಮಡಿಕೇರಿ ನಗರದ ಎಸ್‌ಬಿಐ ಬಳಿ, ಹಳೇ ಖಾಸಗಿ ಬಸ್ ನಿಲ್ದಾಣದ ಅಜ್ಜಮಾಡ ದೇವಯ್ಯ ವೃತ್ತ, ಮಂಗೇರಿರ ಮುತ್ತಣ್ಣ ವೃತ್ತ, ಜನರಲ್ ತಿಮ್ಮಯ್ಯ ವೃತ್ತದ ಬಳಿ, ಪ್ರವಾಸಿ ತಾಣ ರಾಜಾಸೀಟ್ ಬಳಿ ಇರುವ ಪೊಲೀಸ್ ಚೌಕಿಗಳೆಲ್ಲಾ ಹೀಗೆ ತುಕ್ಕು ಹಿಡಿದು ಈಗಲೋ ಆಗಲೋ ಬೀಳುವ ಸ್ಥಿತಿಯಲ್ಲಿದ್ದವು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಇದೀಗ ವಾಹನಗಳ ದಟ್ಟಣೆಯನ್ನು ನಿಯಂತ್ರಿಸಲು ಹರಸಾಹಸಪಡುವ ಸಂಚಾರಿ ಪೊಲೀಸರಿಗೆ ಅನುಕೂಲ ಕಲ್ಪಿಸಲು ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ಸೂಕ್ತ ಕ್ರಮಕ್ಕೆ ಮುಂದಾಗಿದೆ. ಮಳೆಗಾಲಕ್ಕೂ ಮುನ್ನವೇ ಈಗಿರುವ ಸ್ಥಳಗಳಲ್ಲಿಯೇ ಚೌಕಿಗಳ ನಿರ್ಮಾಣವಾದಲ್ಲಿ ಸಂಚಾರಿ ಪೊಲೀಸರಿಗೆ ಮತ್ತಷ್ಟು ಅನುಕೂಲವಾಗಲಿದೆ.

ಸ್ನಾನಕ್ಕೆಂದು ನೀರಿಗಿಳಿದ ಕೇರಳದ ಕಾರ್ಮಿಕ ಸಾವು

ಮಡಿಕೇರಿ, ಜೂ.7– ಸಹೋದ್ಯೋಗಿಗಳೊಂದಿಗೆ ಕಾವೇರಿ ನದಿಗೆ ಸ್ನಾನಕ್ಕೆಂದು ತೆರಳಿದ ಕೇರಳ ಮೂಲದ ಕಾರ್ಮಿಕರೊಬ್ಬರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಘಟನೆ ನಾಪೋಕ್ಲುವಿನಲ್ಲಿ ನಡೆದಿದೆ. ಕೇರಳದ ಕಣ್ಣೂರು ಜಿಲ್ಲೆಯ ಆಲಕ್ಕೋಡು ನಿವಾಸಿ ಅಪ್ಪು ಶ್ರೀಜೇಶ್(34) ಎಂಬವರೇ ಮೃತ ದುರ್ದೈವಿ.

ಕಳೆದ 2 ತಿಂಗಳ ಹಿಂದೆ ಕೇರಳದ ಕಣ್ಣೂರಿನಿಂದ ನಾಪೋಕ್ಲು ಸಮೀಪದ ಹಳೆ ತಾಲೂಕಿಗೆ ಶ್ರೀಜೇಶ್ ತಮ್ಮ ಸ್ನೇಹಿತರೊಂದಿಗೆ ಕಟ್ಟಡ ಕಾಮಗಾರಿ ಕೆಲಸಕ್ಕೆಂದು ಬಂದಿದ್ದರು ಎನ್ನಲಾಗಿದೆ. ಶ್ರೀಜೇಶ್, ಬುಧವಾರ ಮಧ್ಯಾಹ್ನ ಮೂರು ಜನ ಸಹೋದ್ಯೋಗಿಗಳಾದ ಮೋಹನ್, ವಿಜು, ಸುನಿಲ್, ಎಂಬವರೊಂದಿಗೆ ನಾಪೋಕ್ಲು ಗ್ರಾಪಂಗೆ ಒಳಪಟ್ಟ ಚೆರಿಯಪರಂಬು ಗ್ರಾಮದಲ್ಲಿರುವ ಕಾವೇರಿ ನದಿಯಲ್ಲಿ ಸ್ನಾನಕ್ಕೆ ತೆರಳಿದ್ದಾರೆ. ಈ ವೇಳೆ ನೀರಿನ ಆಳ ಅರಿಯದೇ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ವಿಷಯ ತಿಳಿದು ನಾಪೋಕ್ಲು ವಾಹನ ಚಾಲಕರ ಸಂಘದ ಅಧ್ಯಕ್ಷ ಅಬ್ದುಲ್ ರಜಾಕ್, ಸ್ಥಳೀಯರಾದ ಅನೀಫ, ಕರೀಂ, ರಜಾಕ್ ಅವರುಗಳು 1 ಗಂಟೆಗಳ ಕಾಲ ಕಾವೇರಿ ನದಿಯಲ್ಲಿ ಶೋಧ ನಡೆಸಿ ಮೃತದೇಹವನ್ನು ಮೇಲೆತ್ತುವಲ್ಲಿ ಯಶಸ್ವಿಯಾದರು.

ಘಟನಾ ಸ್ಥಳಕ್ಕೆ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್, ಎಎಸ್‌ಐ ಗೋಪಾಲಕೃಷ್ಣ, ಸಿಬ್ಬಂದಿಗಳಾದ ರವಿಕುಮಾರ್, ಶರತ್, ಲವ ಕುಮಾರ್, ಶರೀಫ್, ಪ್ರಸನ್ನ, ಗಣೇಶ್, ಅವರುಗಳು ಭೇಟಿ ನೀಡಿ ಮಹಜರು ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಉಪಟಳ ನೀಡುತ್ತಿದ್ದ ಪುಂಡಾನೆ ಸೆರೆ

ಗ್ರಾಮಗಳಿಗೆ ಲಗ್ಗೆಯಿಟ್ಟು ಬೆಳೆ ನಾಶ, ಓರ್ವನನ್ನು ಬಲಿ ಪಡೆದಿದ್ದ ಆನೆ





ಗುಂಡ್ಲುಪೇಟೆ, ಜೂ.7– ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕುಂದಕೆರೆ ಹಾಗೂ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಅರಣ್ಯ ವಲಯದ ಕಾಡಂಚಿನ ಜಮೀನಿನಲ್ಲಿ ದಾಂದಲೆ ನಡೆಸುತ್ತಿದ್ದ ಪುಂಡಾನೆಯನ್ನು ಗುಡ್ಡಗೆರೆ ಸಮೀಪದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳು ಸಾಕಾನೆಗಳ ಸಹಾಯದಿಂದ ಯಶಸ್ವಿಯಾಗಿ ಸೆರೆ ಹಿಡಿದಿದ್ದಾರೆ.

ಬಂಡೀಪುರ ಸಮೀಪದ ಜನವಸತಿ ಪ್ರದೇಶಗಳಾದ ಕೆಬ್ಬೇಪುರ, ಹುಂಡೀಪುರ, ಚೌಡಹಳ್ಳಿ, ಜಕ್ಕಹಳ್ಳಿ. ಮಂಗಲ, ಎಲ್ಚೆಟ್ಟಿ ಚಿಕ್ಕೆಲಚೆಟ್ಟಿ ಮುಂತಾದ ಕಡೆಗಳಲ್ಲಿ ದಾಂದಲೆ ನಡೆಸಿ ತೋಟದ ಮನೆಗಳು, ಮರಗಳನ್ನು ಕೆಡವಿ ಆಸ್ತಿಪಾಸ್ತಿಗಳಿಗೆ ಹಾನಿಯುಂಟು ಮಾಡುತ್ತಿತ್ತು. ಕಳೆದ ವರ್ಷ ಜುಲೈ 15ರಂದು ಶಿವಪುರ ಗ್ರಾಮದಲ್ಲಿ ವ್ಯಕ್ತಿಯೊಬ್ಬರ ಮೇಲೆ ದಾಳಿ ನಡೆಸಿ ಕೊಂದು ಹಾಕಿತ್ತು. ಈ ಭಾಗದ ಜನರು ಜೀವಭಯದಿಂದಲೇ ದಿನ ತುಂಬುವಂತಾಗಿತ್ತು. ಇದರಿಂದ ಬೇಸತ್ತ ರೈತರು ಕಳೆದ ವಾರ ಹುಂಡೀಪುರದಲ್ಲಿ ಆನೆ ಸೆರೆಗೆ ಒತ್ತಾಯಿಸಿ ಮೂರು ದಿನ ಪ್ರತಿಭಟನೆ ನಡೆಸಿದ್ದರು.

ಈ ಹಿನ್ನೆಲೆಯಲ್ಲಿ ಎಚ್ಚೆತ್ತ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಬಂಡೀಪುರದ ರಾಂಪುರ ಸಾಕಾನೆ ಶಿಬಿರದಲ್ಲಿರುವ ಸಾಕಾನೆಗಳ ಜೊತೆ ದುಬಾರೆ ಹಾಗೂ ಕೆ.ಗುಡಿಗಳಿಂದಲೂ ಸಾಕಾನೆಗಳಾದ ಹರ್ಷ, ಧನಂಜಯ, ಗಜೇಂದ್ರ, ಪಾರ್ಥಸಾರಥಿ ಮತ್ತು ಜಯಪ್ರಕಾಶ ಆನೆಗಳನ್ನು ಕರೆಸಿಕೊಂಡು ಕೂಂಬಿಂಗ್ ಕಾರ್ಯಾಚರಣೆ ನಡೆಸಿದರೂ ಪತ್ತೆಯಾಗಿರಲಿಲ್ಲ. ಇದೇ ಮೊದಲ ಬಾರಿಗೆ ಅರಣ್ಯ ಇಲಾಖೆಯ ಪತ್ತೆದಾರಿ ಶ್ವಾನ ದ್ರೋಣನನ್ನು ಬಳಕೆ ಮಾಡಿದರೂ ಪುಂಡಾನೆಯ ಸುಳಿವು ಸಿಕ್ಕಿರಲಿಲ್ಲ.

ನಂತರ ಆನೆಯ ಪತ್ತೆಗೆ ಮುಂದಾಗಿದ್ದ ಕುಂದಕೆರೆ ವಲಯದ ಅರಣ್ಯ ಸಿಬ್ಬಂದಿಗಳು ಮತ್ತಷ್ಟು ಕಾರ್ಯಾಚರಣೆ ಚುರುಕುಗೊಳಿಸಿ ಆನೆಯ ಹೆಜ್ಜೆ ಜಾಡು ಹಿಡಿದು ಹಿಂಬಾಲಿಸಿದಾಗ ಎಲಚೆಟ್ಟಿ–ಲೊಕ್ಕೆರೆ ಸಮೀಪದ ಗುಡ್ಡೆಕೆರೆ ಅರಣ್ಯ ಪ್ರದೇಶದಲ್ಲಿ ಕಂಡುಬಂದಿತು. ಡ್ರೋಣ್ ನೆರವಿನಿಂದ ಪರಿಶೀಲಿಸಿದಾಗ ಆನೆ ಬಿದಿರು ಮೇಯುತ್ತಿರುವುದು ಖಚಿತವಾದ ಕೂಡಲೇ ಸ್ಥಳಕ್ಕೆ ತೆರಳಿದ ತಂಡ ಕಾರ್ಯಾಚರಣೆ ಆರಂಭಿಸಿ ಪಶುವೈದ್ಯಾಧಿಕಾರಿ ಡಾ. ಮಿರ್ಜಾ ವಾಸೀಂ, ಮಧುಮಲೈನ ಡಾ.ಸದಾಶಿವನ್ ಆನೆಗೆ ಹತ್ತಿರದಿಂದ ಅರವಳಿಕೆ ಮದ್ದನ್ನು ಡಾಟ್ ಮಾಡುವಲ್ಲಿ ಯಶಸ್ವಿಯಾದರು. ಇದರಿಂದ ಕೆಳಗೆ ಬಿದ್ದ ಆನೆಯ ಕುತ್ತಿಗೆ ಕಾಲುಗಳಿಗೆ ಹಗ್ಗ ಬಿಗಿದು ನಂತರ ಎಚ್ಚರಗೊಳಿಸಿ ಲಾರಿಯ ಬಳಿಗೆ ಕರೆತರಲಾಯಿತು. ಹಸಿವು, ನೀರಡಿಕೆಗಳಿಂದ ಬಳಲಿದ್ದ ಸಿಬ್ಬಂದಿ ಹಾಗೂ ಆನೆಗಳಿಗೆ ಆಹಾರ ನೀಡಿ ಸುಧಾರಿಸಿದ ನಂತರ ಪುಂಡಾನೆಯನ್ನು ಲಾರಿಗೆ ಹತ್ತಿಸಿ ರಾಂಪುರ ಸಾಕಾನೆ ಶಿಬಿರಕ್ಕೆ ಸಾಗಿಸಲಾಯಿತು.

ಈ ಕಾರ್ಯಾಚರಣೆಯಲ್ಲಿ ಹುಲಿ ಯೋಜನೆಯ ನಿರ್ದೇಶಕ ಡಾ.ರಮೇಶ್ ಕುಮಾರ್, ಎಸಿಎಫ್‌ಗಳಾದ ನವೀನ್, ರವೀಂದ್ರ, ಆರ್.ಎಫ್.ಒ.ಗಳಾದ ಡಿ.ಶ್ರೀನಿವಾಸ ನಾಯ್ಕ, ಎಚ್.ಎಂ.ಮಂಜುನಾಥ್, ಎನ್.ಪಿ.ನವೀನ್ ಕುಮಾರ್, ದೀಪಾ ಹಾಗೂ ಎಲ್ಲಾ ವಲಯಗಳ ಉಪವಲಯಾರಣ್ಯಾಧಿಕಾರಿಗಳು ಭಾಗವಹಿಸಿದ್ದರು.

ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಬಂಡೀಪುರ ಹುಲಿಯೋಜನೆ ನಿರ್ದೇಶಕ ಡಾ.ರಮೇಶ್‌ಕುಮಾರ್, ಕಾಡಂಚಿನ ಗ್ರಾಮಸ್ಥರಿಗೆ ತೊಂದರೆ ನೀಡುತ್ತಿದ್ದ ಪುಂಡಾನೆ ಸೆರೆ ಅರಣ್ಯ ಇಲಾಖೆಗೆ ಭಾರೀ ಸವಾಲಾಗಿತ್ತು. ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಎಸ್.ಟಿಪಿಎಫ್ ಸಿಬ್ಬಂದಿಗೆ ದಕ್ಷತೆಯಿಂದ ಕಾರ್ಯನಿರ್ವಹಿಸಿದರು. 45 ರಿಂದ 50 ವರ್ಷ ವಯಸ್ಸಿನ ಪ್ರಾಯದ ಈ ಗಂಡು ಆನೆ ದಷ್ಟಪುಷ್ಟವಾಗಿದ್ದು ಸಾಕಾನೆ ಶಿಬಿರದಲ್ಲಿ ತರಬೇತಿ ನೀಡಲಾಗುವುದು ಎಂದರು.

ಗಿರಿಜಾ ಕಲ್ಯಾಣ ಮಹೋತ್ಸವ ಆರಂಭ

● ತಳಿರು–ತೋರಣಗಳಿಂದ ಕಂಗೊಳಿಸುತ್ತಿರುವ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ● ವಿಶೇಷ ಪೂಜಾ– ಕೈಂಕರ್ಯ



ಚಾಮರಾಜನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣೋತ್ಸವದ ಅಂಗವಾಗಿ ಬುಧವಾರ ವರಪೂಜೆ ನಡೆಯಿತು.

ಚಾಮರಾಜನಗರ, ಜೂ.7– ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಬುಧವಾರದಿಂದ ಗಿರಿಜಾ ಕಲ್ಯಾಣ ಮಹೋತ್ಸವ ವಿಜೃಂಭಣೆಯಿಂದ ಆರಂಭವಾಯಿತು.

ಶ್ರೀ ಕೆಂಪನಂಜಾಂಬಾ ಅಮ್ಮನವರ ಸಮೇತ ಶ್ರೀಚಾಮರಾಜೇಶ್ವರಸ್ವಾಮಿ ಅವರಿಗೆ ಗಿರಿಜಾ ಕಲ್ಯಾಣ ಮಹೋತ್ಸವ ಇದೇ 12ರವರೆಗೆ ಸಕಲ ಪೂಜಾ ವಿಧಿ–ವಿಧಾನ ಹಾಗೂ ಸಂಪ್ರದಾಯದಿಂದ ನಡೆಯಲಿದ್ದು, ದೇವಾಲಯದೆಲ್ಲೆಡೆ ಸಂಭ್ರಮ ಮನೆ ಮಾಡಿದೆ.

ಬೆಳಗ್ಗೆ 6 ಗಂಟೆಗೆ ಅನುಜ್ಞಾ ಪೂರ್ವಕ ಎಣ್ಣೆ ಅರಿಶಿನ ಪ್ರಧಾನ ನಡೆಯಿತು. ಬಳಿಕ, ರಾತ್ರಿ 8 ಗಂಟೆಗೆ ವರಪೂಜಾ ಮಹೋತ್ಸವ ಕಾರ್ಯಕ್ರಮ ನಡೆಯಿತು. ಗುರುವಾರ ಬೆಳಗ್ಗೆ 10 ಗಂಟೆಗೆ ಅಂಕುರಾರ್ಪಣ ಪೂರ್ವಕ ಕನ್ನಡಿ ಕಲಶ ತರುವುದು. ನಂತರ ಮಂಗಳಸ್ನಾನ ಬೇಡು ನಾಂದಿ ನಡೆದು ಗ್ರಹಯಜ್ಞ ಪ್ರಾರಂಭವಾಗಿ ಸಂಜೆ 5 ಗಂಟೆಗೆ ಕಾಶಿಯಾತ್ರೆ ಮಹೋತ್ಸವವು ಬೆಳೆಯುತ್ತದೆ. ಆ ನಂತರ ರಾತ್ರಿ 8.10 ರಿಂದ 9 ಗಂಟೆಯವರೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಅಕ್ಷತಾರೋಪಣೆ, ಧಾರಾಮಹೋತ್ಸವ, ಪ್ರಧಾನ ಹೋಮ, ಮಹಾಮಂಗಳಾರತಿ ಜರುಗಲಿದೆ.

ಜೂ.9ರ ಶುಕ್ರವಾರ ಪ್ರಾತಃಕಾಲ ಔಪಾಸನೆ ಉರುಟಣೆ ಉಯ್ಯಾಲೋತ್ಸವವು, ರಾತ್ರಿ ಔಪಾಸನೆ ಉಯ್ಯಾಲೋತ್ಸವವು ನಡೆಯಲಿದೆ. ಜೂನ್ 10ರ ಶನಿವಾರ ಪ್ರಾತಃಕಾಲ ಔಪಾಸನೆ ಉರುಟಣೆ ಉಯ್ಯಾಲೋತ್ಸವವು ರಾತ್ರಿ ಔಪಾಸನೆ ಪಾಕಿನಿ ಮಹೋತ್ಸವವು ಜರುಗಲಿದೆ.

ಜೂನ್ 11ರ ಭಾನುವಾರದಂದು ಪ್ರಾತಃಕಾಲ ಔಪಾಸನೆ ಉರುಟಣೆ ಉಯ್ಯಾಲೋತ್ಸವವು ರಾತ್ರಿ ಔಪಾಸನೆ ಶೇಷಹೋಮ, ನಾಕಬಲಿ, ಹೊಳಲು ಸುತ್ತುವುದು ಗಜಾರೋಹಣ ಪೂಜೆ, ಗೃಹ ಪ್ರವೇಶ ಮಹೋತ್ಸವ ಹಾಗೂ 12ರ ಸೋಮವಾರ ಪ್ರಾತಃಕಾಲ ದೇವತಾ ಉದ್ವಾಸನೆ, ವಿವಾಹ ದೀಕ್ಷಾ ವಿಸರ್ಜನೆ ಅನಂತರ ಸ್ಥಂಭ ಪೂಜಾ ರಾತ್ರಿ ಪುಷ್ಪಾಂದೋಳಿಕೋತ್ಸವ, ಶಯನೋತ್ಸವವೂ ನಡೆಯಲಿದೆ. ಗಿರಿಜಾ ಕಲ್ಯಾಣ ಮಹೋತ್ಸವದ ದೇವಸ್ಥಾನದ ಆವರಣದಲ್ಲಿ ಸಂಗೀತ, ಹರಿಕಥೆ ಇತ್ಯಾದಿ ಕಾರ್ಯಕ್ರಮ ನಡೆಯಿತು.

ವಿವಿಧ ಸಾಮಾಜಿಕ ಭದ್ರತಾ ಪಿಂಚಣಿಗಳ ನವೀಕರಣ

ಚಾಮರಾಜನಗರ, ಜೂ.7– ವಿವಿಧ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ವಾರ್ಷಿಕ ಪರಿಶೀಲನೆ ಸಂಬಂಧ ನಗರ, ವಾರ್ಡಿನ, ಗ್ರಾಮಾಂತರ ಫಲಾನುಭವಿಗಳ ವಾರ್ಷಿಕ ಪರಿಶೀಲನೆಯನ್ನು ನವೋದಯ ತಂತ್ರಾಂಶದ ಮೂಲಕ ಕೈಗೊಳ್ಳಲಾಗಿದೆ.

ಫಲಾನುಭವಿಗಳು ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ಸಂಖ್ಯೆಯ ಜೆರಾಕ್ಸ್ ಪ್ರತಿಗಳೊಂದಿಗೆ ಸಂಬಂಧಪಟ್ಟ ಗ್ರಾಮ ಆಡಳಿತ ಅಧಿಕಾರಿಗಳನ್ನು ಸಂಪರ್ಕಿಸಿ ಜೂನ್ 14 ರೊಳಗೆ ನೀಡಿ ಪಿಂಚಣಿಯನ್ನು ನವೀಕರಿಸಿಕೊಳ್ಳಬೇಕು. ತಪ್ಪಿದ್ದಲ್ಲಿ ಪಿಂಚಣಿಯು ರದ್ದಾಗುವುದು ಎಂದು ಚಾಮರಾಜನಗರ ತಾಲೂಕಿನ ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲಾ ಮಕ್ಕಳಿಂದ ಪರಿಸರ ಜಾಗೃತಿ ಜಾಥಾ



ಚಾಮರಾಜನಗರ, ಜೂ.7– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಗರದ ಸಿದ್ದಾರ್ಥ ಬಡಾವಣೆಯಲ್ಲಿರುವ ಸಂತ ಜೋಸೆಫ್ ಶಾಲೆಯ ಮಕ್ಕಳಿಂದ ಪರಿಸರ ಜಾಗೃತಿ ಜಾಥಾ ನಡೆಯಿತು.

ಶಾಲಾವರಣದಿಂದ ಆರಂಭವಾದ ಜಾಥಾ ಕಾನ್ವೆಂಟ್ ರಸ್ತೆ, ಬಿ.ರಾಚಯ್ಯ ಜೋಡಿರಸ್ತೆ, ರೋಟರಿ ಭವನ ರಸ್ತೆ ಮೂಲಕ ಬಡಾವಣೆಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸಿದರು. ನೂರಾರು ವಿದ್ಯಾರ್ಥಿಗಳು, ಶಾಲೆಯ ಶಿಕ್ಷಕರು ಭಾಗವಹಿಸಿದ್ದರು. ಜಾಥಾಕ್ಕೆ ಚಾಲನೆ ನೀಡಿದ ಪ್ರೌಢಶಾಲೆಯ ಮುಖ್ಯಶಿಕ್ಷಕಿ ಮೇರಿ ಕ್ರಿಸ್ಟಿನ್ ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಪ್ರತಿನಿತ್ಯ ಪರಿಸರ ಸಂರಕ್ಷಣೆ ಮಾಡಬೇಕು. ಶಾಲಾ ಮಕ್ಕಳು ಕೂಡ ಓದಿನ ಜೊತೆಯಲ್ಲಿ ತಮ್ಮ ಮನೆಯ ಮುಂಭಾಗದಲ್ಲಿ ಗಿಡಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ಕಾಳಜಿ ವಹಿಸಬೇಕು ಎಂದರು. ಜಾಥಾದಲ್ಲಿ ಮುಖ್ಯ ಶಿಕ್ಷಕರಾದ ರೀಟಾ ಜೈನ್ ಶಾಂತಿ ರೋಸ್ ಹಾಗೂ ಸಹ ಶಿಕ್ಷಕರು ಭಾಗವಹಿಸಿದ್ದರು.

ಜೂ.12 ರಿಂದ ಜಿಲ್ಲೆಯಲ್ಲಿ ನಕಲಿ ವೈದ್ಯರ ಹಾವಳಿ ತಡೆಗೆ ಆಗ್ರಹಿಸಿ ನಿರಂತರ ಹೋರಾಟ



ಚಾಮರಾಜನಗರ, ಜೂ. 7– ಜಿಲ್ಲೆಯಲ್ಲಿ ನಕಲಿ ವೈದ್ಯರ ಹಾವಳಿ ನಿಯಂತ್ರಣ ಮಾಡುವಂತೆ ಒತ್ತಾಯಿಸಿ ಜೂ. 12ರಿಂದ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು. ನಕಲಿ ವೈದ್ಯರ ಹಾವಳಿ ನಿಯಂತ್ರಣಗೊಳ್ಳುವವರೆಗೂ ನಿರಂತರ ಹೋರಾಟ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಮೂಲಭೂತ ಹಕ್ಕುಗಳ ರಕ್ಷಣೆ ಹಾಗೂ ಭ್ರಷ್ಟಾಚಾರ ನಿರ್ಮೂಲನಾ ಸಮಿತಿ ರಾಜ್ಯಾಧ್ಯಕ್ಷೆ ಲಕ್ಷ್ಮೀ ಮಹೇಶ್ ಎಚ್ಚರಿಸಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಾದ್ಯಂತ ನೂರಕ್ಕೂ ಹೆಚ್ಚು ನಕಲಿ ವೈದ್ಯರು ಕ್ಲಿನಿಕ್ ನಡೆಸುತ್ತಿದ್ದು, ಇದರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಅಧಿಕಾರಿಗಳೇ ಅವರ ರಕ್ಷಣೆ ನಿಂತಿದ್ದಾರೆ ಎಂದು ಆರೋಪಿಸಿದ್ದಾರೆ.

ತಮಿಳುನಾಡು, ಕೇರಳ ರಾಜ್ಯಗಳಿಂದ ಜಿಲ್ಲೆಗೆ ಬಂದು ವೈದ್ಯರಲ್ಲದ, ಯಾವುದೇ ಅರ್ಹತೆ ಇಲ್ಲದ ವ್ಯಕ್ತಿಗಳು ಗ್ರಾಮೀಣ ಪ್ರದೇಶದ ಅಮಾಯಕ ಜನರನ್ನು ಗುರಿಯಾಗಿಸಿಕೊಂಡು ತಾಲೂಕಿನ ಚಂದಕವಾಡಿ, ನಾಗವಳ್ಳಿ, ವೆಂಕಟಯ್ಯನಛತ್ರ, ಹನೂರು ತಾಲೂಕಿನ ಕೌದಳ್ಳಿ, ಅಜ್ಜೀಪುರ ಇತರ ಕಡೆಗಳಲ್ಲಿ ನಕಲಿ ಕ್ಲಿನಿಕ್‌ಗಳನ್ನು ತೆರೆದು 8, 9 ನೇ ತರಗತಿ ವ್ಯಾಸಂಗ ಮಾಡಿರುವವರೂ ಚಿಕಿತ್ಸೆ ನೀಡುತ್ತಿದ್ದಾರೆ. ಚಳಿ, ಜ್ವರಕ್ಕೂ ಡಬಲ್ ಡೋಸ್ ನೀಡುವ ಮೂಲಕ ಬಡಜನರ ಜೀವನದ ಜೊತೆ ಚೆಲ್ಲಾಟ ಆಡುತ್ತಿದ್ದಾರೆ ಇವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ದೂರು ನೀಡಿದ್ದರೂ ಕೂಡ ಯಾವುದೇ ಕ್ರಮ ಕೈಗೊಳ್ಳದೆ ನಕಲಿ ವೈದ್ಯರಿಂದ ಕಮೀಷನ್ ಪಡೆದು ಅವರ ಪರವಾಗಿ ನಿಂತಿದ್ದಾರೆ ಎಂದು ಆರೋಪಿಸಿದರು.

ದೂರು ನೀಡಿದ್ದರೂ ಕ್ರಮ ಕೈಗೊಳ್ಳದ ಡಿಎಚ್‌ಓ: ಜಿಲ್ಲೆಯಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿದೆ ಅದರ ವಿರುದ್ಧ ಕ್ರಮಗೊಳ್ಳಬೇಕು ಎಂದು ದೂರು ನೀಡಿದ್ದರೂ ಕ್ರಮಕೈಗೊಳ್ಳುವಲ್ಲಿ ಡಿಎಚ್‌ಓ ವಿಫಲರಾಗಿದ್ದಾರೆ ಎಂದು ಲಕ್ಷ್ಮೀಮಹೇಶ್ ಆರೋಪಿಸಿದರು.

ನಕಲಿ ವೈದ್ಯರ ಪರ ನಿಂತಿರುವ ಡಿಎಚ್‌ಓ ಅವರನ್ನು ಯಾವುದೇ ಕಾರಣಕ್ಕೂ ಸರ್ಕಾರ, ಜಿಲ್ಲಾಧಿಕಾರಿಗಳು ವರ್ಗಾವಣೆ ಮಾಡಬಾರದು. ನಕಲಿ ವೈದ್ಯರ ಕಮೀಷನ್ ಪಡೆಯುತ್ತಿರುವ ಆರೋಪದಿಂದ ತಪ್ಪಿಸಿಕೊಳ್ಳಲು ಅವರು ಬೇರೆಡೆಗೆ ವರ್ಗಾವಣೆಗೆ ಪ್ರಯತ್ನ ಮಾಡುತ್ತಿದ್ದಾರೆ. ಅವರ ವಿರುದ್ಧ ಸೂಕ್ತ ತನಿಖೆ ನಡೆಸಿ ಅವರನ್ನು ಅಮಾನತ್ತು ಪಡಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಸರಿಯಾಗಿ ಸಿಗುತ್ತಿಲ್ಲ. ಸಣ್ಣಪುಟ್ಟ ರೋಗಗಳಿಗೆ ಎಕ್ಸರೇ, ಔಷಧಿಗಳಿಗೆ ಚೀಟಿ ಬರೆಯುತ್ತಿದ್ದಾರೆ. ಮೆಡಿಕಲ್ ಅಂಗಡಿಗಳ ಮಾಲೀಕರ ಲಾಭಕ್ಕಾಗಿ ನಕಲಿ ಕ್ಲಿನಿಕ್‌ಗಳು ತಲೆ ಎತ್ತಿವೆ. ಕೆಲವು ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದೇ ಅನುಭವ, ಅರ್ಹತೆ ಇಲ್ಲದ ಆಶಾ ಕಾರ್ಯಕರ್ತರನ್ನು ನರ್ಸ್‌ಗಳಾಗಿ ನೇಮಕ ಮಾಡಿ ಚಿಕಿತ್ಸೆ ಕೊಡಿಸುತ್ತಿದ್ದಾರೆ. ಇದರಿಂದ ರೋಗಿಗಳ ಮೇಲೆ ಅಡ್ಡಪರಿಣಾಮ ಬೀರಲಿದೆ ಆದರಿಂದ ಜಿಲ್ಲಾಧಿಕಾರಿಗಳು ಇದರ ವಿರುದ್ಧವೂ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಮೂಲಭೂತ ಹಕ್ಕುಗಳ ರಕ್ಷಣೆ ಹಾಗೂ ಭ್ರಷ್ಟಾಚಾರ ನಿರ್ಮೂಲನಾ ಸಮಿತಿ ರಾಜ್ಯ ಗೌರವಾಧ್ಯಕ್ಷ ಗುರುಸ್ವಾಮಪ್ಪ, ಉಪಾಧ್ಯಕ್ಷ ಶ್ರೀಕಂಠಪ್ಪ, ಪ್ರಧಾನ ಕಾರ್ಯದರ್ಶಿ ಸತೀಶ್‌ಕುಮಾರ್ ಹಾಜರಿದ್ದರು.

ವಾರ್ಷಿಕ ಸನ್ಮಾನ ಸಮಾರಂಭ; ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಮೈಸೂರು, ಜೂ.7– ಮೈಸೂರು ಜಿಲ್ಲಾ ಭಾವಸಾರ ಕ್ಷತ್ರಿಯ ಪದವೀಧರರ ಸಂಘದ ವತಿಯಿಂದ ನಗರದ ಹುಣಸೂರು ರಸ್ತೆಯ ವಿಜಯನಗರದ 3 ನೇ ಹಂತದ 'ಶ್ರೀ ವಿಠ್ಠಲ ರುಕ್ಮಿಣಿ ಕನ್‌ವೆನ್ಷನ್ ಹಾಲ್'ನಲ್ಲಿ ಜು.2ರಂದು 41ನೇ ವಾರ್ಷಿಕ ಸನ್ಮಾನ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ ಸಂಬಂಧ 2020–21 ಮತ್ತು 2021–22 ನೇ ಸಾಲಿನ ಏಪ್ರಿಲ್/ಮೇ ತಿಂಗಳಲ್ಲಿ ಪದವಿ ಹಾಗೂ 2022–23ರಲ್ಲಿ ಡಿಪ್ಲೊಮಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಂದ ವಿದ್ಯಾರ್ಥಿ ವೇತನಕ್ಕೆ ಹಾಗೂ 2022–23ರ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಶೇ.85 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಪಿ.ಎ.ಮಂಜುನಾಥ್ ಪತಂ–9880718980 ಅಥವಾ ಕೆ.ಜಿ. ವೆಂಕಟೇಶ ರಾವ್ ಕುತ್ನಿಕರ್– 9342342440 ನಂಬರ್‌ಗಳಿಗೆ ಸಂಪರ್ಕಿಸಬಹುದು.

ವಿದ್ಯಾರ್ಥಿನಿ ನೇಣು ಬಿಗಿದು ಆತ್ಮಹತ್ಯೆ



ಮೈಸೂರು, ಜೂ.7(ಸಿಎನ್)– ವಿದ್ಯಾರ್ಥಿನಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಮೈಸೂರಿನ ಶ್ರೀರಾಂಪುರದಲ್ಲಿ ಬುಧವಾರ ನಡೆದಿದೆ. ತಮಿಳುನಾಡಿನ ನೀಲಗಿರಿ ಜಿಲ್ಲೆಯ ಪಂತನೂರು ತಾಲೂಕಿನ ಕುಪ್ಪಾಟಿಯ ಯುವತಿ ಜಿಷ್ಣ(20) ಆತ್ಮಹತ್ಯೆಗೆ ಶರಣಾದ ಯುವತಿ. ಶ್ರೀರಾಂಪುರದಲ್ಲಿರುವ ಖಾಸಗಿ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್(ಬಿಸಿಎ) ದ್ವಿತೀಯ ವರ್ಷದ ವ್ಯಾಸಂಗ ಮಾಡುತ್ತಿದ್ದ ಯುವತಿ, ವಿದ್ಯಾರ್ಥಿನಿಲಯದ ಕೊಠಡಿಯೊಂದರಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪರೀಕ್ಷೆಯಲ್ಲಿ ಅನುತ್ತೀರ್ಣಳಾದ ಕಾರಣದಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಹಾಸ್ಟೆಲ್‌ನ ಆಕೆಯ ಸ್ನೇಹಿತೆಯರು ಹೇಳಿದ್ದಾರೆ. ಆದರೆ ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಉಚಿತ ವಿದ್ಯುತ್ ಯೋಜನೆ ಫಲ

10 ಲಕ್ಷ ನೋಂದಣಿಯ ಧಾರಣ ಸಾಮರ್ಥ್ಯ ನಿಭಾಯಿಸಲು ಅನುಕೂಲವಾಗುವಂತೆ ಸರ್ವರ್ ಅನ್ನು ಮೇಲ್ದರ್ಜೆಗೇರಿಸಲಾಗುವುದು ಎಂದು ತಿಳಿಸಿದರು. ನೋಂದಣಿಗೆ ಫಲಾನುಭವಿಯ ಆಧಾರ್ ಸಂಖ್ಯೆ ಮತ್ತು ವಿದ್ಯುತ್ ಸಂಪರ್ಕದ ಆರ್‌ಆರ್ ನಂಬರ್ ಕಡ್ಡಾಯವಾಗಿದೆ. ಸ್ವಂತ ಮನೆಯಿರುವವರ ವಿಳಾಸ ಆಧಾರ್‌ನೊಂದಿಗೆ ಹಂಚಿಕೆಯಾಗುವುದರಿಂದ ಹೆಚ್ಚಿನ ದಾಖಲಾತಿಗಳ ಅಗತ್ಯ ಇರುವುದಿಲ್ಲ.

ಬಾಡಿಗೆದಾರರು ಬಾಡಿಗೆ ಕರಾರು, ಭೋಗ್ಯ ಕರಾರು ಸೇರಿದಂತೆ ಸೂಕ್ತ ದಾಖಲಾತಿಗಳನ್ನು ಸಲ್ಲಿಸಬೇಕಿದೆ. ಒಂದು ವೇಳೆ ಬಾಡಿಗೆ ಅಥವಾ ಭೋಗ್ಯ ಕರಾರು ಇಲ್ಲದೇ ಹೋದರೆ ಅದೇ ಆರ್. ಆರ್ ಸಂಖ್ಯೆಯ ಮನೆಯಲ್ಲಿ ವಾಸವಿರುವುದನ್ನು ದೃಢಪಡಿಸಲು ಚಾಲನಾ ಪರವಾನಗಿ, ಮತದಾರರ ಗುರುತಿನ ಚೀಟಿ, ಪಾಸ್‌ಪೋರ್ಟ್ ಸೇರಿದಂತೆ ಯಾವುದಾದರೂ ವಾಸ ದೃಢೀಕರಣ ದಾಖಲೆಯನ್ನು ಒದಗಿಸಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದರು. ಜೂನ್ 15ರಿಂದ ಜುಲೈ 15ರೊಳಗೆ ಗ್ರಾಹಕರು ನೋಂದಣಿ ಮಾಡಿಕೊಳ್ಳಬಹುದು. ಸ್ವಂತ ಲ್ಯಾಪ್‌ಟಾಪ್, ಕಂಪ್ಯೂಟರ್, ಮೊಬೈಲ್ ಬಳಸಬಹುದು. ಒಂದು ವೇಳೆ ತಾಂತ್ರಿಕತೆಯ ಅನುಭವವಿಲ್ಲದಿದ್ದವರು ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳಲ್ಲಿ ನೋಂದಾಯಿಸಿಕೊಳ್ಳಬೇಕು. ಇದಕ್ಕಾಗಿ ಬೆಸ್ಕಾಂನಿಂದ ವಿಶೇಷ ಶಿಬಿರಗಳನ್ನು ಕೂಡ ಆಯೋಜನೆ ಮಾಡಲಾಗುತ್ತದೆ.

ನೋಂದಣಿ ಪೂರ್ಣಗೊಂಡ ಬಳಿಕ ಎಸ್‌ಎಂಎಸ್ ಮತ್ತು ಇ–ಮೇಲ್ ಮೂಲಕ ಗ್ರಾಹಕರಿಗೆ ಸಂದೇಶ ರವಾನೆಯಾಗುತ್ತದೆ ಎಂದು ತಿಳಿಸಿದರು.

ಸರ್ಕಾರ ದಾಖಲಾತಿಯ ನೆಪದಲ್ಲಿ ಜನರು ಸೌಲಭ್ಯ ವಂಚಿತರಾಗುವುದನ್ನು ಬಯಸುವುದಿಲ್ಲ. ಆದಷ್ಟು ಸರಳ ವ್ಯವಸ್ಥೆಯನ್ನು ರೂಪಿಸಲು ಕ್ರಮ ಕೈಗೊಳ್ಳುತ್ತಿದೆ.

ಹೊಸ ಸಂಪರ್ಕ ಪಡೆಯುವವರು ಮತ್ತು ಇತ್ತೀಚೆಗಷ್ಟೇ ಮನೆ ಬಾಡಿಗೆಗೆ ಬಂದವರಿಗೆ ವಾರ್ಷಿಕ ಸರಾಸರಿಯನ್ನು ಲೆಕ್ಕ ಹಾಕುವ ಬಗ್ಗೆ ಸ್ಪಷ್ಟತೆ ಇಲ್ಲ. ಹೀಗಾಗಿ ಮುಖ್ಯಮಂತ್ರಿಯವರ ಜೊತೆ ಚರ್ಚಿಸಿ ಒಂದೆರಡು ದಿನಗಳಲ್ಲೇ ಸ್ಪಷ್ಟ ನಿರ್ಧಾರವನ್ನು ಪ್ರಕಟಿಸುವುದಾಗಿ ತಿಳಿಸಿದರು. ಸಂಪುಟ ಸಭೆಯ ನಿರ್ಣಯದಂತೆ ವಾರ್ಷಿಕ ಬಳಕೆಯ ಸರಾಸರಿಯೊಂದಿಗೆ ಶೇ.10 ರಷ್ಟು ವಿದ್ಯುತ್ ಅನ್ನು ಹೆಚ್ಚು ಬಳಕೆಗೆ ಅನುಮತಿಸಿ ಯೋಜನೆ ಜಾರಿಗೊಳಿಸಲಾಗುತ್ತಿದೆ. ಒಂದು ವೇಳೆ ಮುಂದಿನ 12 ತಿಂಗಳೊಳಗೆ 200 ಯೂನಿಟ್‌ಗಿಂತ ಕಡಿಮೆ ವಿದ್ಯುತ್ ಬಳಕೆ ಮಾಡಿದವರಾದರೆ ಅವರಿಗೆ ಮುಂದಿನ ವರ್ಷದಿಂದ ಸೌಲಭ್ಯ ದೊರೆಯಲಿದೆ ಎಂದು ತಿಳಿಸಿದರು.

ಗೃಹಜ್ಯೋತಿ ಯೋಜನೆಯಡಿ ಈಗಾಗಲೇ 200 ಯೂನಿಟ್‌ವರೆಗೆ ಶುಲ್ಕ ವಿನಾಯಿತಿ ನೀಡುವಾಗಲೇ ಫಿಕ್ಸೆಡ್ ಚಾರ್ಜಸ್ ಅನ್ನು ಮನ್ನಾ ಮಾಡಲಾಗಿದೆ. ಹಾಗಾಗಿ ಹೆಚ್ಚುವರಿ ಯೂನಿಟ್‌ಗೆ ಮತ್ತೆ ಫಿಕ್ಸೆಡ್ ಚಾರ್ಜ್ ವಸೂಲಿ ಮಾಡಲಾಗುವುದಿಲ್ಲ. ಆದರೆ ಹೆಚ್ಚುವರಿ ಯೂನಿಟ್‌ಗಳಿಗೆ ಶೇ.9ರಷ್ಟು ಬಡ್ಡಿ ಪಾವತಿಸಬೇಕಾಗುತ್ತದೆ ಎಂದು ಹೇಳಿದರು.

ಜಿಎಸ್‌ಟಿ, ತೆರಿಗೆ ಪಾವತಿದಾರರಿಗೆ 'ನೋ ಗ್ಯಾರಂಟಿ'

ಮತದಾರರ ಗುರುತಿನ ಚೀಟಿ, ಬ್ಯಾಂಕ್ ಖಾತೆ, ಆಧಾರ್ ಕಾರ್ಡ್ ಹೊಂದಿರಬೇಕು. ಬೇರೆಯವರ ಬ್ಯಾಂಕ್ ಖಾತೆಗೆ ಹಣ ನೀಡಲಾಗುವುದಿಲ್ಲ. ಮನೆ ಯಜಮಾನಿ ಯಾರು ಎಂದು ಮನೆಯವರೇ ತೀರ್ಮಾನ ಮಾಡಬೇಕು. ಅವರ ಮನೆ ವಿಚಾರದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ. ಮತದಾರರ ಗುರುತಿನ ಚೀಟಿ, ಎಪಿಎಲ್, ಬಿಪಿಎಲ್ ಕಾರ್ಡ್‌ಗಳಲ್ಲಿ ಯಾವ ಮನೆಯಲ್ಲಿ ಯಾರೆಲ್ಲಾ ಇದ್ದಾರೆ ಎಂದು ಮಾಹಿತಿ ಇದೆ. ಬಿಜೆಪಿಯವರು ಎಲ್ಲರ ಖಾತೆಗೆ 15 ಲಕ್ಷ ಹಾಕಿಸಲಿ. ಆ ಬಗ್ಗೆ ಯಾಕೆ ಯಾರೂ ಕೇಳುತ್ತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ ಮಾಡುವವರನ್ನು ಬೇಡ ಎನ್ನಲು ಸಾಧ್ಯವೇ ಎಂದು ಪ್ರಶ್ನಿಸಿದರು. ವಿದ್ಯುತ್ ಗ್ಯಾರಂಟಿ ವಿಚಾರದಲ್ಲಿ ಬಾಡಿಗೆ ಮನೆಯವರ ಬಗ್ಗೆ ಅಧಿಕಾರಿಗಳು ಒಂದು ಆಯಾಮ ನೀಡಿದ್ದರು. ಆದರೆ ನಾವು ಆ ಬಗ್ಗೆ ಸ್ಪಷ್ಟನೆ ನೀಡಿದ್ದೇವೆ ಎಂದು ಹೇಳಿದರು.

ಡಿನೋಟಿಫಿಕೇಷನ್ ಕೇಸ್ ರದ್ದುಪಡಿಸಿದ ಹೈಕೋರ್ಟ್

ರದ್ದುಪಡಿಸಿತ್ತು. ಹಿಂದಿನ ತೀರ್ಪು ಆಧರಿಸಿ 19 ಡಿಸೆಂಬರ್ 2015ರ ಕೇಸ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ. **2013ರಲ್ಲಿ ನ್ಯಾಯಾಲಯಕ್ಕೆ ಖಾಸಗಿ ದೂರು:** 2006–07ರಲ್ಲಿ ಉಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಯಡಿಯೂರಪ್ಪ ಅವರು ಕಾನೂನಿಗೆ ವಿರುದ್ಧವಾಗಿ ಬೆಳ್ಳಂದೂರು ಮತ್ತು ದೇವರಬೀಸನಹಳ್ಳಿ ಗ್ರಾಮಗಳಲ್ಲಿ ಎಂಟು ಎಕರೆ ಹತ್ತು ಗುಂಟೆ ಜಮೀನನ್ನು ಡಿನೋಟಿಫೈ ಮಾಡಿದ್ದಾರೆ ಎಂದು ಆರೋಪಿಸಿ ವಾಸುದೇವ ರೆಡ್ಡಿ ಎಂಬುವರು 2013ರಲ್ಲಿ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು. ಬಳಿಕ ಕೋರ್ಟ್ ಆದೇಶದಂತೆ 2015ರ ಫೆಬ್ರವರಿ 21ರಂದು ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಿದ್ದರು. ನಂತರ ತನಿಖೆಯಲ್ಲಿ ಯಾವುದೇ ಪ್ರಗತಿ ಕಂಡುಬಂದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಕರಣ ರದ್ದು ಮಾಡುವಂತೆ ಕೋರಿ ಯಡಿಯೂರಪ್ಪ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಅದನ್ನು 2020ರಲ್ಲಿ ಹೈಕೋರ್ಟ್ ವಜಾ ಮಾಡಿತ್ತು. ತನಿಖೆಯನ್ನು ವಿಳಂಬಗೊಳಿಸುತ್ತಿರುವುದಕ್ಕೆ ಪೊಲೀಸರನ್ನು ಹೈಕೋರ್ಟ್ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ಅವರು ತರಾಟೆಗೆ ತೆಗೆದುಕೊಂಡಿದ್ದರು. ತನಿಖೆಯನ್ನು ಉದ್ದೇಶಪೂರ್ವಕವಾಗಿ ತಡ ಮಾಡಲಾಗುತ್ತಿದೆ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದರು.

ಸುಪ್ರೀಂಕೋರ್ಟ್ ಮೊರೆ: ಬೆಳ್ಳಂದೂರು ಮತ್ತು ದೇವರಬೀಸನಹಳ್ಳಿ ಡಿನೋಟಿಫೈ ಪ್ರಕರಣದ ತನಿಖೆ ರದ್ದುಪಡಿಸುವಂತೆ ಕೋರಿ ಯಡಿಯೂರಪ್ಪ ಅವರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಅ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಮುಂದಿನ ವಿಚಾರಣೆಯನ್ನು ಫೆ. 14ಕ್ಕೆ ಮುಂದೂಡಿತ್ತು.

ಕೊಡಗಿಗೆ ಆಗಮಿಸಿದ ಎನ್‌ಡಿಆರ್‌ಎಫ್ ತಂಡ

ಮಾಡಲಾಗಿತ್ತು. ಜೂನ್ ತಿಂಗಳಲ್ಲಿ ಜಿಲ್ಲೆಯಲ್ಲಿ ನಿಯೋಜನೆಯಾಗುವ ಈ ತಂಡ ಮಳೆಗಾಲ ಮುಕ್ತಾಯಗೊಂಡ ಬಳಿಕ ಜಿಲ್ಲೆಯಿಂದ ನಿರ್ಗಮಿಸಲಿದೆ. ಪ್ರಾಕೃತಿಕ ವಿಕೋಪ ಸಂದರ್ಭ ಈ ತಂಡದೊಂದಿಗೆ ಪೊಲೀಸ್, ಅಗ್ನಿಶಾಮಕ ದಳ, ಹೋಂ ಗಾರ್ಡ್ಸ್, ಕಂದಾಯ, ಸ್ಥಳೀಯ ಗ್ರಾಪಂ ಪಿಡಿಓಗಳು, ದುಬಾರೆಯ ರ್‍ಯಾಫ್ಟರ್ ಗಳು ಹಾಗೂ ಈಗಾಗಲೇ ಜಿಲ್ಲಾಡಳಿತದಿಂದ ಗುರುತಿಸಲ್ಪಟ್ಟಿರುವ ವಾಹನಗಳು ಒಂದು ತಂಡವಾಗಿ ರಕ್ಷಣಾ ಕಾರ್ಯಾಚರಣೆ ನಡೆಸಲಿವೆ. ಎರಡು ಲಾರಿಗಳಲ್ಲಿ ಮಡಿಕೇರಿಗೆ ಆಗಮಿಸಿರುವ ಎನ್.ಡಿ.ಆರ್.ಎಫ್ ತಂಡ ಪ್ರವಾಹ, ಭೂ ಕುಸಿತ ಸೇರಿದಂತೆ ಎಲ್ಲಾ ರೀತಿಯ ಪ್ರಾಕೃತಿಕ ವಿಕೋಪಗಳ ನಿರ್ವಹಿಸುವ ಪರಿಣಿತಿ ಪಡೆದಿದೆ. ಮಾತ್ರವಲ್ಲದೇ ಅಪಾಯ ಎದುರಾಗುವ ಸಂದರ್ಭ ಜನ, ಜಾನುವಾರು ರಕ್ಷಣೆಗೆ ಅಗತ್ಯವಾಗಿರುವಂತಹ ರಕ್ಷಣಾ ಪರಿಕರಗಳನ್ನು ಹೊತ್ತು ತಂದಿದ್ದಾರೆ. ಲೈಫ್ ಜಾಕೆಟ್‌ಗಳು, ಮೋಟಾರ್ ಬೋಟ್‌ಗಳು, ರ್‍ಯಾಫ್ಟ್‌ಗಳು, ಮರ ಕತ್ತರಿಸುವ ಅತ್ಯಾಧುನಿಕ ಯಂತ್ರಗಳು, ಹಗ್ಗಗಳು, ಸರ್ಚ್‌ಲೈಟ್‌ಗಳು, ಕಟ್ಟಡ ಕುಸಿತದ ಸಂದರ್ಭ ಬಳಸುವ ವಿವಿಧ ಬಗೆಯ ಕಟ್ಟರ್‌ಗಳು, ಆಕ್ಸಿಜನ್ ಸಿಲಿಂಡರ್‌ಗಳು, ಸ್ಟ್ರೆಚ್ಚರ್‌ಗಳು, ಜೀವರಕ್ಷಕ ಔಷಧಗಳ ಸಹಿತ ರಕ್ಷಣಾ ಉಪಕರಣಗಳನ್ನು ತಂದಿದೆ.

ಮುಂದಿನ ವಾರ ನೀಟ್–ಯುಜಿ ಫಲಿತಾಂಶ

ಎಂದರು. ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ(NEET) UG 2023 ಅನ್ನು ಮೇ 7ರಂದು ನಡೆಸಲಾಯಿತು. ಆದಾಗ್ಯೂ, ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಪರೀಕ್ಷೆಗಳನ್ನು ಮುಂದೂಡಲಾಗಿತ್ತು. ದೆಹಲಿ ಸೇರಿದಂತೆ 10 ನಗರಗಳಲ್ಲಿ ಪರೀಕ್ಷೆ ಬರೆಯಲು ಎನ್‌ಟಿಎ ಆಕಾಂಕ್ಷಿಗಳಿಗೆ ಅವಕಾಶ ನೀಡಲಾಗಿತ್ತು. ಮಣಿಪುರದಲ್ಲಿ ಜೂನ್ 6 ರಂದು ನೀಟ್–ಯುಜಿ ಪರೀಕ್ಷೆ ನಡೆಸಲಾಯಿತು. ಮಣಿಪುರದಿಂದ 8,000ಕ್ಕೂ ಹೆಚ್ಚು ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬುದ್ಧ, ಬಸವ, ಡಾ.ಅಂಬೇಡ್ಕರ್ ಸಮಾನತೆ ಸಮಾಜದ ಪ್ರತಿಪಾದಕರು

●ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶ್ ಚಂದ್ರಗುರು ಪ್ರತಿಪಾದನೆ
●ಬಡವರು, ಮಹಿಳೆಯರು, ದಲಿತರ ಉದ್ಧಾರವೇ ಧ್ಯೇಯವಾಗಿತ್ತು



ಮೈಸೂರು, ಜೂ.7(ಎಂಟಿವೈ)– ಬುದ್ಧ, ಬಸವ, ಡಾ.ಅಂಬೇಡ್ಕರ್ ತತ್ವ–ಸಿದ್ಧಾಂತಗಳ ಒಂದೇ ಆಗಿದ್ದವು. ಬಡವರು, ಮಹಿಳೆಯರು, ದಲಿತರ ಉದ್ಧಾರಕ್ಕಾಗಿ ಅವರು ಸಮಾನತೆಯ ಸಮಾಜ ಕಟ್ಟಲು ಮುಂದಾಗಿದ್ದರು ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶ್ ಚಂದ್ರಗುರು ತಿಳಿಸಿದ್ದಾರೆ.


ಮೈಸೂರು ವಿಶ್ವವಿದ್ಯಾನಿಲಯದ ಇಎಂಆರ್‌ಸಿ ಸಭಾಂಗಣದಲ್ಲಿ ಬುಧವಾರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಏರ್ಪಡಿಸಿದ್ದ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬುದ್ಧ, ಬಸವ, ಅಂಬೇಡ್ಕರ್ ಅವರಂತಹ ಮಹನೀಯರು ಸಮಾನತೆ, ಸಹೋದರತೆ, ಮಾನವೀಯತೆಯ ನೆಲೆಗಟ್ಟಿನಲ್ಲಿ ಸಮಾಜವನ್ನು ಕಟ್ಟಿ ಬೆಳೆಸಿದರು. ಈ ಮಹನೀಯರನ್ನು ಮಾದರಿಯಾಗಿಟ್ಟುಕೊಂಡು, ಅವರ ಆದರ್ಶ, ತತ್ವ ಸಿದ್ಧಾಂತ ಮೈಗೂಡಿಸಿಕೊಂಡು ಜೀವನ ನಡೆಸುವ ಅಗತ್ಯವಿದೆ. ಮಾನವೀಯತೆಗೆ ಮತ್ತೊಂದು ಹೆಸರೇ ಬುದ್ಧ. ಸರ್ವನಾಶ ಮಾಡುವ ಯುದ್ಧ ನಮಗೆ ಬೇಡ. ಬುದ್ಧ ಎಂದರೆ ಸರ್ವೋದಯ ಎಂಬ ಕಾಲಘಟ್ಟದಲ್ಲಿ ನಾವಿದ್ದೇವೆ. ನಾವೆಲ್ಲರೂ ಬುದ್ಧನನ್ನು ಅನುಸರಿಸಿದರೆ ಶಾಂತಿ, ಪ್ರೀತಿ ಎಲ್ಲವೂ ಸಿಗುತ್ತದೆ. ದೇಶದ ಪ್ರಧಾನಿಗಳೇ ಬುದ್ಧನ ಬಗ್ಗೆ ಅಭಿಮಾನ ಹೊಂದಿದ್ದಾರೆ ಎಂದರು.

ಶರಣರ ಸಾಲಿನಲ್ಲಿ ನಿಲ್ಲುವ ಬಸವಣ್ಣನವರೂ ಓರ್ವ ಮಹಾನ್ ಮಾನವತಾವಾದಿ. 12ನೇ ಶತಮಾನದಲ್ಲಿಯೇ ಅವರು ಗುರುಕುಲ ಹಾಗೂ ಅನುಭವ ಮಂಟಪದ ಮೂಲಕ ಅನ್ನಭಾಗ್ಯ ಪರಿಚಯಿಸಿದವರು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಸವಣ್ಣನವರ ಹಾದಿಯಲ್ಲೇ ಸಾಗುತ್ತಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆಯನ್ನು ನಾವೆಲ್ಲರೂ ಸದಾ ಸ್ಮರಿಸಬೇಕು. ಅವರು ನೀಡಿರುವ ಸಂವಿಧಾನವನ್ನು ದೇಶ ವಿದೇಶಗಳ ನಾಯಕರೇ ಮೆಚ್ಚಿಕೊಂಡಿದ್ದಾರೆ. ಜಗತ್ತಿನ ಶ್ರೇಷ್ಠ ಸಂವಿಧಾನ ಎಂದು ಕರೆದಿದ್ದಾರೆ. ಇದು ನಮ್ಮ ದೇಶಕ್ಕೆ ಹೆಮ್ಮೆಪಡುವ ವಿಚಾರ. ನಮ್ಮ ದೇಶದಲ್ಲಿ ಎಲ್ಲಾ ಧರ್ಮ, ಎಲ್ಲಾ ಜಾತಿಯ ಜನರಿದ್ದಾರೆ. ಜಗತ್ತಿನಲ್ಲಿ ಎಲ್ಲಿಯೂ ಇಲ್ಲದಷ್ಟು ಜಾತಿಗಳು ನಮ್ಮ ದೇಶದಲ್ಲೇ ಇವೆ. ಆದರೆ, ಒಗ್ಗಟ್ಟಿಲ್ಲ. ಚರಿತ್ರೆಯನ್ನೇ ತಿರುಚಿ ಅಪಹಾಸ್ಯ ಮಾಡುವವರು ನಮ್ಮಲ್ಲಿ ಸಾಕಷ್ಟು ಜನರಿದ್ದಾರೆ. ಬ್ರಾಹ್ಮಣರನ್ನು ಬ್ರಹ್ಮನ ಮಕ್ಕಳು ಎಂದು ಹೇಳುವವರು ನಮ್ಮೊಂದಿಗಿದ್ದಾರೆ. ಇಂತಹ ಧೋರಣೆ ಹಾಗೂ ಜನರು ಬದಲಾಗಬೇಕು ಎಂದು ಈ ಹಿಂದೆಯೇ ಬುದ್ಧ, ಬಸವ ಹಾಗೂ ಅಂಬೇಡ್ಕರ್ ಸಲಹೆ ನೀಡಿದ್ದಾರೆ. ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳೂ ಒಂದೇ ಆಗಿವೆ. ಬಡವರು, ಮಹಿಳೆಯರು, ದಲಿತರ ಉದ್ಧಾರಕ್ಕಾಗಿ ಅಂಬೇಡ್ಕರ್ ಅವರು ಸಮಾನತೆಯ ಸಂವಿಧಾನ ನೀಡಿದರೆ, ಬುದ್ಧ, ಬಸವಣ್ಣನವರು ಮನುಕುಲ ಒಂದೇ ಎಂದು ಸಾರಿದರು ಎಂದರು.

ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ.ಮಹದೇವ ಮಾತನಾಡಿ, ಬುದ್ಧರ ಕಾಲದಲ್ಲಿ ಅಸಮಾನತೆ ಇತ್ತು. ರಾಜನಾಗಿ ಈ ಸಮಸ್ಯೆಗಳನ್ನು ಬಗೆಹರಿಸಲಾಗುವುದಿಲ್ಲ ಎಂದು ಅರಮನೆ ತೊರೆದು ಜನ ಸಾಮಾನ್ಯರಲ್ಲಿ ತಿಳವಳಿಕೆ ಮೂಡಿಸಲು ಮುಂದಾದರು. ಅದೇ ರೀತಿ ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿದ್ದ ಬಸವಣ್ಣನ ಕಾಲದಲ್ಲೂ ಅಸಮಾನತೆ ಇತ್ತು. ಲೋಕ ಕಲ್ಯಾಣಕ್ಕಾಗಿ, ಸಮ ಸಮಾಜಕ್ಕಾಗಿ ಜೀವನವನ್ನು ಮುಡಿಪಾಗಿಟ್ಟರು. ಅನುಭವ ಮಂಟಪದ ಮೂಲಕ ಹೊಸ ಸಮಾಜ ಮಾದರಿ ರೂಪಿಸುವ ಚಳವಳಿ ಆರಂಭಿಸಿದರು. ಜನರ ಜೀವನದ ಆಗುಹೋಗುಗಳ ತತ್ವ ಸಿದ್ಧಾಂತದ ಕಾನೂನು ಬರೆದ ಡಾ.ಅಂಬೇಡ್ಕರ್ ನಮೆಲ್ಲರ ಕಾಮಧೇನು. ಅಂಬೇಡ್ಕರ್ ಅವರನ್ನು ಪೂಜಿಸಬೇಡಿ. ಓದಿ ಅರ್ಥ ಮಾಡಿಕೊಳ್ಳಿ. ತಮ್ಮ ಬದುಕಿನಲ್ಲಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸಬೇಕು. ಎಲ್ಲ ಸಮಸ್ಯೆ, ಅಸಮಾನತೆಗಳಿಗೆ ಸಂವಿಧಾನವೆಂಬ ಆಯುಧ ಕೊಟ್ಟರು. ಈ ಆಯುಧವೇ ನಮ್ಮನ್ನು ಕಾಪಾಡುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎಸ್.ಸಪ್ನಾ ವಹಿಸಿದ್ದರು. ವಿದ್ಯಾವರ್ಧಕ ಕಾನೂನು ಕಾಲೇಜಿನ ಡಾ.ಕೆ.ಎಲ್.ಚಂದ್ರಶೇಖರ್, ಪ್ರಾಧ್ಯಾಪಕರಾದ ಡಾ.ಸಿ.ಕೆ.ಪುಟ್ಟಸ್ವಾಮಿ, ಡಾ. ಎನ್.ಮಮತಾ ಉಪಸ್ಥಿತರಿದ್ದರು.



ಮೈಸೂರಿನ ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಎಜುಕೇಷನ್ ಸೆಂಟರ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು. ಈ ವೇಳೆ ಆಶಿಕಾ ಕುಶಾಲಪ್ಪ, ರಶ್ಮೀಗೌಡ, ಡಿ.ಶೋಭಾ, ಇನ್ನರ್‌ವ್ಹೀಲ್ ಸದಸ್ಯರಾದ ಡಾ. ವಿ.ಭಾವನಾ, ಕವಿತಾ ನಿಯಾತ್, ಸುಮಾ ಕೃಷ್ಣ, ಡಾ. ವಿಜಯಲಕ್ಷ್ಮಿ ಮುರಳೀಧರ್, ಉಮಾ ಮಹೇಶ್ ಅವರನ್ನು ಕಾಣಬಹುದು.

ನಾವಿಬ್ಬರು ಬೇರೆ ಬೇರೆ ವಾಸವಾಗಿದ್ದೇವೆ

ಗ್ಯಾರಂಟಿಗಾಗಿ ಬಿಪಿಎಲ್ ರೇಷನ್ ಕಾರ್ಡ್ ಮಾಡಿಸಲು ಮುಂದಾದ ಅತ್ತೆ, ಸೊಸೆಯಂದಿರು

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಾಗಲು ರಾಜ್ಯದ ಜನ ಮುಗಿಬಿದ್ದಿದ್ದಾರೆ. ಗೃಹಲಕ್ಷ್ಮಿ ಯೋಜನೆಗೆ ಬಿಪಿಎಲ್ ಕಾರ್ಡ್ ಹೊಂದಿರುವುದು ಕಡ್ಡಾಯವಾದ ಕಾರಣ ಮಹಿಳೆಯರೆಲ್ಲಾ ರೇಷನ್ ಕಾರ್ಡ್ ಮಾಡಿಸಲು ಸೈಬರ್ ಸೆಂಟರ್, ಬೆಂಗಳೂರು ಒನ್‌ಗಳಿಗೆ ಎಡತಾಕುತ್ತಿದ್ದಾರೆ.

ಒಂದೇ ಪಡಿತರ ಚೀಟಿಯಲ್ಲಿ ಅತ್ತೆ, ಸೊಸೆ ಹೆಸರು ಇದ್ದವರು ನಾವು ಪ್ರತ್ಯೇಕವಾಗಿ ವಾಸವಾಗಿದ್ದೇವೆ ಎಂದು ಈಗ ಇಬ್ಬರ ಹೆಸರಲ್ಲೂ ಪ್ರತ್ಯೇಕ ರೇಷನ್ ಕಾರ್ಡ್ ಮಾಡಿಸಲು ಮುಂದಾಗಿದ್ದಾರೆ. ಆದರೆ ಬೆಂಗಳೂರು ಒನ್ ಸಿಬ್ಬಂದಿ ಅರ್ಜಿ ಸ್ವೀಕರಿಸಲು ಯಾವುದೇ ಆದೇಶ ಬಂದಿಲ್ಲ ಎಂದು ಹೇಳುತ್ತಿದ್ದಾರೆ.

ಜನರು ಗೃಹ ಲಕ್ಷ್ಮಿ ಯೋಜನೆಗೆ ಅರ್ಜಿ ಹಾಕಲು ಕಾತುರರಾಗಿದ್ದಾರೆ. ಬೆಂಗಳೂರು ಒನ್ ಸೆಂಟರ್‌ಗಳತ್ತ ಮಾಹಿತಿ ಕೇಳಿಕೊಂಡು ಮಹಿಳೆಯರು ಬರುತ್ತಿದ್ದಾರೆ. ಆದರೆ ರಾಜಾಜಿನಗರ ಬೆಂಗಳೂರು ಒನ್ ಸೆಂಟರ್‌ನಲ್ಲಿ ಗ್ಯಾರಂಟಿ ಯೋಜನೆಗಳಿಗೆ ಅರ್ಜಿ ಸ್ವೀಕರಿಸುತ್ತಿಲ್ಲ ಎಂಬ ಪೋಸ್ಟರ್ ಅಂಟಿಸಲಾಗಿದೆ. ಜೂನ್ 15 ರಿಂದ ಜುಲೈ 15ರ ತನಕ ಅರ್ಜಿ ಹಾಕಲು ಅವಕಾಶವಿದೆ ಎಂದು ಸರ್ಕಾರ ಹೇಳಿದೆ.

ಮಾವು ಮೇಳಕ್ಕೆ ಉತ್ತಮ ಪ್ರತಿಕ್ರಿಯೆ

30 ಸಾವಿರ ಜನ ಭೇಟಿ; 98 ಟನ್ ಮಾವು ಮಾರಾಟ



ಮೈಸೂರು, ಜೂ.7(ಎಂಟಿವೈ)– ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ತೋಟಗಾರಿಕಾ ಇಲಾಖೆ ವತಿಯಿಂದ ನಡೆದ ಮೂರು ದಿನಗಳ ಮಾವು ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, 98 ಟನ್ ಮಾವು ಮಾರಾಟವಾಗಿ, 30 ಸಾವಿರ ಜನ ಪ್ರದರ್ಶನಕ್ಕೆ ಭೇಟಿ ನೀಡಿದ್ದರು ಎಂದು ತೋಟಗಾರಿಕಾ ಇಲಾಖೆ ಉಪ ನಿರ್ದೇಶಕ ಕೆ.ರುದ್ರೇಶ್ ತಿಳಿಸಿದ್ದಾರೆ.

ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಮೇ.26ರಿಂದ 28ರವರೆಗೆ ಮಾವು ಮೇಳ ಆಯೋಜಿಸಲಾಗಿತ್ತು. ಮೈಸೂರು, ಮಂಡ್ಯ, ರಾಮನಗರ, ಕನಕಪುರದಿಂದ 15ಕ್ಕೂ ಹೆಚ್ಚು ಮಾವು ಬೆಳೆಗಾರರು ಮೇಳದಲ್ಲಿ ಪಾಲ್ಗೊಂಡಿದ್ದು, ಒಟ್ಟು 28 ಮಳಿಗೆಗಳಲ್ಲಿ ವಿವಿಧ ತಳಿಯ ಮಾವಿನ ಹಣ್ಣುಗಳು ಮೇಳದಲ್ಲಿ ಮಾರಾಟವಗಿದ್ದವು. ರಾಸಾಯಿಕ ಪದಾರ್ಥ ಬಳಸದೇ, ನೈಸರ್ಗಿಕವಾಗಿ ಮಾಗಿಸಿದ ಮಾವಿನಹಣ್ಣುಗಳನ್ನೇ ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗಿತ್ತು. ಈ ಹಿನ್ನೆಲೆಯಲ್ಲಿ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೂರು ದಿನದಲ್ಲಿ 30 ಸಾವಿರ ಗ್ರಾಹಕರು ಮೇಳವನ್ನು ವೀಕ್ಷಿಸಿದ್ದಾರೆ. ಅಲ್ಲದೆ, ಬಾದಾಮಿ 22 ಟನ್, ರಸಪುರಿ 13 ಟನ್, ಆಲ್ಫಾನ್ಸೋ 5.5 ಟನ್, ಮಲ್ಲಿಕಾ 8 ಟನ್, ಸೇಂದೂರಾ 3, ತೋತಾಪುರಿ 2.5 ಟನ್, ಕೇಸರ್ 1.5 ಟನ್, ಸಕ್ಕರೆ ಗುತ್ತಿ 1.5, ದಶೇರಿ 3.5, ಹಿಮಾಮ್ ಪಸಂದ್ 1 ಟನ್, ರುಮಾನಿ 0.3 ಟನ್ ಸೇರಿದಂತೆ ಒಟ್ಟು 98 ಟನ್ ಮಾವಿನ ಹಣ್ಣು ಮಾರಾಟವಾಗಿದೆ. ಅಲ್ಲದೆ, ಸಸ್ಯಸಂತೆಯಲ್ಲಿ ವಿವಿಧ ಬಗೆಯ ನೂರು ಗಿಡವನ್ನು ಗ್ರಾಹಕರು ಖರೀದಿಸಿದ್ದಾರೆ. ಹಣ್ಣು, ಹೂವಿನ ಗಿಡ, ಅಲಂಕಾರಿಕಾ ಗಿಡವನ್ನು ಗ್ರಾಹಕರು ಖರೀದಿಸಿದ್ದಾರೆ ಎಂದು ತಿಳಿಸಿದ್ದಾರೆ.

ಇಂದು ಸೌಹಾರ್ದ ಕೂಟ, ಸಹಪಂಕ್ತಿ ಭೋಜನ



ಮೈಸೂರು,ಜೂ.7(ಪಿಎಂ)– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ವೇದಿಕೆಯ ಅಧ್ಯಕ್ಷ, ಮಡೆಸ್ನಾನ ವಿರೋಧಿ ಹೋರಾಟಗಾರ ಕೆ.ಎಸ್. ಶಿವರಾಮು ಅವರ ಜನುಮದಿನದ ಪ್ರಯುಕ್ತ ಜೂ.8ರಂದು ಸಾಮರಸ್ಯಕ್ಕಾಗಿ ದ್ರಾವಿಡರು, ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ಸೌಹಾರ್ದ ಕೂಟ ಹಾಗೂ ಸಹಪಂಕ್ತಿ ಭೋಜನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಚಾಮುಂಡಿಬೆಟ್ಟದ ಪಾದದ ರಸ್ತೆಯ ರುದ್ರಭೂಮಿಯಲ್ಲಿ (ಸುಡುವ) ಅಂದು ಮಧ್ಯಾಹ್ನ 12ಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಅರವಿಂದ ಮಾಲಗತ್ತಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಸಾಹಿತಿಗಳಾದ ಪ್ರೊ.ಕಾಳೇಗೌಡ ನಾಗವಾರ, ಪ್ರೊ. ಕೆ.ಎಸ್.ಭಗವಾನ್, ಪ್ರೊ.ಕಾಳಚನ್ನೇಗೌಡ, ಪ್ರೊ.ಮೈಲಳ್ಳಿ ರೇವಣ್ಣ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪಾಲಿಕೆ ಮಾಜಿ ಸದಸ್ಯ ಗುಡ್ಡಪ್ಪ ಶಿವಣ್ಣ, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಡಾ.ಸಿ.ವೆಂಕಟೇಶ್, ಅತೀ ಹಿಂದುಳಿದ ವರ್ಗಗಳ ವೇದಿಕೆ ಜಿಲ್ಲಾಧ್ಯಕ್ಷ ಡಿ.ನಾಗಭೂಷಣ್, ಪಾಲಿಕೆ ಸದಸ್ಯ ಜೆ.ಗೋಪಿ, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಜಮಾಅತೆ ಇಸ್ಲಾಂ ಹಿಂದ್ ಅಧ್ಯಕ್ಷ ಮಹಮ್ಮದ್ ಅಸ್ಲಾಂ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ, ಪ್ರಗತಿಪರ ಚಿಂತಕ ಎಂ.ಎಫ್.ಕಲೀಂ, ಜೋಸೆಫ್ ಜಾಜಿ ಅಸೋಸಿಯೇಟ್ಸ್ ಮುಖ್ಯಸ್ಥ ಜೋಸೆಫ್ ಜಾಜಿ, ಕ್ರಿಶ್ಚಿಯನ್ ಮುಖಂಡ ಆರ್. ಫ್ರಾಂಸಿಸ್, ಕೆಪಿಸಿಸಿ ಸದಸ್ಯ ಶ್ರೀನಾಥ್ ಬಾಬು, ಪ್ರಗತಿಪರ ಚಿಂತಕ ಸವಿತಾ ಪ.ಮಲ್ಲೇಶ್, ಪಿಯುಸಿಎಲ್ ಅಧ್ಯಕ್ಷ ಡಾ.ವಿ.ಲಕ್ಷ್ಮೀನಾರಾಯಣ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಚಿಕ್ಕಜವರಯ್ಯ, ಕೆಪಿಸಿಸಿ ಓಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಮೊಗಣ್ಣಚಾರ್, ಕೆಪಿಐಎಂ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಓಂಕಾರ್ ಸೌಂಡ್ ಸಿಸ್ಟಮ್ಸ್ ಮಾಲೀಕ ಓಂಕಾರ್ ಆನಂದ್, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಎನ್‌ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ರಫಿಕ್, ಕಾಂಗ್ರೆಸ್ ಮುಖಂಡ ನಜರ್‌ಬಾದ್ ನಟರಾಜ್, ಮೈಸೂರು ನಗರ ಕಾಂಗ್ರೆಸ್ ಎಸ್‌ಟಿ ಘಟಕದ ಅಧ್ಯಕ್ಷ ರೋಹಿತ್ ಅವರೂ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅಪಘಾತದ ನಂತರ ಪಶ್ಚಿಮ ಬಂಗಾಳದ ಶಾಲಿಮಾರ್‌ನಿಂದ ಚೆನ್ನೈಗೆ ಪ್ರಯಾಣ ಬೆಳೆಸಿದ ಕೋರಮಂಡಲ್ ಎಕ್ಸ್‌ಪ್ರೆಸ್

ಹೌರಾ: ಒಡಿಶಾದ ಬಾಲಸೋರ್ ಜಿಲ್ಲೆಯಲ್ಲಿ ಸಂಭವಿಸಿದ ತ್ರಿವಳಿ ರೈಲು ಅಪಘಾತದ ನಂತರ ಇದೇ ಮೊದಲ ಬಾರಿಗೆ ಕೋರಮಂಡಲ್ ಎಕ್ಸ್‌ಪ್ರೆಸ್ ರೈಲು ಬುಧವಾರ ತನ್ನ ಸೇವೆಯನ್ನು ಪುನರಾರಂಭಿಸಿತು. ಪಶ್ಚಿಮ ಬಂಗಾಳದ ಶಾಲಿಮಾರ್ ನಿಲ್ದಾಣದಿಂದ ಚೆನ್ನೈಗೆ ಪ್ರಯಾಣ ಬೆಳೆಸಿತು. ಜೂನ್ 2 ರಂದು ಒಡಿಶಾದಲ್ಲಿ ಮೂರು ರೈಲುಗಳ ನಡುವೆ ಅಪಘಾತ ಸಂಭವಿಸಿತ್ತು. ಅದಾದ ನಂತರ ರೈಲು ತನ್ನ ಸೇವೆಗಳನ್ನು ಪುನರಾರಂಭಿಸುತ್ತಿರುವುದು ಇದೇ ಮೊದಲು. ಯಶವಂತಪುರ–ಹೌರಾ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್, ಶಾಲಿಮಾರ್–ಚೆನ್ನೈ ಕೋರಮಂಡಲ್ ಎಕ್ಸ್‌ಪ್ರೆಸ್ ಮತ್ತು ಗೂಡ್ಸ್ ರೈಲಿನ ನಡುವೆ ಸಂಭವಿಸಿದ ಅಪಘಾತದಲ್ಲಿ 288 ಜನರು ಸಾವಿಗೀಡಾಗಿದ್ದರು. ಶಾಲಿಮಾರ್–ಚೆನ್ನೈ ಕೋರಮಂಡಲ್ ಎಕ್ಸ್‌ಪ್ರೆಸ್, ನಿಂತಿದ್ದ ಸರಕು ಸಾಗಣೆ ರೈಲಿಗೆ ಡಿಕ್ಕಿ ಹೊರಡಿತ್ತು. ಈ ವೇಳೆ ಹಲವಾರು ಬೋಗಿಗಳು ಹಳಿತಪ್ಪಿದವು. ಬಳಿಕ ಬೆಂಗಳೂರಿನ ಯಶವಂತಪುರದಿಂದ ಬರುತ್ತಿದ್ದ ಹೌರಾ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿದ ರೈಲಿನ ಬೋಗಿಗಳಿಗೆ ಡಿಕ್ಕಿ ಹೊಡೆದಿತ್ತು. ಸೋಮವಾರ, ಜಿಲ್ಲೆಯಲ್ಲಿ ಪ್ಯಾಸೆಂಜರ್ ರೈಲು ಸೇವೆಗಳು ಪುನರಾರಂಭಗೊಂಡ ನಂತರ ಹೌರಾ–ಪುರಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಬಾಲಸೋರ್‌ನಲ್ಲಿ ಪುನಃಸ್ಥಾಪಿಸಲಾದ ರೈಲ್ವೆ ಹಳಿಯನ್ನು ದಾಟಿದೆ.

ಮೈಸೂರು ವಿಮಾನ ನಿಲ್ದಾಣಕ್ಕೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣಕ್ಕೆ ಆಗ್ರಹ

ಮೈಸೂರು, ಜೂ. 7– ಅಭಿವೃದ್ಧಿಯ ಹರಿಕಾರರು ಹಾಗೂ ಆಧುನಿಕ ಮೈಸೂರಿನ ಪಿತಾಮಹರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರನ್ನು ಮೈಸೂರು ವಿಮಾನ ನಿಲ್ದಾಣಕ್ಕೆ ನಾಮಕರಣ ಮಾಡಬೇಕೆಂದು ಜೈಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು ಆಗ್ರಹಿಸಿದ್ದಾರೆ. ಅವರ ಆಳ್ವಿಕೆಯಲ್ಲಿ ಮೈಸೂರು ಸುವರ್ಣ ಯುಗದ ದಿನಗಳನ್ನು ಕಂಡಿತ್ತು. ವಿಶ್ವದಲ್ಲೇ ಅತ್ಯುತ್ತಮ ಆಡಳಿತ ಹೊಂದಿರುವ ರಾಜ್ಯವಾಗಿತ್ತು. ಇಂಥ ಮಹಾನ್ ವ್ಯಕ್ತಿಯು ಹಲವು ಸುಧಾರಣೆಗಳನ್ನು ತಂದಿದ್ದರು. ಬಡತನ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿಶೇಷ ಪ್ರಾಮುಖ್ಯತೆ, ಸಾರ್ವಜನಿಕ ಆರೋಗ್ಯ, ಉದ್ಯಮ ಮತ್ತು ಆರ್ಥಿಕ ಸುಧಾರಣೆ, ಶಿಕ್ಷಣ ಮತ್ತು ಲಲಿತ ಕಲೆಗಳು ಇನ್ನು ಮುಂತಾದ ಯೋಜನೆಗಳನ್ನು ತಂದಿದ್ದ ಮಹಾನ್ ಚೇತನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್.ಇಂಥ ವ್ಯಕ್ತಿಯೊಬ್ಬರ ಹೆಸರನ್ನು ಮೈಸೂರು ವಿಮಾನ ನಿಲ್ದಾಣಕ್ಕೆ ನಾಮಕರಣ ಮಾಡಿ ಅವರ ಕೊಡುಗೆಗಳನ್ನು ನಾವೆಲ್ಲರೂ ನೆನೆಯಬೇಕು ಎಂದು ಜೈಭೀಮ್ ಜನಸ್ಪಂದನಾ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು ಹೇಳಿದ್ದಾರೆ.

ಅಂಚೆ ಸಿಬ್ಬಂದಿಯಲ್ಲಿ ನಡುಕ ಹುಟ್ಟಿಸಿದ 'ಶ್ವಾನ'

●ಕಚೇರಿ ಬಾಗಿಲಲ್ಲಿ ಮಲಗಿ ಕರ್ತವ್ಯಕ್ಕೆ ಅಡ್ಡಿ ●ಪಾಲಿಕೆಯವರು ಬಂದು ಹಿಡಿದ ನಂತರವೇ ಸಿಬ್ಬಂದಿ ಕೆಲಸ ಕಾರ್ಯ ಆರಂಭ

ಮೈಸೂರು, ಜೂ.7(ಸಿಎನ್)–ಮೈಸೂರಿನ ಜಯಲಕ್ಷ್ಮೀಪುರಂ ಅಂಚೆ ಕಚೇರಿ ಮುಂದೆ ಬುಧವಾರ ಬೆಳಗ್ಗೆ ಕಚೇರಿ ಅಧಿಕಾರಿ ಮತ್ತು ಸಿಬ್ಬಂದಿಗಳು ಸುಮಾರು 2 ಗಂಟೆ ಕಾಲ ನಿಂತಿದ್ದರು. ಅವರೇನು ಯಾವುದೇ ಬೇಡಿಕೆಗಳನ್ನಿಟ್ಟು ಪ್ರತಿಭಟನೆ ನಡೆಸುತ್ತಿರಲಿಲ್ಲ. ಆದರೂ ಕಚೇರಿ ಒಳಗೆ ಹೋಗದೆ ಹೊರಗೆಯೇ ನಿಂತಿದ್ದರು. ಕೊನೆಗೆ ನಗರ ಪಾಲಿಕೆ ಸಿಬ್ಬಂದಿ ಬಂದು ಅಂಚೆ ಕಚೇರಿ ಸಿಬ್ಬಂದಿಯ ಮನವಿಗೆ ಸ್ಪಂದಿಸಿದ ನಂತರ ಎಲ್ಲರೂ ಕಚೇರಿ ಪ್ರವೇಶಿಸಿ, ಕೆಲಸ ಕಾರ್ಯದಲ್ಲಿ ನಿರತರಾದರು.

ಅಂಚೆ ಕಚೇರಿ ಅಧಿಕಾರಿ ಮತ್ತು ಸಿಬ್ಬಂದಿ ಕಚೇರಿಯ ಬಾಗಿಲನ್ನೂ ಕೂಡ ತೆರೆಯದೆ ನಿಂತಿದ್ದರೆ, ಕಚೇರಿಗೆ ಬಂದ ಸಾರ್ವಜನಿಕರು ಅವರನ್ನು ಪ್ರಶ್ನಿಸದೇ, ಕಚೇರಿಗೆ ಹೋಗಬೇಡಿ ಎಂದು ಎಚ್ಚರಿಕೆಯ ಮಾತುಗಳನ್ನಾಡುತ್ತಿದ್ದರು. ಅಲ್ಲಿ ಒಂದು ರೀತಿಯ ಭಯದ ವಾತಾವರಣವೂ ಇತ್ತು.



ಹಾಗಾದರೆ ಆಗಿದ್ದೇನು?: ಇಂದು ಬೆಳಗ್ಗೆ ಅಂಚೆ ಕಚೇರಿಯ ಬಾಗಿಲು ತೆರೆಯಲು ಬಂದ ಸಿಬ್ಬಂದಿ ಕಚೇರಿಯ ಮೆಟ್ಟಿಲು ಹತ್ತಲು ಪ್ರಯತ್ನಿಸಿ, ಅಲ್ಲಿನ ಒಂದು ದೃಶ್ಯ ಕಂಡು ಹಿಂಜರಿದು ರಸ್ತೆಗೆ ಬಂದು ನಿಂತಿದ್ದಾನೆ. ನಂತರ ಬಂದ ಅಧಿಕಾರಿ ಹಾಗೂ ಸಿಬ್ಬಂದಿಯೂ ಕೂಡ ಕಚೇರಿಯ ಬಾಗಿಲು ತೆರೆಯಲು ಆತನಿಗೆ ಸೂಚಿಸದೆ ರಸ್ತೆಯಲ್ಲೇ ನಿಂತಿದ್ದಾರೆ. ಹಾಗಾದರೆ ಅಲ್ಲಿ ಅವರಿಗೆ ತಡೆಯೊಡ್ಡಿದವರು ಯಾರು? ಅದು ಸಿಟ್ಟಿಗೆದ್ದಿದ್ದ ಶ್ವಾನ! ಸರಿಯಾಗಿ ಬಾಗಿಲ ಹತ್ತಿರವೇ ಬೀದಿ ನಾಯಿಯೊಂದು ಮಲಗಿತ್ತು. ಯಾರಾದರೂ ಹತ್ತಿರ ಹೋದರೆ ವಿಚಿತ್ರವಾಗಿ ಬೊಗಳುತ್ತಿತ್ತು. ಅದರ ಬಾಯಲ್ಲಿ ನೊರೆ ಬರುತ್ತಿತ್ತು. ಈ ನಾಯಿಯ ಉಗ್ರಾವತಾರವನ್ನು ಕಂಡು ಕಚೇರಿ ಸಿಬ್ಬಂದಿ ಭಯದಿಂದ ತುಸು ದೂರದಲ್ಲೇ ನಿಂತರು.

ಅದು ಹುಚ್ಚುನಾಯಿ ಇರಬಹುದು ಎಂದು ಭಾವಿಸಿದ ಅಂಚೆ ಅಧಿಕಾರಿ ರವಿಶಂಕರ್ ಅವರು ಮೈಸೂರು ಮಹಾನಗರ ಪಾಲಿಕೆಗೆ ಕರೆ ಮಾಡಿ ತಮ್ಮ ಕಚೇರಿ ಮುಂದೆ ಮಲಗಿರುವ ನಾಯಿಯನ್ನು ಅಲ್ಲಿಂದ ಓಡಿಸುವಂತೆ ಮನವಿ ಮಾಡಿದರು. ಸುಮಾರು 11 ಗಂಟೆಗೆ ಸ್ಥಳಕ್ಕಾಗಮಿಸಿದ ಪಾಲಿಕೆ ಸಿಬ್ಬಂದಿ ನಾಯಿಯ ವರ್ತನೆಯನ್ನು ಗಮನಿಸಿ ಅದು ರೇಬಿಸ್ ರೋಗಪೀಡಿತ ನಾಯಿ ಎಂಬುದನ್ನು ದೃಢಪಡಿಸಿಕೊಂಡ ನಂತರ ಅದನ್ನು ಹಿಡಿದು ವಾಹನದಲ್ಲಿ ಕೊಂಡೊಯ್ದು ನಂತರ ನಿಟ್ಟುಸಿರು ಬಿಟ್ಟ ಅಂಚೆ ಇಲಾಖೆ ಸಿಬ್ಬಂದಿ, ಕಚೇರಿಯ ಬಾಗಿಲು ತೆರೆದು ತಮ್ಮ ಕೆಲಸ ಕಾರ್ಯಗಳಿಗೆ ಮುಂದಾದರು.

ಮೈಸೂರಿನ ಮತ್ತೊಂದು ಪ್ರವಾಸಿ ತಾಣವಾಗಿ ಕಂಗೊಳಿಸುತ್ತಿರುವ ರಾಜೀವ್‌ನಗರದ

'ಅಲ್‌ಬದರ್ ವೃತ್ತ'

ವಿಶೇಷ ವಿನ್ಯಾಸ, ಬೆಳಕಿನ ನಡುವೆ ಕಂಗೊಳಿಸುತ್ತಿರುವ ಸುವಿಶಾಲ ಸರ್ಕಲ್



● ಮೋಹನ್ ಕಾಯಕ

ಮೈಸೂರು, ಜೂ.7– ಪ್ರವಾಸಿಗರ ನೆಚ್ಚಿನ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಮತ್ತೊಂದು ಆಕರ್ಷಣೆ ಅನಾವರಣಕ್ಕೆ ಸಜ್ಜಾಗಿದೆ....! ಬೆಳಕಿನ ಚಿತ್ತಾರದೊಂದಿಗೆ ಚಿಮ್ಮುವ ಕಾರಂಜಿ, ಪಾರಂಪರಿಕ ವಿದ್ಯುತ್ ದೀಪದ ಕಂಬಗಳು ಹಾಗೂ ಆಕರ್ಷಣೀಯ ತಾಳೆಮರಗಳ ನಡುವೆ ಕೆಟಲ್ ಪಾಟ್(ಜಗ್ ಮಾದರಿ) ಆಕೃತಿಯು ನೋಡುಗರ ಕಣ್ಮನ ಸೆಳೆಯುತ್ತಿದೆ.

ಮೈಸೂರಿನ ರಾಜೀವ್‌ನಗರದಲ್ಲಿರುವ ಅಲ್‌ಬದರ್ ವೃತ್ತ ಪ್ರವಾಸಿಗರ ಆಕರ್ಷಣೀಯ ಕಣ್ಮನ ಸ್ಥಳವಾಗಿ ಸೆಳೆಯಲು ಸಿದ್ಧವಾಗಿದೆ. ವೃತ್ತದ ಸ್ವರೂಪವೇ ಬದಲಾಗಿದ್ದು, ಕಂಗೊಳಿಸುತ್ತಿದೆ. ನಗರದಲ್ಲಿ ಮತ್ತೊಂದು ಪ್ರವಾಸಿ ತಾಣವಾಗಲು ಸಜ್ಜಾಗಿರುವ ಅಲ್‌ಬದರ್ ವೃತ್ತ ಹೊಸ ಸೆಲ್ಫಿಸ್ಪಾಟ್ ಆಗಿ ಪರಿವರ್ತನೆಯಾಗಿದೆ.

3900 ಚದರ ಮೀಟರ್ ವಿಸ್ತೀರ್ಣದ(ರಸ್ತೆ, ಕಾಲುದಾರಿ ಹಾಗೂ ವೃತ್ತ ಪ್ರದೇಶ) ಅಲ್‌ಬದರ್ ವೃತ್ತದಲ್ಲಿ ಮಧ್ಯದಲ್ಲಿನ 380(ಮುಖ್ಯ ವೃತ್ತ) ಚದರ ಮೀಟರ್ ವಿಸ್ತೀರ್ಣದಲ್ಲಿ ಬೃಹತ್ ಹಾಗೂ ಆಕರ್ಷಣೀಯ 'ಕೆಟಲ್ ಪಾಟ್' ಆಕೃತಿ ನಿರ್ಮಾಣವಾಗಿದೆ. ತಳಮಟ್ಟದಿಂದ 13.70 ಮೀಟರ್ ಎತ್ತರವಿದ್ದು, ಅದರಲ್ಲಿ 8.25 ಮೀಟರ್ ಎತ್ತರದ 'ಕೆಟಲ್ ಪಾಟ್' ಆಕೃತಿ ವಿಶೇಷವಾಗಿ ಗಮನ ಸೆಳೆಯುತ್ತಿದೆ. ಕೆಟಲ್‌ಪಾಟ್ ಸುತ್ತಲೂ ಹೂಗಿಡಗಳು, ಕಾರಂಜಿ ವೃತ್ತಕ್ಕೆ ಮತ್ತಷ್ಟು ಮೆರಗು ತಂದಿದ್ದು, ರಾತ್ರಿ ವೇಳೆ ಬಣ್ಣ ಬಣ್ಣದ ಬೆಳಕಿನ ನಡುವೆ ನಯನ ಮನೋಹರವಾಗಿದೆ.

ವೃತ್ತದ ಮೆರಗು ಇಮ್ಮಡಿಗೊಳಿಸಲು ಸುತ್ತಲೂ ಪಾರಂಪರಿಕ ಶೈಲಿಯ(ಎಂಎಸ್ ಡೆಕೊರೇಟಿವ್) 14 ವಿದ್ಯುತ್ ಕಂಬಗಳನ್ನು ಅಳವಡಿಸಲಾಗಿದೆ. ಕೊಯಮುತ್ತೂರಿನಿಂದ ವಿಶೇಷವಾಗಿ 22 ತಾಳೆಮರಗಳನ್ನು ತಂದು ನೆಡಲಾಗಿದ್ದು, ಪ್ರತಿಯೊಂದು ಮರವನ್ನೂ ಬಣ್ಣ ಬಣ್ಣದ ದೀಪಗಳಿಂದ ಅಲಂಕರಿಸಲಾಗಿದೆ. ಕೆಟಲ್ ಪಾಟ್ ಗಾಳಿ–ಮಳೆಗೆ ಹಾಳಾಗದಂತೆ GRP(glass reinforced polymer) ಬಳಸಿ ನಿರ್ಮಿಸಲಾಗಿದೆ.

ಬೆಳಕಿನ ವೈಭವ: ಅಲ್‌ಬದರ್ ವೃತ್ತದಲ್ಲಿ ಬೆಳಕಿನ ವೈಭವ ಹೆಚ್ಚಿಸಲು ಆಸಕ್ತಿ ವಹಿಸಲಾಗಿದ್ದು, ವಿವಿಧ ಬಗೆಯ ಲೈಟ್‌ಗಳನ್ನು ಅಳವಡಿಸಲಾಗಿದೆ. ಡೈನಾಮಿಕ್ RGBW (ರೆಡ್, ಗ್ರೀನ್, ಬ್ಲೂ ಮತ್ತು ವೈಟ್) ಲೈಟಿಂಗ್‌ಗಳನ್ನು ಅಳವಡಿಸಿದ್ದು, IP65 ಮತ್ತು IP67 ರೇಟ್‌ನೊಂದಿಗೆ ಕಸ್ಟಮೈಸ್ ಮಾಡಿ DMX ನೆಟ್‌ವರ್ಕ್ ಮೂಲಕ ನಿಯಂತ್ರಿಸುವ ವ್ಯವಸ್ಥೆ ಮಾಡಲಾಗಿದೆ. ವೃತ್ತದ ಸೌಂದರ್ಯವನ್ನು ಹೆಚ್ಚಿಸಲು ಕಾರಂಜಿ ನೀರಿನೊಳಗೆ 16 ಮಿಲಿಯನ್ ಬಣ್ಣದ ಛಾಯೆ (colour shades)ಗಳನ್ನು ಹೊಂದಿರುವ ಬಹು ಥೀಮ್ (multiple themes)ಗಳ ಬಣ್ಣದ ಮಾದರಿಯುಳ್ಳ ಲೈಟ್‌ಗಳನ್ನು ಅಳವಡಿಸಲಾಗಿದೆ. ಹೂ ಗಿಡಗಳಿರುವ ಗಾರ್ಡನ್ ಪ್ರದೇಶದಲ್ಲಿ ಕಸ್ಟಮೈಸ್ ಮಾಡಿದ ಸ್ಪೈಕ್ ದೀಪಗಳನ್ನು ಬಳಸಲಾಗಿದೆ.

ಬೆಳಕಿನ ಚಿತ್ತಾರ ಬದಲಾವಣೆ: ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ತ್ರಿವರ್ಣ ಧ್ವಜ, ಕನ್ನಡ ರಾಜ್ಯೋತ್ಸವದ ವೇಳೆ ಕೆಂಪು ಮತ್ತು ಹಳದಿ ಬಣ್ಣ ಸೇರಿದಂತೆ ಸಂದರ್ಭಕ್ಕೆ ಅನುಗುಣವಾಗಿ ಕೆಟಲ್ ಪಾಟ್ ಕಂಗೊಳಿಸಲಿದೆ. ದುಬೈನ ಬುರ್ಜ್ ಖಲಿಫಾ ಕಟ್ಟಡ ಮೇಲೆ ಬಣ್ಣ ಬಣ್ಣದ ಬೆಳಕು ಹರಿದಂತೆ ಅಲ್‌ಬದರ್ ವೃತ್ತದ ಕೆಟಲ್‌ಪಾಟ್ ಮೇಲೂ ವಿವಿಧ ಬಣ್ಣಗಳು ಕಂಗೊಳಿಸಲಿವೆ ಎಂದು ನಗರಪಾಲಿಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



ಯಾವುದೇ ಸಮಸ್ಯೆ ಉಂಟಾಗುವುದಿಲ್ಲ: ಅಲ್‌ಬದರ್ ವೃತ್ತದ ಅಭಿವೃದ್ಧಿಗೆ ಸಾಕಷ್ಟು ವರ್ಕ್‌ಔಟ್ ಮಾಡಲಾಗಿದೆ. ಇಷ್ಟು ದೊಡ್ಡ ವೃತ್ತದಲ್ಲಿ ಒಂದೇ ಒಂದು ಯುಜಿಡಿ ಲೈನ್, ವಾಟರ್ ಲೈನ್, ಟೆಲಿಫೋನ್ ಲೈನ್, ವಿದ್ಯುತ್ ಕೇಬಲ್ ಹಾದುಹೋಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದ್ದು, ಹಾಗಾಗಿ ಯಾವುದೇ ರಿಪೇರಿ ಬಾರದಂತೆ ಅಭಿವೃದ್ಧಿ ಮಾಡಲಾಗಿದೆ. ವೃತ್ತದ ಸುತ್ತಲಿನ ರಸ್ತೆಗೆ ನೈಸರ್ಗಿಕ ಕೋಬ್ಲೆಸ್ಟೋನ್ ಬಳಸಿ, ಆರ್‌ಸಿಸಿ ಕಾಂಕ್ರಿಟ್ ಹಾಕಲಾಗಿದೆ ಎಂದು ತಿಳಿಸಿದರು.

ಎನ್.ಆರ್.ಕ್ಷೇತ್ರದಲ್ಲಿಯೇ ವಿಶೇಷ ವೃತ್ತ: ಮೈಸೂರಿನ ಕೇಂದ್ರ ಭಾಗದಲ್ಲಿ ಪಾರಂಪರಿಕ ಕಟ್ಟಡಗಳ ಜೊತೆಗೆ ದೊಡ್ಡ ದೊಡ್ಡ ವೃತ್ತಗಳು ಆಕರ್ಷಣೆಯಾಗಿವೆ. ಆದರೆ ಎನ್.ಆರ್ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವುದೇ ಆಕರ್ಷಣೀಯ ವೃತ್ತ ಇರಲಿಲ್ಲ. ಅಲ್‌ಬದರ್ ವೃತ್ತದ ಅಭಿವೃದ್ಧಿ ಮೂಲಕ ಇದ್ದಂತಹ ಕೊರತೆ ನೀಗಿದ್ದು, ಪ್ರವಾಸಿಗರ ತಾಣವಾಗಿ ಮಾರ್ಪಡಾಗಲಿದೆ. ಅಲ್ಲದೆ ಸಂಜೆ ವೇಳೆ ಅಲ್‌ಬದರ್ ವೃತ್ತ ವೀಕ್ಷಣೆಗೆ ಬರುವವರಿಗೆ 1–2 ಗಂಟೆಗಳ ಕಾಲ ಉಚಿತ ವೈ–ಫೈ ಬಳಕೆಗೂ ಅವಕಾಶ ಮಾಡಿಕೊಡಲಾಗುವುದು ಎಂದರು.

ಮುಖ್ಯಮಂತ್ರಿಗಳಿಂದ ಶೀಘ್ರದಲ್ಲೇ ವೃತ್ತ ಉದ್ಘಾಟನೆ...



ಆತ್ಯಾಕರ್ಷಕ ವಿನ್ಯಾಸದೊಂದಿಗೆ ಅಭಿವೃದ್ಧಿಪಡಿಸಿರುವ ಅಲ್‌ಬದರ್ ವೃತ್ತವನ್ನು ಶೀಘ್ರದಲ್ಲಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ ಎಂದು ಮಾಜಿ ಮೇಯರ್ ಅಯೂಬ್ ಖಾನ್ ತಿಳಿಸಿದರು. ವಿಶೇಷ ಅನುದಾನ ಬಳಸಿಕೊಂಡು ವೃತ್ತವನ್ನು ಅಭಿವೃದ್ಧಿಪಡಿಸಲಾಗಿದೆ. ಈಗಾಗಲೇ ಸುತ್ತಮುತ್ತಲಿನ ನಿವಾಸಿಗಳು, ಪ್ರವಾಸಿಗರು ಬರುತ್ತಿದ್ದಾರೆ. ಖುಷಿಯಿಂದ ನೋಡುತ್ತಿದ್ದು, ಈ ಭಾಗದ ಜನರಿಗೂ ಸಂತೋಷ ತಂದಿದೆ. ಮೈಸೂರು ನಗರದಲ್ಲಷ್ಟೇ ಅಲ್ಲದೆ ರಾಜ್ಯದಲ್ಲಿಯೇ ಈ ರೀತಿಯ ವೃತ್ತ ಇಲ್ಲ. ಈಗಾಗಲೇ ಹಲವರು ಮೊಬೈಲ್‌ಗಳಲ್ಲಿ ವಿಡಿಯೋ ಮಾಡಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಹಲವಾರು ತೊಡಕುಗಳ ನಡುವೆ ಅಲ್‌ಬದರ್ ವೃತ್ತ ಅಭಿವೃದ್ಧಿಯಾಗಿದೆ ಎಂದರು. ಮಿನಿ ರಾಜಮಾರ್ಗ, ನೆಹರು ಪಾರ್ಕ್ ನಂತರ ಅಲ್‌ಬದರ್ ವೃತ್ತ ಈ ಭಾಗದ ಪ್ರಮುಖ ಆಕರ್ಷಣೆಯಾಗಲಿದೆ. 2022ರ ಜು.27 ರಂದು ವೃತ್ತದ ಅಭಿವೃದ್ಧಿಗೆ ಗುದ್ದಲಿಪೂಜೆ ನೆರವೇರಿಸಲಾಗಿತ್ತು. ಪಾಲಿಕೆ ಇಂಜಿನಿಯರ್‌ಗಳು, ಅಧಿಕಾರಿಗಳು ಹಾಗೂ ಗುತ್ತಿಗೆದಾರರೊಂದಿಗಿನ ನಿರಂತರ ಸಂಪರ್ಕ ಹಾಗೂ ಸಹಕಾರದಿಂದಾಗಿ ವಿಶೇಷವಾಗಿ ಕಾಣುವ ಅಲ್‌ಬದರ್ ವೃತ್ತ ಸದ್ಯದಲ್ಲಿಯೇ ಲೋಕಾರ್ಪಣೆಯಾಗಲಿದೆ ಎಂದರು.

14 ಮತ್ತು 15ನೇ ಹಣಕಾಸು ಹಾಗೂ ವಿಶೇಷ ಅನುದಾನ ಸೇರಿ ಒಟ್ಟು 2.47(247.11 ಲಕ್ಷ) ಕೋಟಿ ರೂ. ವೆಚ್ಚದಲ್ಲಿ ವೃತ್ತದ ಅಭಿವೃದ್ಧಿ ಹಾಗೂ ವಿನ್ಯಾಸ ರೂಪುಗೊಂಡಿದೆ. ಗುತ್ತಿಗೆದಾರ ವೆಂಕಟಪ್ಪ (ಹೆಚ್.ಎಸ್.ಸ್ವಾಮಿಗೌಡ) ಹಾಗೂ ವಿನ್ಯಾಸಕಾರ ಹಫೀಬ್ ಸಹಕಾರದೊಂದಿಗೆ ಮೈಸೂರಿನಲ್ಲಿಯೇ ಅತ್ಯಂತ ಆಕರ್ಷಣೀಯ ಹಾಗೂ ವಿಶೇಷ ವಿನ್ಯಾಸವುಳ್ಳ ವೃತ್ತ ನಿರ್ಮಾಣವಾಗಿದೆ.
– ಎ.ಎಸ್.ರಂಜಿತ್‌ಕುಮಾರ್, ಕಾರ್ಯಪಾಲಕ ಅಭಿಯಂತರ, ನಗರಪಾಲಿಕೆ

ಅಲ್‌ಬದರ್ ವೃತ್ತ ಅದ್ದೂರಿಯಾಗಿ ಅಭಿವೃದ್ಧಿಗೊಂಡಿದೆ. ಮೈಸೂರಿಗೆ ನಂಬರ್ ಓನ್ ವೃತ್ತವಾಗಲಿದೆ. ಪ್ರಾಯೋಗಿಕವಾಗಿ ದೀಪಗಳನ್ನು ಆನ್ ಮಾಡುತ್ತಿದ್ದಂತೆ ಸಾರ್ವಜನಿಕರು ಬಂದು ಫೋಟೊ ತೆಗೆದುಕೊಳ್ಳುತ್ತಿದ್ದಾರೆ. ಮಕ್ಕಳನ್ನು ಕರೆದುಕೊಂಡು ಬಂದು ತೋರಿಸುತ್ತಾರೆ. ಈ ಭಾಗದಲ್ಲಿ ಇಂತಹ ಆಕರ್ಷಣೀಯ ವೃತ್ತ ಅಭಿವೃದ್ಧಿಯಾಗಿರುವುದು ಎಲ್ಲರಿಗೂ ಖುಷಿ ತಂದಿದೆ. **– ಅನ್ವರ್‌ಬೇಗ್ ಅಫ್ತಾಬ್, ಮಾಜಿ ಉಪ ಮೇಯರ್**

ಮೊಬೈಲ್ ಕದ್ದವರಿಗೆ ಬಿತ್ತು ಗೂಸಾ!



ಮೈಸೂರು, ಜೂ.7(ಎಂಕೆ)– ಫುಟ್‌ಪಾತ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಯೊಬ್ಬರ ಕೈಯಿಂದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಲೆತ್ನಿಸಿದ ಇಬ್ಬರನ್ನು ಹಿಡಿದು ಹಿಗ್ಗಾಮುಗ್ಗ ಥಳಿಸಿದ ಘಟನೆ ಮೈಸೂರಿನ ರಾಜಮಾರ್ಗದಲ್ಲಿ ನಡೆಯಿತು.

ಬುಧವಾರ ಸಂಜೆ ಹಾರ್ಡಿಂಜ್ ವೃತ್ತದಿಂದ ಚಾಮರಾಜ ವೃತ್ತದ ಕಡೆಗೆ ರಾಜಮಾರ್ಗದ ಫುಟ್‌ಪಾತ್‌ನಲ್ಲಿ ಮಾತನಾಡಿಕೊಂಡು ಹೋಗುತ್ತಿದ್ದ ಕುವೆಂಪುನಗರದ ನಿವಾಸಿ ಶಿವಣ್ಣ ಎಂಬುವರನ್ನು ಹಿಂಬಾಲಿಸಿದ ಇಬ್ಬರು, ಕೈಯ್ಯಲ್ಲಿದ್ದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಲು ಯತ್ನಿಸಿದರು. ಇಬ್ಬರಲ್ಲಿ ಒಬ್ಬ ಶಿವಣ್ಣ ಅವರ ಕತ್ತು ಹಿಡಿದುಕೊಂಡರೆ ಮತ್ತೊಬ್ಬ ಅವರ ಕೈಯ್ಯಲ್ಲಿದ್ದ ಮೊಬೈಲ್ ಕಿತ್ತುಕೊಂಡು ಚಾಮರಾಜ ವೃತ್ತದ ಕಡೆಗೆ ಓಡಿದ. ಇದನ್ನು ಗಮನಿಸಿದ ವಾಹನ ಸವಾರರು, ಪಾದಚಾರಿಗಳು ಆತನನ್ನು ಬೆನ್ನತ್ತಿ ಹಿಡಿದರೆ, ಕತ್ತು ಹಿಡಿಕೊಂಡಿದ್ದವನಿಂದ ಬಿಡಿಸಿಕೊಂಡ ಶಿವಣ್ಣ ಆತನನ್ನು ಓಡಿ ಹೋಗಲು ಬಿಡದೆ ಹಿಡಿದರು. ತಕ್ಷಣವೇ ಸ್ಕೂಟರ್, ಬೈಕ್‌ಗಳನ್ನು ನಿಲ್ಲಿಸಿ ಜಮಾಯಿಸಿದ ವಾಹನ ಸವಾರರು, ಪಾದಚಾರಿಗಳು ಇಬ್ಬರಿಗೂ ಹಿಗ್ಗಾಮುಗ್ಗ ಥಳಿಸಿದರಲ್ಲದೆ, ಲಷ್ಕರ್ ಪೊಲೀಸ್ ಠಾಣೆಗೆ ಒಪ್ಪಿಸಿದರು.

ಸಾರ್ವಜನಿಕ ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಲೇಬೇಕು

ಹೈಕೋರ್ಟ್ ತಾಕೀತು

ಬೆಂಗಳೂರು: ಸಾರ್ವಜನಿಕ ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಲೇಬೇಕು. ಕಾಮಗಾರಿ ಕಳಪೆಯಾಗಿರದಂತೆ ನೋಡಿಕೊಳ್ಳಬೇಕು ಎಂದು ಕರ್ನಾಟಕ ಹೈಕೋರ್ಟ್ ಸರ್ಕಾರಕ್ಕೆ ತಾಕೀತು ಮಾಡಿದೆ.



ಕಳಪೆ ಗುಣಮಟ್ಟದ ಪೊಲೀಸ್ ವಸತಿ ಗೃಹಗಳ ನಿರ್ಮಾಣ ಆರೋಪಕ್ಕೆ ಸಂಬಂಧಿಸಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನರಿದ್ದ ಹೈಕೋರ್ಟ್ ಪೀಠ, ಪೊಲೀಸ್ ವಸತಿ ಮಂಡಳಿ ಇಂಜಿನಿಯರ್ಸ್ ಕಾರ್ಯಕ್ಕೆ ಅಚ್ಚರಿ ವ್ಯಕ್ತಪಡಿಸಿದ್ದು, ತಪ್ಪಿತಸ್ಥ ಇಂಜಿನಿಯರ್‌ಗಳ ವಿರುದ್ಧ ಕ್ರಮಕ್ಕೆ ಸೂಚನೆ ನೀಡಿದೆ.

ಮಂಡ್ಯ, ಚಾಮರಾಜನಗರದಲ್ಲಿ ಕಳಪೆ ಗುಣಮಟ್ಟದ ಪೊಲೀಸ್ ವಸತಿ ಗೃಹಗಳ ನಿರ್ಮಾಣ ಆರೋಪ ಕೇಳಿಬಂದಿದೆ. ಈ ಪ್ರಕರಣದಲ್ಲಿ ಗುತ್ತಿಗೆದಾರರ ಭದ್ರತಾ ಠೇವಣಿ ಹಿಂದಿರುಗಿಸಲು ನಿರ್ದೇಶನ ನೀಡುವಂತೆ ಕೋರಿ ಪಿಜಿ ಸೆಟ್ಟಿ ಕನ್‌ಸ್ಟ್ರಕ್ಷನ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯನ್ನು ಹೈಕೋರ್ಟ್ ಪೀಠ ವಜಾಗೊಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿ ದೂರು ದಾಖಲಾಗಿದ್ದರೂ ಕಾಮಗಾರಿ ಬಿಲ್ ಮಂಜೂರು ಮಾಡಿರುವ ಪೊಲೀಸ್ ವಸತಿ ಮಂಡಳಿ ಇಂಜಿನಿಯರ್ಸ್ ಕಾರ್ಯಕ್ಕೆ ಹೈಕೋರ್ಟ್ ಅಚ್ಚರಿ ವ್ಯಕ್ತಪಡಿಸಿದೆ. ಇದು ಸರ್ಕಾರಿ ಯೋಜನೆಯಾಗಿದ್ದು ಸಾರ್ವಜನಿಕರ ಹಣ ಬಳಕೆಯಾಗಿದೆ. ಕಾಮಗಾರಿ ಯೋಜನೆಗಳು ಕಳಪೆಯಾಗಿದ್ದಲ್ಲಿ ಸಹಿಸಲಾಗುವುದಿಲ್ಲ. ಗುಣಮಟ್ಟ ಕಾಯ್ದುಕೊಳ್ಳುವಂತೆ ಸರ್ಕಾರ ನೋಡಿಕೊಳ್ಳಬೇಕು. ಕಳಪೆ ಕಾಮಗಾರಿಗೆ ಸಂಬಂಧಿಸಿದ ಫೋಟೋ ಪರಿಶೀಲನೆ ಮಾಡಲಾಗಿದೆ. ಒಂದು ಫೋಟೋ ಸಾವಿರ ಪದಗಳಿಗೆ ಸಮ. ಕಟ್ಟಡದಲ್ಲಿ ನೀರು ನಿಂತಿರುವುದು, ಗೋಡೆಗಳು ಬಿರುಕು ಬಿಟ್ಟಿರುವುದು, ಸೋಲಾರ್ ಪ್ಯಾನಲ್‌ಗಳಲ್ಲಿ ನೀರು ಸೋರಿಕೆ ಆಗುತ್ತಿರುವುದು, ಬಾಗಿಲುಗಳಿಗೆ ಕಳಪೆ ಗುಣಮಟ್ಟದ ಮರ ಬಳಕೆ ಕಂಡು ಬರುತ್ತಿದೆ ಎಂದು ನ್ಯಾಯಪೀಠ ಹೇಳಿದೆ.


ಇಂಥ ಕಳಪೆ ಕಾಮಗಾರಿಗಳನ್ನು ಸಹಿಸಲಾಗದು. ತಪ್ಪಿತಸ್ಥ ಇಂಜಿನಿಯರ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಪೀಠ ಸರ್ಕಾರಕ್ಕೆ ಸೂಚನೆ ನೀಡಿದೆ.

ಅರೆಕಾಲಿಕ ಶಿಕ್ಷಕರ ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು, ಜೂ. 7–ಮೈಸೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಬಾಲಕ, ಬಾಲಕಿಯರ ಬಾಲಮಂದಿರ ಹಾಗೂ ಸರ್ಕಾರಿ ಬಾಲಕರ ವೀಕ್ಷಣಾಲಯದ ಮಕ್ಕಳಿಗೆ ಅರೆಕಾಲಿಕ ಶಿಕ್ಷಕರ ಸೇವೆಯು ಅಗತ್ಯವಿದ್ದು ಬಿ.ಎಸ್ಸಿ, ಬಿ.ಎ ಪದವೀಧರ ಶಿಕ್ಷಕರು ದೈಹಿಕ, ಯೋಗ ಶಿಕ್ಷಕರು, ಆರ್ಟ್ ಕ್ರಾಫ್ಟ್ ಶಿಕ್ಷಕರು ಹಾಗೂ ಸಂಗೀತ ಶಿಕ್ಷಕರ ಅರೆಕಾಲಿಕ ಹುದ್ದೆಗಳಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಜೂ.21ರೊಳಗೆ ವಿಜಯನಗರದ 4ನೇ ಹಂತದಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಯಲ್ಲಿ ಅರ್ಜಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ.0821–2543003 ಅನ್ನು ಸಂಪರ್ಕಿಸಬಹುದು.

ಮಾಜಿ ಸಚಿವ ಶಿವಣ್ಣರ ಮನೆಯಿಂದ ಇನ್ನೋವಾ ಕಾರು ಕಳವು





ಮೈಸೂರು, ಜೂ.7(ಆರ್‌ಕೆ)–ಮಾಜಿ ಸಚಿವರೂ ಆದ ಕರ್ನಾಟಕ ರಾಜ್ಯ ಸ್ಥಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಎಂ.ಶಿವಣ್ಣ(ಕೋಟೆ) ಅವರ ಇನ್ನೋವಾ ಕ್ರಿಸ್ಟ್ ಕಾರನ್ನು ಕಳವು ಮಾಡಲಾಗಿದೆ.

ಮೈಸೂರಿನ ವಿಜಯನಗರ 3ನೇ ಹಂತದ 80 ಅಡಿ ರಸ್ತೆಯಲ್ಲಿರುವ ಅವರ ಮನೆಯ ಮುಂದೆ ನಿಲ್ಲಿಸಿದ್ದ ಕಾರನ್ನು (ಕೆಎ 09 ಎಂಇ 6996) ಜೂ.5ರಂದು ಮಧ್ಯರಾತ್ರಿ 1 ಗಂಟೆ ಸುಮಾರಿನಲ್ಲಿ ಖದೀಮ ಕಳವು ಮಾಡಿದ್ದಾನೆ. ವಿಚಿತ್ರವೆಂದರೆ ಈತ ಹಿಂಬಾಗಿಲ ಮೂಲಕ ಮನೆ ಒಳಗೆ ನುಗ್ಗಿ ಹಾಲ್‌ನಲ್ಲಿದ್ದ ಕಾರಿನ ಕೀ ಅನ್ನು ಎತ್ತಿಕೊಂಡು, ಕಾರಿನಲ್ಲಿದ್ದ ಕೆಲವು ದಾಖಲೆಗಳು ಮತ್ತು ಗಣಪತಿ ವಿಗ್ರಹವನ್ನು ಒಂದು ಕವರ್‌ನಲ್ಲಿ ಹಾಕಿ ಕಾರನ್ನು ನಿಲ್ಲಿಸಿದ್ದ ಸ್ಥಳದಲ್ಲೇ ಅದನ್ನು ಇರಿಸಿ ಕಾರು ಕದ್ದೊಯ್ದಿದ್ದಾನೆ ಎಂದು ಶಿವಣ್ಣ ಅವರು ವಿಜಯನಗರ ಠಾಣೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಜೂ.5ರಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ತಮ್ಮ ಚಾಲಕ ಮನೆ ಮುಂದೆ ಕಾರು ನಿಲ್ಲಿಸಿ ಕೀ ಕೊಟ್ಟು ಹೋಗಿದ್ದ. ಮರು ದಿನ ಬೆಳಗ್ಗೆ ನೋಡಿದಾಗ ಕಾರು ಇರಲಿಲ್ಲ. ನಂತರ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿ ಖದೀಮ ಕಾಂಪೌಂಡ್ ಹಾರಿ ಮನೆಗೆ ನುಗ್ಗಿ ಕೀ ತೆಗೆದುಕೊಂಡು ಕಾರನ್ನು ಕಳವು ಮಾಡಿರುವುದು ಗೊತ್ತಾಯಿತು ಎಂದು ಅವರು ಹೇಳಿದ್ದಾರೆ.

ಈ ಸಂಬಂಧ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರಿಗೂ ಪತ್ರ ಬರೆದಿರುವ ಶಿವಣ್ಣನವರು, ತಮ್ಮ ಕಾರು ಕಳವಾಗಿರುವ ಬಗ್ಗೆ ವಿಜಯನಗರ ಠಾಣೆಗೆ ದೂರು ನೀಡಿದ್ದಲ್ಲದೇ ಮೈಸೂರು ನಗರ ಪೊಲೀಸ್ ಆಯುಕ್ತರಿಗೂ ತಿಳಿಸಿದ್ದೆ. ತಕ್ಷಣ ಕಾರ್ಯೋನ್ಮುಖರಾದ ಅವರು, ಡಿಸಿಪಿ, ಎಸಿಪಿ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಅನ್ನು ಕಳುಹಿಸಿದ್ದರು. ಶ್ವಾನದಳ ಮತ್ತು ಬೆರಳಚ್ಚು ಘಟಕದ ಸಿಬ್ಬಂದಿಯೂ ಪರಿಶೀಲನೆ ನಡೆಸಿದ್ದಾರೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ವಿಜಯನಗರ 3ನೇ ಹಂತದಲ್ಲಿ ಕಳೆದ 20 ದಿನದಲ್ಲಿ 3 ಕಾರುಗಳನ್ನು ಕಳವು ಮಾಡಲಾಗಿದೆ. ಇದೊಂದು ವ್ಯವಸ್ಥಿತ ಕೃತವಾಗಿದ್ದು, ಸೂಕ್ತ ತನಿಖೆ ನಡೆಸಬೇಕೆಂದು ಗೃಹ ಸಚಿವರಿಗೆ ಅವರು ಮನವಿ ಮಾಡಿದ್ದಾರೆ.

'ಜಾನಿ ವಾಕರ್' ರೂವಾರಿ ಭಾರತ ಸಂಜಾತ ಇವಾನ್ ಮೆನಜೆಸ್ ನಿಧನ



ಲಂಡನ್: ವಿಶ್ವ ಲಿಕ್ಕರ್ ಮಾರುಕಟ್ಟೆಯಲ್ಲಿ ಡಿಯಾಜೀಯೋ ಸಂಸ್ಥೆಯನ್ನು ಮುಂಚೂಣಿಗೆ ತಂದು ನಿಲ್ಲಿಸಿ ಸೈ ಎನಿಸಿದ್ದ ಇವಾನ್ ಮ್ಯಾನುಯಲ್ ಮೆನೆಜಸ್ ಇಹಲೋಕದ ಪಯಣ ಮುಗಿಸಿದ್ದಾರೆ.

ಡಿಯಾಜೀಯೋದ ಸಿಇಒ ಆಗಿದ್ದ ಇವಾನ್ ಅಲ್ಸರ್ ಕಾಯಿಲೆಯಿಂದ ಬಳಲುತ್ತಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ನಿಧನರಾಗಿದ್ದಾರೆ. 63 ವರ್ಷ ವಯಸ್ಸಾಗಿದ್ದ ಅವರು ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಕೆಲ ವರ್ಷಗಳಿಂದ ಅವರಿಗೆ ಹೊಟ್ಟೆಯಲ್ಲಿ ಅಲ್ಸರ್ ಬಾಧಿಸುತ್ತಿತ್ತು ಲಂಡನ್‌ನ ಆಸ್ಪತ್ರೆಯಲ್ಲಿ ಅವರಿಗೆ ಹೊಟ್ಟೆಯಲ್ಲಿ ಅಲ್ಸರ್ ತೆಗೆಯಲು ತುರ್ತಾಗಿ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಅದು ಫಲಕಾರಿಯಾಗಲಿಲ್ಲ ಎನ್ನಲಾಗಿದೆ.

ಮೆನೆಜಸ್ ಸಾಧನೆ ಗಮನಾರ್ಹ: ಇವಾನ್ ಮ್ಯಾನುಯಲ್ ಮೆನೆಜಸ್ 1959 ಜುಲೈ 10ರಂದು ಪುಣೆಯಲ್ಲಿ ಜನಿಸಿದ್ದರು. ಅವರ ತಂದೆ ಮ್ಯಾನುಯಲ್ ಮೆನೆಜಸ್ ಅವರು ಭಾರತೀಯ ರೈಲ್ವೆ ಮಂಡಳಿಯ ಛೇರ್ಮನ್ ಆಗಿದ್ದರು. ದೆಹಲಿಯಲ್ಲಿ ಪದವಿ ಓದಿದ ಇವಾನ್, ಅಹ್ಮದಾಬಾದ್‌ನ ಐಐಎಂನಲ್ಲಿ ಎಂಬಿಎ ಪಡೆದರು. ಬಳಿಕ ಬ್ರಿಟನ್‌ನಲ್ಲಿ ಕೆಲ್ಲಾಗ್ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್‌ನಲ್ಲಿ ಉನ್ನತ ಶಿಕ್ಷಣ ಪಡೆದರು. ಇವಾನ್ ಮೆನೆಜಸ್ ಅವರ ಸಹೋದರ ವಿಕ್ಟರ್ ಮೆನೆಜಸ್ ಅವರು ಸಿಟಿ ಬ್ಯಾಂಕ್‌ನ ಛೇರ್ಮನ್ ಆಗಿದ್ದರು. ಇವಾನ್ ಅವರು ಬ್ರಿಟನ್ ಮತ್ತು ಅಮೆರಿಕದ ಪೌರತ್ವ ಹೊಂದಿದ್ದಾರೆ. ಭಾರತದ ಓಐಸಿ ಕಾರ್ಡ್ ಹೊಂದಿದ್ದಾರೆ. ತಮ್ಮ ಕಾಲೇಜು ಕಾಲದ ಗೆಳತಿಯಾಗಿದ್ದ ಶಿಬಾನಿ ಅವರನ್ನು ವಿವಾಹವಾಗಿರುವ ಇವಾನ್ ಅವರಿಗೆ ನಿಖಿಲ್ ಮತ್ತು ರೋಹಿಣಿ ಎಂಬಿಬ್ಬರು ಮಕ್ಕಳಿದ್ದಾರೆ.

ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗೆ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ



ಬೆಂಗಳೂರು: ರಾಜ್ಯದಲ್ಲಿ ಜೂ.12 ರಿಂದ ಆರಂಭವಾಗುವ 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್‌ಗಳಲ್ಲಿ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಉಚಿತ ಪ್ರಯಾಣದ ವ್ಯವಸ್ಥೆ ಮಾಡಲಾಗಿದೆ.

ರಾಜ್ಯಾದ್ಯಂತ ಜೂನ್ 12ರಿಂದ ಆರಂಭವಾಗಲಿವೆ. ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೇವೆಯನ್ನು ನೀಡಲಾಗುತ್ತಿದೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ಸಾರಿಗೆ ಬಸ್‌ಗಳು ಕೋರಿಕೆ ನಿಲುಗಡೆ ಮಾಡುವಂತೆ ಸಿಬ್ಬಂದಿಗಳಿಗೆ ಸೂಚನೆ ನೀಡಿದೆ. ಮುಖ್ಯವಾಗಿ ಪರೀಕ್ಷೆ ನಡೆಯುವ ದಿನಗಳಲ್ಲಿ ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು ತಮ್ಮ ಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರದವರೆಗೆ ಹೋಗಲು ಉಚಿತವಾಗಿ ಬಸ್ ಸೌಲಭ್ಯವನ್ನು ಪಡೆಯಬಹುದಾಗಿದೆ ಎಂದು ಸಾರಿಗೆ ಇಲಾಖೆ ತಿಳಿಸಿದೆ.

ಇನ್ನು ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಹೋಗುವಾಗ ಮತ್ತು ಹಿಂದಿರುವಾಗ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯ ಪ್ರವೇಶ ಪತ್ರವನ್ನು ತೋರಿಸಿ, ಸಾರಿಗೆ ಸಂಸ್ಥೆಯ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿಯ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಈ ಕುರಿತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಬಿಎಂಟಿಸಿ ಪ್ರಕಟಣೆಯಲ್ಲಿ ತಿಳಿಸಿವೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳನ್ನು ಜೂನ್ 12 ರಿಂದ ಜೂನ್ 19ರವರೆಗೆ ನಡೆಸುತ್ತಿದೆ. ಇದಕ್ಕೆ ಸಕಲ ಸಿದ್ಧತೆಯನ್ನು ಸಹ ಮಾಡಿಕೊಂಡಿದೆ. ಪೂರಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳು, ತಮ್ಮ ಶಾಲೆಗಳಿಗೆ ತೆರಳಿ ಪ್ರವೇಶ ಪತ್ರವನ್ನು ಪಡೆಯಬಹುದು.

ಪೂರಕ ಪರೀಕ್ಷೆ ವೇಳಾಪಟ್ಟಿ

ಜೂನ್–12: ಮೊದಲ ಭಾಷೆ: ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಇಂಗ್ಲಿಷ್ (NCERT), ಸಂಸ್ಕೃತ

ಜೂ.13: ವಿಜ್ಞಾನ, ರಾಜ್ಯಶಾಸ್ತ್ರ ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ, ಕರ್ನಾಟಕ /ಹಿಂದೂಸ್ತಾನಿ ಸಂಗೀತ

ಜೂ.14: ದ್ವಿತೀಯ ಭಾಷೆ: ಇಂಗ್ಲಿಷ್, ಕನ್ನಡ

ಜೂ.15: ಸಮಾಜ ವಿಜ್ಞಾನ

ಜೂ.16: ತೃತೀಯ ಭಾಷೆ: ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, NSQF ಪರೀಕ್ಷೆಯ ವಿಷಯಗಳು (ಐಟಿ, ಆಟೋಮೊಬೈಲ್, ಆರೋಗ್ಯ, ಸೌಂದರ್ಯ ಮತ್ತು ಸ್ವಾಸ್ಥ್ಯ)

ಜೂ.17: ಗಣಿತ/ಸಮಾಜಶಾಸ್ತ್ರ

ಜೂ.19: ಎಲಿಮೆಂಟ್ಸ್ ಆಫ್ ಮೆಕಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್–2, ಎಲಿಮೆಂಟ್ಸ್ ಆಫ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಎಲಿಮೆಂಟ್ಸ್ ಆಫ್ ಕಂಪ್ಯೂಟರ್ ಸೈನ್ಸ್, ಅರ್ಥಶಾಸ್ತ್ರ

ಬ್ಯಾಂಕಿಂಗ್ ಪರೀಕ್ಷೆಗೆ ತರಬೇತಿ ಶಿಬಿರ

ಮೈಸೂರು,ಜೂ.7(ಪಿಎಂ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಜೂ.8ರಂದು ಬ್ಯಾಂಕಿಂಗ್ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಶಿಬಿರ ಆಯೋಜಿಸಲಾಗಿದೆ.

ಮುಕ್ತ ಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಪಶ್ಚಿಮ ಬಂಗಾಳ ರಾಜ್ಯದ ಮಿಡ್ನಾಪುರ ವೆಸ್ಟ್‌ನ ಹೆಚ್ಚುವರಿ ಜಿಲ್ಲಾಧಿಕಾರಿ ಕೆಂಪ ಹೊನ್ನಯ್ಯ ಶಿಬಿರ ಉದ್ಘಾಟಿಸಲಿದ್ದಾರೆ. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದು, ವಿವಿಯ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ ಉಪಸ್ಥಿತರಿರುವರು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣ ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸತತ ಪರಿಶ್ರಮದಿಂದಷ್ಟೇ ಅರ್ಹತೆ ಗಳಿಸಲು ಸಾಧ್ಯ

ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದ ಸ್ವಾಮೀಜಿ ಅಭಿಮತ

ಮೈಸೂರು, ಜೂ.7(ಎಂಕೆ)– ಶಿಕ್ಷಣ ಅಂಕಗಳ ಹಿಂದೆ ಬೀಳುವುದಲ್ಲ. ಮೌಲ್ಯಗಳನ್ನು ಪಡೆಯುವುದಾಗಿದೆ. ಅರ್ಹತೆ ಸತತ ಪರಿಶ್ರಮದಿಂದ ದೊರೆಯಲಿದ್ದು, ಅದನ್ನು ಗೌರವಿಸುವುದು ಸಮಾಜದ ಜವಾಬ್ದಾರಿಯಾಗಿದೆ ಎಂದು ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದ ಸ್ವಾಮೀಜಿ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ಆಯೋಜಿಸಿದ್ದ 'ಟ್ರಿನಿಟಿ ಅಕಾಡೆಮಿಕ್ ಎಕ್ಸಲೆನ್ಸ್ ಅವಾರ್ಡ್' ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅರ್ಹತೆ ಎಂಬುದು ತಾನಾಗಿಯೇ ಉತ್ಪತ್ತಿಯಾಗುವುದಲ್ಲ ಕಠಿಣ ಸಾಧನೆಯ ಹಾದಿಯಲ್ಲಿ ಸಾಗಿದ ವ್ಯಕ್ತಿ ಮಾತ್ರ ಪಡೆಯಬಲ್ಲ ಎಂದು ತಿಳಿಸಿದರು.



ಸ್ವಾಮಿ ವಿವೇಕಾನಂದರು ತಿಳಿಸಿದಂತೆ ಜ್ಞಾನವೊಂದೇ ಅತ್ಯಂತ ಅಮೂಲ್ಯ ಹಾಗೂ ಅದರಿಂದಲೇ ಅರ್ಹತೆ ಸೃಷ್ಟಿಯಾಗಲಿದೆ. ಶಿಕ್ಷಣ ವ್ಯಕ್ತಿತ್ವ ರೂಪಿಸುವ ಮಾಂತ್ರಿಕ ಶಕ್ತಿ ಹಾಗೂ ನಮ್ಮಲ್ಲಿ ಈಗಾಗಲೇ ಇರುವ ಪರಿಪೂರ್ಣತೆಯನ್ನು ಜಾಗೃತಗೊಳಿಸಲಿದ್ದು, ಶಿಕ್ಷಣ ಪಡೆಯುವುದೇ ನಮ್ಮ ಗುರಿಯಾಗಬೇಕು ಎಂದು ತಿಳಿಸಿದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 621 ಅಂಕ ಪಡೆದ ಯರಗನಹಳ್ಳಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಎಸ್.ಅಜಯ್ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 592 ಅಂಕ ಪಡೆದ ರೋಹಿತ್ ಕಲ್ಯಾಣಪುರ್ ಅವರಿಗೆ 'ಮೈಸೂರು ಮಿಡ್‌ಟೌನ್ ಟ್ರಿನಿಟಿ ಅಕಾಡೆಮಿಕ್ ಎಕ್ಸಲೆನ್ಸ್ ಅವಾರ್ಡ್' ನೀಡಿ, ಗೌರವಿಸಲಾಯಿತು. ರೋಟರಿ ಮಿಡ್‌ಟೌನ್ ಅಧ್ಯಕ್ಷ ಎಂ.ಎಸ್.ನವೀನ್‌ಚಂದ್ರ, ಕಾರ್ಯದರ್ಶಿ ಎಸ್.ಕುಮಾರಸ್ವಾಮಿ, ಟ್ರಿನಿಟಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಅಧ್ಯಕ್ಷ ಎಲಿಝರ್ ಮಿಲ್ಟನ್, ಟ್ರಿನಿಟಿ ಕಾಲೇಜು ಪ್ರಾಂಶುಪಾಲರಾದ ಡಾ.ಶಾಮಾ ಇ.ಮಿಲ್ಟನ್ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಒತ್ತಡಕ್ಕೆ ಮಣಿಯದೆ ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳಿ

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹ

ಹೆಚ್.ಡಿ.ಕೋಟೆ, ಜೂ.7– ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ಪಕ್ಷವು ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳಲಿ, ಸಮುದ್ರಕ್ಕೆ ಹರಿಯುವ ಹೆಚ್ಚುವರಿ ಕಾವೇರಿ ನೀರನ್ನು ರಾಜ್ಯದ ಹಿತಾಶಕ್ತಿಗೆ ಬಳಸಿಕೊಳ್ಳಲಿ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದ್ದಾರೆ.

ತಾಲೂಕಿನ ಕಬಿನಿ ಜಲಾಶಯದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಭೆಯಲ್ಲಿ ಮಾತನಾಡಿದ ಅವರು, ಕಾವೇರಿ ಅಂತಿಮ ತೀರ್ಪಿನಲ್ಲಿ ಸೂಚಿಸಿರುವಂತೆ ತಮಿಳುನಾಡಿಗೆ ನೀರನ್ನು ಹರಿಸಿ, ಹೆಚ್ಚುವರಿ ನೀರನ್ನು ರಾಜ್ಯಕ್ಕೆ ಬಳಸಿಕೊಳ್ಳಲು ಮೇಕೆದಾಟು ಅಣೆಕಟ್ಟೆ ನಿರ್ಮಿಸಲು ರಾಜ್ಯ ಸರ್ಕಾರ ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳಬೇಕು ಎಂದರು.

ತಮಿಳುನಾಡಿನ ಒತ್ತಡ ಹಾಗೂ ಮುಲಾಜಿಗೆ ಮಣಿಯಬಾರದು. ಕಬಿನಿ ಅಚ್ಚುಕಟ್ಟು ವ್ಯಾಪ್ತಿಗೆ ಬರುವ ಎರಡನೇ ಹಂತದ ಯೋಜನೆ ಹಾಗೂ ಏತ ನೀರಾವರಿ ಯೋಜನೆಗಳನ್ನು ಶರವೇಗದಲ್ಲಿ ಕಾರ್ಯಗತಗೊಳಿಸಬೇಕು ಎಂದು ಒತ್ತಾಯಿಸಿದರು.

ಗೋ ಹತ್ಯೆ ನಿಷೇಧ ಕಾಯ್ದೆ: ಗೋವುಗಳ ರಾಜಕಾರಣವಾಗಬಾರದು. ಪಶು ಸಂಗೋಪನ ಸಚಿವರು ಕೋಣನಿಗೂ, ಹಸುವಿಗೆ ಹೋಲಿಕೆ ಮಾಡಿರುವುದು ಸರಿಯಲ್ಲ. ಹಸುಗಳು ರೈತರ ಬದುಕಿಗೆ ಆಸರೆಯಾಗಿ ಕಾಯಕ ಮಾಡುತ್ತವೆ. ನಾವು ಗೌರವ ಭಾವನೆಯಿಂದ ಪೂಜಿಸುತ್ತೇವೆ. ಇಂಥ ಪ್ರಾಣಿಗಳನ್ನು ಹತ್ಯೆ ಮಾಡಿದರೆ ಏನು ತಪ್ಪು ಎಂದು ಹೇಳುವುದು ಒಪ್ಪುವಂತದ್ದಲ್ಲ ಎಂದರು.

ಕಾನೂನಿನಲ್ಲಿರುವ ಅಡೆ–ತಡೆಗಳನ್ನು ನಿವಾರಿಸಿ ತಪ್ಪೇನಿಲ್ಲ. ಆದರೆ ಮೇಲಿನಂಥ ಇಂಥ ಹೇಳಿಕೆ ಸಚಿವರಿಗೆ ಶೋಭೆ ತರುವುದಿಲ್ಲ, ಕಾಡುಪ್ರಾಣಿಗಳ ಹಾವಳಿಯಿಂದ ಕಾಡಂಚಿನ ಭಾಗದ ರೈತರ ಬದುಕು ಭಯದಿಂದ ಕಾಡುತ್ತಿದೆ. ಕಾಡಿನ ಒಳಗೆ ಇರುವ ಎಲ್ಲಾ ರೆಸಾರ್ಟ್‌ಗಳು, ಮೋಜಿನ ತಾಣಗಳನ್ನು ಬಂದ್ ಮಾಡಲು ಗಣಿಗಾರಿಕೆಯನ್ನು ನಿಲ್ಲಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ದೆಹಲಿಯಲ್ಲಿ ಹೋರಾಟ ನಡೆಸುತ್ತಿರುವ ಮಹಿಳಾ ಕುಸ್ತಿಪಟುಗಳ ಹೋರಾಟವನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿ ಹೋರಾಟಗಾರರಿಗೆ ನ್ಯಾಯ ಕೊಡಿಸಲಿ ಎಂದು ಒತ್ತಾಯಿಸಿದರು.

ಸಭೆಯಲ್ಲಿ ಅತ್ತಹಳ್ಳಿ ದೇವರಾಜ್, ಪಿ.ಸೋಮಶೇಖರ್, ಕೆಂಡಗಣ್ಣ ಸ್ವಾಮಿ, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಬಿದರಹಳ್ಳಿ ಮಹೇಶ್, ಮಹಿಳಾ ಜಿಲ್ಲಾಧ್ಯಕ್ಷೆ ಕಮಲಮ್ಮ, ಲಕ್ಷ್ಮಿಪುರ ವೆಂಕಟೇಶ್, ಕುರುಬೂರು ಸಿದ್ದೇಶ್, ಹಂಪಾಪುರ ರಾಜೇಶ್, ಗೌರಿಶಂಕರ್ ಪ್ರದೀಪ್, ಕಿರಗಸೂರು ಪ್ರಸಾದ್ ನಾಯಕ, ಹೆಗ್ಗೂರು ರಂಗರಾಜ್, ಕಾಟೂರು ಮಹಾದೇವಸ್ವಾಮಿ, ಕೋಟೆ ಸುರೇಶ್ ಶೆಟ್ಟಿ, ಸುನಿಲ್ ಕುಮಾರ್, ಅಂಬಳೆ ಮಂಜುನಾಥ್, ಎಗ್ಗೊಟಾರ ಶಿವಸ್ವಾಮಿ, ಮಹಾದೇವು, ಚುಂಚರಾಯನ ಹುಂಡಿ ನಂಜುಂಡಸ್ವಾಮಿ, ಸಿದ್ದರಾಮು, ಯಾಕನೂರು ರಾಜೇಶ್, ಕರುವಟ್ಟಿ ಉಮೇಶ್ ಇದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಜಲಾಶಯದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ರಾಜ್ಯ ರೈತ ಸಂಘದ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡುತ್ತಿರುವುದು.

ಮಾಡ್ರಹಳ್ಳಿಯಲ್ಲಿ ವನ ಮಹೋತ್ಸವ



ತಿ.ನರಸೀಪುರ, ಜೂ.7– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ತಾಲೂಕಿನ ಮೂಗೂರು ಹೋಬಳಿಯ ಮಾಡ್ರಹಳ್ಳಿ ಸರ್ಕಾರಿ ಕಟ್ಟೆ ಕೆರೆ ಆವರಣದಲ್ಲಿ ವನ ಮಹೋತ್ಸವ ಗಿಡ ನೆಡುವ ಕಾರ್ಯಕ್ರಮ ನಡೆಯಿತು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್, ಅರಣ್ಯ ಹಾಗೂ ಕೃಷಿ ಇಲಾಖೆ, ಸಹಯೋಗದೊಂದಿಗೆ ಕೆರೆ ಅಂಗಳದಲ್ಲಿ ಗಿಡ ನಾಟಿ ಕಾರ್ಯಕ್ರಮ ಹಾಗೂ ವನಮಹೋತ್ಸವ ಹಾಗೂ ವಿವಿಧ ಹಣ್ಣಿನ, ನೆರಳು ನೀಡುವ ಸಸಿಗಳನ್ನು ನಾಟಿ ಮಾಡಲಾಯಿತು.

ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾಡ್ರಹಳ್ಳಿ ಪಟ್ಟದ ಮಠದ ಶಾಂತವೀರ ಮಲ್ಲಿಕಾರ್ಜುನ ಸ್ವಾಮೀಜಿಯವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ತಾಲೂಕು ತಹಶೀಲ್ದಾರ್ ಸಿ.ಜಿ. ಗೀತಾ, ತಾಪಂ ಇಓಸಿ. ಕೃಷ್ಣರವರು, ಆರೋಗ್ಯ ಅಧಿಕಾರಿ ಗೋವಿಂದರಾಜು, ಕೃಷಿ ಸಹಾಯಕ ನಿರ್ದೇಶಕಿ ಸುಹಾಸಿನಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಹನುಮಂತಪ್ಪರವರು ಹಾಗೂ ವಿವಿಧ ಇಲಾಖೆ ಅಧಿಕಾರಿ ವೃಂದದವರು, ರೈತ ಬಾಂಧವರು, ಗ್ರಾಮಸ್ಥರು ಭಾಗವಹಿಸಿದ್ದರು.

ನಾಳೆ ದೊಡ್ಡಮ್ಮ ತಾಯಿ ರಥೋತ್ಸವ



ಪಿರಿಯಾಪಟ್ಟಣ, ಜೂ.7– ತಾಲೂಕಿನ ರಾವಂದೂರು ಹೋಬಳಿಯ ಅರೇನಹಳ್ಳಿ ಗ್ರಾಮದಲ್ಲಿ ಶ್ರೀ ದೊಡ್ಡಮ್ಮ ತಾಯಿ ರಥೋತ್ಸವ ಜೂ.9ರಂದು ನಡೆಯಲಿದೆ.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು ಊರ ಹೊರಗೆ ಇರುವ ದೇವಾಲಯದವರೆಗೆ ಸಾಗುತ್ತದೆ. ಅಕ್ಕಪಕ್ಕದ ಊರುಗಳ ಭಕ್ತಾದಿಗಳು ಭಾಗವಹಿಸುವಂತೆ ಅರೇನಹಳ್ಳಿ ದೊಡ್ಡಮ್ಮ ತಾಯಿ ಭಕ್ತಮಂಡಳಿಯವರು ಕೋರಿದ್ದಾರೆ.

ಮರು ಮೌಲ್ಯಮಾಪನದಿಂದ ದೊರೆತ ಪ್ರಥಮ ಸ್ಥಾನ



ಪಿರಿಯಾಪಟ್ಟಣ, ಜೂ.7– ಮರು ಮೌಲ್ಯಮಾಪನದಿಂದ ವಿದ್ಯಾರ್ಥಿನಿಯೊಬ್ಬರು ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚುವರಿ ಅಂಕಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ತಾಲೂಕಿನ ಬೆಟ್ಟದಪುರದ ಡಿಟಿಎಮ್‌ಎನ್ ಶಾಲೆಯ ಸೌಜನ್ಯ ಆರ್.ಗೌಡ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 610 ಅಂಕ ಪಡೆದಿದ್ದಳು. ಆದರೆ ವಿದ್ಯಾರ್ಥಿನಿ ತಾನೂ ಬರೆದಿರುವ ಉತ್ತರಕ್ಕೆ ಕಡಿಮೆ ಅಂಕ ಬಂದಿದೆ ಎಂದು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದರು. ಮೌಲ್ಯಮಾಪನ ನಂತರ 616 ಅಂಕಗಳು ಬಂದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಈಕೆ ಶಿಕ್ಷಕ ಚಪ್ಪರದಹಳ್ಳಿ ರವಿಗೌಡ ಪುತ್ರಿ.

ಹಜ್ ಯಾತ್ರಿಗಳಿಗೆ ತರಬೇತಿ ಶಿಬಿರ



ಹುಣಸೂರು, ಜೂ.7– ಹಜ್ ಯಾತ್ರೆಗೆ ತೆರಳುವ ಯಾತ್ರಿಗಳಿಗೆ ನಗರದ ಶಬ್ಬೀರ್ ಬಡಾವಣೆಯ ಜಾಮೀಯಾ ಶಾದಿ ಮಹಲ್‌ನಲ್ಲಿ ತರಬೇತಿ ಶಿಬಿರ ಆಯೋಜಿಸಲಾಗಿತ್ತು. ಅಲ್ಹಜ್ ಸೈಯದ್, ಅಬ್ದುಲ್ ಘನಿ ಅತ್ತಾರಿ, ಶಾಆಲಂ ಹಜ್ ಯಾತ್ರಿಗಳಿಗೆ ವಿಶೇಷ ಪ್ರವಚನ ನೀಡಿ ನಿಮ್ಮ ಯಾತ್ರೆ ಯಾವುದೇ ತೊಂದರೆಗಳಿಲ್ಲದೇ ಸುಖಕರವಾಗಿರಲಿ ಎಂದು ಆಶೀರ್ವಚನ ನೀಡಿದರು. ಈ ವೇಳೆ ಯಾತ್ರಿಗಳಾದ ಜಹಾರ್ ಅಹಮದ್, ಶರೀಫ್, ಜಕಾವುಲ್ಲಾ ಖಾನ್, ಜಾಗೀರ್ದಾರ್, ಬಾಬು ಅಬ್ರಾರ್, ಇಕ್ಬಾಲ್ ಬೇಗ್, ಇಬ್ರಾಹಿಂ ಅವರನ್ನು ಸನ್ಮಾನಿಸಲಾಯಿತು. ಜಾಮೀಯಾ ಮಸೀದಿ ಸಮಿತಿ ಕಾರ್ಯದರ್ಶಿ ಶಹಾಜಮ, ಸದಸ್ಯರಾದ ಬಷೀರ್ ಅಹಮದ್, ಹಜರತ್ ಜಾನ್, ಅಲಿಖಾನ್ ಮತ್ತಿತರರಿದ್ದರು.

ಅನಿಮಿಯಾ ಮುಕ್ತಗೊಳಿಸಲು ಸಾರ್ವಜನಿಕರು ಕೈ ಜೋಡಿಸಿ

ಮದರ್‌ಹುಡ್ ಆಸ್ಪತ್ರೆ ಮುಖ್ಯಸ್ಥೆ ಡಾ.ಸೋನಿಯಾ ಮಂದಪ್ಪ

ನಂಜನಗೂಡು, ಜೂ.7– ಪುರುಷರಿಗಿಂತ ಮಹಿಳೆಯರಲ್ಲಿ ರಕ್ತಹೀನತೆ ಸಮಸ್ಯೆ ಹೆಚ್ಚಾಗಿದೆ. ಹೀಗಾಗಿ ಅನಿಮಿಯಾ ಮುಕ್ತಗೊಳಿಸಲು ಸಾರ್ವಜನಿಕರು ಕೈ ಜೋಡಿಸಬೇಕು ಎಂದು ಮದರ್‌ಹುಡ್ ಆಸ್ಪತ್ರೆ ಮುಖ್ಯಸ್ಥೆ ಡಾ.ಸೋನಿಯಾ ಮಂದಪ್ಪ ತಿಳಿಸಿದರು.

ತಾಲೂಕಿನ ಇಮ್ಮಾವು ಗ್ರಾಮದಲ್ಲಿ ಮಮ ಮಿಲ್ಸ್ ಸೇವಾ ಸಂಸ್ಥೆ ಮತ್ತು ಮೈಸೂರಿನ ಮದರ್‌ಹುಡ್ ಆಸ್ಪತ್ರೆ ಸಹಯೋಗದಲ್ಲಿ ಏರ್ಪಡಿಸಿದ್ದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ನೂರರಲ್ಲಿ 20 ಮಹಿಳೆಯರಿಗೆ ರಕ್ತಹೀನತೆ ಸಮಸ್ಯೆ ಕಾಡುತ್ತಿದೆ. ಇದರಿಂದ ಗರ್ಭಿಣಿಯಾದ ವೇಳೆ ಅಥವಾ ಹೆರಿಗೆ ನಂತರ ತಾಯಿ ಮರಣ ಪ್ರಕರಣ ಕಂಡು ಬರುತ್ತಿವೆ. ತಾಯಿ ಮರಣ ಪ್ರಮಾಣ ತಪ್ಪಿಸಲು ಸರ್ಕಾರ 2011ರಿಂದಲೇ ಅನಿಮಿಯಾ ಮುಕ್ತ ಭಾರತ ಸಂಕಲ್ಪಕ್ಕೆ ಮುಂದಾಗಿದ್ದು, ವೈದ್ಯಕೀಯ ಸಿಬ್ಬಂದಿಗಳು ಮಹಿಳೆ ಮತ್ತು ಪುರುಷರನ್ನು ಕಡ್ಡಾಯವಾಗಿ ರಕ್ತದಮಟ್ಟದ ಪರೀಕ್ಷೆಗೆ ಒಳಪಡಿಸಿ ರಕ್ತಹೀನತೆ ಸಮಸ್ಯೆ ಕಂಡು ಬಂದಲ್ಲಿ ಉಚಿತವಾಗಿ ಪೌಷ್ಟಿಕಾಂಶದ ಮಾತ್ರೆಗಳನ್ನು ನೀಡುವುದನ್ನು ಕಡ್ಡಾಯಗೊಳಿಸಿದೆ ಮದರ್‌ಹುಡ್ ಆಸ್ಪತ್ರೆಯಲ್ಲಿಯೂ ಸಹ ಪ್ರತಿ ತಿಂಗಳ 12 ರಂದು ಹಿಮೋಗ್ಲೋಬಿನ್ ಮಟ್ಟ ಪರೀಕ್ಷೆಯನ್ನು ಉಚಿತವಾಗಿ ನಡೆಸಲಾಗುತ್ತದೆ. ಮಹಿಳೆಯರು ಕಡ್ಡಾಯವಾಗಿ ಪೌಷ್ಟಿಕಾಂಶದ ಮಾತ್ರೆ ಸೇವನೆ ಜೊತೆಗೆ ಪೌಷ್ಟಿಕ ಆಹಾರ ಸೇವಿಸುವ ಮೂಲಕ ಅನಿಮಿಯಾ ಮುಕ್ತ ಭಾರತವನ್ನಾಗಿಸಲು ಸಹಕರಿಸಬೇಕು ಎಂದರು.



ಹೆಚ್ಚಿನ ರಾಸಾಯನಿಕ ಬಳಕೆ ಮತ್ತು ಆಹಾರ ಪದ್ಧತಿಯಿಂದಾಗಿ ಪೌಷ್ಟಿಕಾಂಶದಿಂದ ದೂರವಾಗಿ ಚರ್ಮದ ಸಮಸ್ಯೆ, ಮೂಳೆ, ನರದೌರ್ಬಲ್ಯದಂತಹ ಅನಾರೋಗ್ಯ ವಾತಾವರಣದಲ್ಲಿ ಬದುಕುವಂತಾಗಿದೆ. ನಮ್ಮ ಮುಂದಿನ ಪೀಳಿಗೆಯ ಸ್ಥಿರ ಆರೋಗ್ಯಕ್ಕಾಗಿ, ಆರೋಗ್ಯಕರ ಸಮಾಜ ನಿರ್ಮಾಣದ ಹಿತದೃಷ್ಟಿಯಿಂದ ಗರ್ಭಿಣಿ, ಬಾಣಂತಿಯರಿಗೆ 9 ತಿಂಗಳು ಪೌಷ್ಟಿಕಯುಕ್ತಆಹಾರ, ಚಿಕಿತ್ಸೆ ನೀಡಿ ಉತ್ತಮ ಪೋಷಣೆ ಮಾಡಿ ಆರೈಕೆ ಮಾಡಬೇಕು. ವೈದ್ಯಕೀಯ ಸಿಬ್ಬಂದಿ ಮತ್ತು ವೈದ್ಯರಿಗೆ ಸಹಕರಿಸಬೇಕು ಎಂದು ಕರೆ ನೀಡಿದರು.

ಮಮ ಮಿಲ್ಸ್ ಸಂಸ್ಥಾಪಕಿ ಅನಿತಾ ಸದಾನಂದ ಮಾತನಾಡಿ, ಗ್ರಾಮೀಣ ಪುರುಷ ಮತ್ತು ಮಹಿಳೆಯರಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಸಂಕಲ್ಪದೊಂದಿಗೆ ಮಮ ಮಿಲ್ಸ್ ಮೈಸೂರು ಭಾಗದ ಎಲ್ಲೆಡೆ ಉಚಿತ ಆರೋಗ್ಯ ತಪಾಸಣೆ ಶಿಬಿರಗಳನ್ನು ಏರ್ಪಡಿಸಿ ಜಾಗೃತಿ ಮೂಡಿಸಲಾಗುತ್ತಿದೆ ಮತ್ತು ಮದರ್‌ಹುಡ್ ಆಸ್ಪತ್ರೆ ನೆರವಿನೊಂದಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

ಇದೇ ವೇಳೆ ಹುಳಿಮಾವು ಗ್ರಾಪಂ ಅಧ್ಯಕ್ಷೆ ನೀಲಮ್ಮ, ಉಪಾಧ್ಯಕ್ಷ ರಮೇಶ್, ವೈದ್ಯಕೀಯ ಸಿಬ್ಬಂದಿಗಳಾದ ರಮ್ಯ, ರವಿ, ಗೋಪಿ, ಮುಖಂಡರಾದ ವೆಂಕಟೇಗೌಡ, ಪಿಡಿಓ ಮಹದೇವಸ್ವಾಮಿ, ಮದನ್, ಮಂಜು ಸೇರಿದಂತೆ ಇತರರಿದ್ದರು.

ಪರಿಸರ ದಿನಾಚರಣೆ

ಹೆಚ್.ಡಿ.ಕೋಟೆ, ಜೂ.7– ತಾಲೂಕಿನ ತುಂಬಸೋಗೆಯ ಎಂಎಂಕೆ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತುಂಬಸೋಗೆ ಪಿಡಿಓ ಮಧುರ ಪರಿಸರ ನಮ್ಮೆಲ್ಲರ ಆದ್ಯ ಕರ್ತವ್ಯ. ಮೊದಲು ನಾವು ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣ ಮಾಡಬೇಕು ಎಂದ ಅವರು, ಒಂದು ಮರ ಕಡಿದರೆ 10 ಮರಗಳನ್ನು ನೆಡುವ ಮೂಲಕ ಪರಿಸರ ಉಳಿಸಬೇಕು ಎಂದರು.

ಅರಣ್ಯ ಸಂರಕ್ಷಣಾಧಿಕಾರಿ ಶಿವರಾಮು ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನಾ ವಿದ್ಯಾರ್ಥಿಗಳು ತುಂಬಸೋಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಜಾಥಾ ನಡೆಸಿದರು.

ಪ್ರಾಂಶುಪಾಲ ಎಸ್.ಪಿ. ಪ್ರಕಾಶ್, ನವ್ಯ, ಸಿದ್ದಾರ್ಥ, ಸಿದ್ದರಾಜು, ಪ್ರಸನ್ನ, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ತಂಬಾಕು ಉತ್ಪನ್ನ ಮಾರಾಟ ಮಾಡದಂತೆ ಅರಿವು ಮೂಡಿಸಿ

ಹೆಚ್.ಡಿ.ಕೋಟೆ, ಜೂ.7– ದಿನಸಿ ಅಂಗಡಿ, ಬೇಕರಿ, ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡದಂತೆ ಕರಪತ್ರಗಳನ್ನು ನೀಡಿ ಅರಿವು ಮೂಡಿಸಲು ಎಲ್ಲ ಇಲಾಖೆ ಅಧಿಕಾರಿಗಳಿಗೆ ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್ ಸೂಚಿಸಿದ್ದಾರೆ.

ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ತಹಶೀಲ್ದಾರ್ ಮಹೇಶ್, ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ಜೆರಾಲ್ಡ್ ಅವರುಗಳ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಡಾ.ರವಿಕುಮಾರ್, ಪ್ರತಿ ಮಾಹೆ ಎಲ್ಲಾ ಇಲಾಖೆಗಳ ಸಮನ್ವಯತೆಗಳೊಂದಿಗೆ ಕನಿಷ್ಠ ಒಂದು ಬಾರಿ ಕೋಟ್ಪಾ ದಾಳಿಯನ್ನು ಮಾಡಿ ವರದಿ ನೀಡಲು ಎಲ್ಲಾ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.



ತಾಲೂಕು ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಡಾ. ರವಿಕುಮಾರ್ ಮಾತನಾಡಿದರು.

ಮುಂದಿನ ತ್ರೈಮಾಸಿಕ ಸಭೆಯ ಒಳಗೆ ತಾಲೂಕಿನ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆಗಳನ್ನಾಗಿ ಘೋಷಿಸಲು ಶಿಕ್ಷಣ ಇಲಾಖೆಗೆ ಮುಂದಾಗಬೇಕು. FCTC 5.3 ರ ಅನುಸೂಚಿಯ ಮೇರೆಗೆ ತಾಲೂಕಿನಲ್ಲಿ ತಂಬಾಕು ಬೆಳೆಯ ವಾರ್ಷಿಕ ಶೇಕಡ 5.ರಷ್ಟು ಕಡಿಮೆಗೊಳಿಸಬೇಕೆಂದು ಇದರ ಅನ್ವಯ ತೋಟಗಾರಿಕೆ ಮತ್ತು ಕೃಷಿ ಇಲಾಖೆಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಹೇಳಿದರು.

ಮುಂದಿನ ತ್ರೈಮಾಸಿಕ ಪ್ರಗತಿ ಪರಿಶೀಲನೆ ಸಭೆ ಒಳಗೆ ಗ್ರಾಮೀಣ ಅಭಿವೃದ್ಧಿ ಇಲಾಖೆ ವತಿಯಿಂದ ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಒಂದು ಹಳ್ಳಿಯನ್ನು ತಂಬಾಕು ಮುಕ್ತ ಹಳ್ಳಿ ಎಂದು ಘೋಷಿಸಿ ವರದಿಯನ್ನು ನೀಡಲು ಸೂಚಿಸಲಾಯಿತು.

ಸಭೆಯಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ರಂಗಸ್ವಾಮಿ, ಪುರಸಭೆ ಮುಖ್ಯಸ್ಥ ಸುರೇಶ್, ಜಿಲ್ಲಾ ಸಲಹೆಗಾರರಾದ ಶಿವಕುಮಾರ್, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ, ಇನ್ನಿತರ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿವರ್ಗ ಹಾಜರಿದ್ದರು.

ತಿ.ನರಸೀಪುರ, ವರುಣ ಅಭಿವೃದ್ಧಿಗಾಗಿ ಕೈಜೋಡಿಸೋಣ

ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಕರೆ

ತಿ.ನರಸೀಪುರ, ಜೂ.7– ತಿ.ನರಸೀಪುರ ಹಾಗೂ ವರುಣ ಕ್ಷೇತ್ರಗಳನ್ನು ಸಾವಿರಾರು ಕೋಟಿ ರೂ.ಗಳ ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿ ಪಡಿಸಿರುವ ಅಭಿವೃದ್ಧಿಯ ಹರಿಕಾರರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪನವರ ಜೊತೆ ಅಭಿವೃದ್ಧಿಗಾಗಿ ಕೈಜೋಡಿಸೋಣ ಎಂದು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

ಪಟ್ಟಣದಲ್ಲಿ ಖಾಸಗಿ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜ್ ನೇತೃತ್ವದಲ್ಲಿ ಸನ್ಮಾನಿಸಿ ನಂತರ ಮಾತನಾಡಿದ ಅವರು, ಕ್ಷೇತ್ರದ ಅಭಿವೃದ್ಧಿ ಹಾಗೂ ಬಡಜನತೆಯ ಕುಟುಂಬಗಳ ಏಳಿಗೆಗಾಗಿ ಕಾಂಗ್ರೆಸ್ ಸದಾ ಸಿದ್ಧವಿದೆ ಎಂದರು. ಕಾಂಗ್ರೆಸ್ ಪಕ್ಷ ಬಿಟ್ಟರೆ ಯಾವುದೇ ಪಕ್ಷದವರು ನಿಮಗೆ ಸಹಾಯ ಮಾಡಲ್ಲ, ಬೇರೆ ಯಾರೂ ಕ್ಷೇತ್ರದ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ, ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷ ಹೊರತುಪಡಿಸಿ ಯಾವುದೇ ಪಕ್ಷದಿಂದಲೂ ಸಾಧ್ಯವಿಲ್ಲ ಎಂದರು.

ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಮಾತನಾಡಿ, ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ ರೀತಿಯಲ್ಲಿ ಹೋರಾಟ ಮಾಡಬೇಕೆಂದು ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ ಮತ್ತು ನಾನು ನಿರ್ಧರಿಸಿದ್ದೇವೆ. ಕಾಂಗ್ರೆಸ್ ಬಡಜನರ ರಕ್ಷಣೆಗೆ ಇದೆ. ಈ ಮಾತು ಕೆಲವರಿಗೆ ಇಷ್ಟ ಆಗಬಹುದು, ಆಗದಿರಬಹುದು. ಆದರೆ ಇಂದು ರಾಜ್ಯದ ಜನತೆಗೆ ಕಾಂಗ್ರೆಸ್ ಅನಿವಾರ್ಯವಾಗಿದೆ ಎಂದರು.



ಸಚಿವ ಡಾ.ಎಚ್.ಸಿ. ಮಹದೇವಪ್ಪ, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಅವರನ್ನು ಅಭಿನಂದಿಸುತ್ತಿರುವುದು

ರಾಜಕೀಯ ಉದ್ದೇಶ ಜನತೆಯ ಮುಖದಲ್ಲಿ ನಗು ನೋಡಬೇಕೆಂಬುದಾಗಿದ್ದು, ಎಲ್ಲ ಬಡವರು ಸ್ವಾಭಿಮಾನದಿಂದ ಬದುಕಬೇಕೆಂಬ ಉದ್ದೇಶ ಹೊಂದಲಾಗಿದೆ. ರಾಜಕೀಯ ಅಧಿಕಾರ ಕೇಳುವುದು ಅದಕ್ಕಾಗಿಯೇ ಎಂದ ಅವರು, ಮುಂದಿನ 5 ವರ್ಷಗಳಲ್ಲಿ ಆಗಬಹುದಾದ ಎಲ್ಲ ಕೆಲಸಗಳನ್ನು ಮಾಡಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಸಿದ್ದರಾಮಯ್ಯ ರಾಜ್ಯ ಕಂಡ ಧೀಮಂತ ನಾಯಕರು. ರಾಜ್ಯದ ಜನತೆಗೆ ಅವರು ನೀಡಿದ ಕೊಡುಗೆ ಅಪಾರವಾಗಿದ್ದು, ಬಡವರ ಪರವಾದ ಆಶಾಕಿರಣವಾಗಿದ್ದ ಅವರು ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್, ಕ್ಷೀರಭಾಗ್ಯ ಸೇರಿದಂತೆ ಅನೇಕ ಜನಪರವಾದ ಯೋಜನೆಗಳನ್ನು ಜಾರಿಗೆ ತಂದು ಜನತೆಯ ಕಷ್ಟ–ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡಿದ್ದಾರೆ. ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಿದ್ದಾರೆ ಎಂದು ಹೇಳಿದರು. ಪುರಸಭಾ ಮಾಜಿ ಸದಸ್ಯ ಪುಟ್ಟಸ್ವಾಮಿ, ನಾಗರಾಜು, ರವಿ ಹಾಗೂ ಸಂಘದ ನಿರ್ದೇಶಕರು ಸೇರಿದಂತೆ ಮತ್ತಿತರರು ಹಾಜರಿದ್ದರು.



ಕಂಪಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಮಕ್ಕಳಿಗೆ ಪಠ್ಯಪುಸ್ತಕ ಮತ್ತು ಸಮವಸ್ತ್ರ ವಿತರಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ಸದಸ್ಯರಾದ ಈರಣ್ಣ, ಶಹಜಾನ್, ಮುಖ್ಯಶಿಕ್ಷಕ ಮಹದೇವಮ್ಮ, ಶಿವರಾಜ್, ಯಶ್ವಂತ್ ಹಾಜರಿದ್ದರು.



ಬನ್ನೂರಿನ ರಸ್ತೆಗಳಲ್ಲಿ ಹಾಕಿರುವ ಅನಧಿಕೃತ ಬ್ಯಾನರ್‌ಗಳನ್ನು ಪುರಸಭಾ ಸಿಬ್ಬಂದಿವರ್ಗ ತೆರವುಗೊಳಿಸುತ್ತಿರುವುದು.

ಮನೆಯಿಂದ ಹೊರಗೆ ಹೋದ ವ್ಯಕ್ತಿ ನಾಪತ್ತೆ



ಸುತ್ತೂರು, ಜೂ.7– ನಂಜನಗೂಡು ತಾಲೂಕು ಚಿಕ್ಕಯ್ಯನಛತ್ರ ಹೋಬಳಿ ಬೊಕ್ಕಹಳ್ಳಿ ಗ್ರಾಮದ ಮಹೇಶ ಎಂ. ಎಂಬಾತ ಕಾಣೆಯಾಗಿದ್ದು, ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮನೆಯಿಂದ ಹೊರ ಹೋದವರು ಇಲ್ಲಿಯವರೆಗೂ ಮನೆಗೆ ಹಿಂದಿರುಗಿಲ್ಲ ಎಂದು ಅವರ ಮಗ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಮೊ.ನಂ.9900372577, 6364618075 ಸಂಪರ್ಕಿಸಲು ಕೋರಲಾಗಿದೆ.

ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಸಾದ್ ನಿಧನ



ಭೇರ್ಯ, ಜೂ.7– ನಿವೃತ್ತ ಕಾರ್ಯಪಾಲಕ ಅಭಿಯಂತರರಾದ ತಿಪ್ಪೂರು ಗ್ರಾಮದ ಟಿ.ಡಿ.ಪ್ರಸಾದ್ ತೀವ್ರ ಹೃದಯಾಘಾತದಿಂದ ನಿಧನರಾದರು.

ದಿವಂಗತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ಸ್ವಗ್ರಾಮ ತಿಪ್ಪೂರಿನಲ್ಲಿ ನಡೆಯಿತು. ಪ್ರಸಾದ್ ನಿಧನಕ್ಕೆ ಮಾಜಿ ಸಚಿವ ಸಾ.ರಾ.ಮಹೇಶ್, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ತಾಲೂಕು ಕಸಾಪ ಅಧ್ಯಕ್ಷ ಡಿಂಡಿಮ ಶಂಕರ್, ಜಿಲ್ಲಾ ಜಾನಪದ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಜಿ.ಪ್ರಕಾಶ್ ಸೇರಿದಂತೆ ಅನೇಕರು ಸಂತಾಪ ಸೂಚಿಸಿದ್ದಾರೆ.

75ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು



ಶುಭಕೋರುವವರು:
ಮಕ್ಕಳಾದ ನಿರಂಜನ್, ತೋಟೇಶ್ ಹಾಗೂ ಕುಟುಂಬವರ್ಗ

ಶ್ರೀ ವೃಷಬೇಂದ್ರಪ್ಪ
ಮಲ್ಲಿಗೆಹಳ್ಳಿ, ಯಳಂದೂರು ತಾಲ್ಲೂಕು

17ನೇ ವರ್ಷದ ಚಿರಸ್ಮರಣೆ



ಶ್ರೀಮತಿ ಶಿವಮ್ಮರವರು

ನೀವು ನಮ್ಮನ್ನಗಲಿ ಇಂದಿಗೆ 17 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಪತಿ: ಪೈಲ್ವಾನ್ ದೇಶಿಗೌಡರು ಮತ್ತು ಮಕ್ಕಳು,
ತಾಯಿ: ಲಕ್ಷ್ಮಮ್ಮ, ಅಣ್ಣ ತಮ್ಮಂದಿರು, ಅಕ್ಕ ತಂಗಿಯರು, ಅಳಿಯಂದಿರು ಮತ್ತು ಸೊಸೆಯಂದಿರು, ಮೊಮ್ಮಕ್ಕಳು

8ನೇ ವರ್ಷದ ಪುಣ್ಯಸ್ಮರಣೆ



ಜನನ: 23.07.1955 ಮರಣ: 08.06.2015

ಶ್ರೀ ಡಿ. ತಮ್ಮಯ್ಯ M.Sc.,
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

ನೀವು ನಮ್ಮನ್ನು ಅಗಲಿ ಇಂದಿಗೆ ಎಂಟು ವರ್ಷಗಳಾದರೂ ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿರುವಿರಿ, ದೇವರು ನಿಮ್ಮ ಆತ್ಮಕ್ಕೆ ಶಾಂತಿ ಕೊಡಲೆಂದು ಪ್ರಾರ್ಥಿಸುತ್ತೇವೆ.

ಇಂತಿ: ಕುಟುಂಬವರ್ಗ ಮತ್ತು ಬಂಧುಮಿತ್ರರು
ಫೋನ್: 9964514442